ಶಾಂತಿ ನಿರ್ಝರ ಮೃದುಹಾಸ್ಯೇ।
ತೃಪ್ತಪ್ರಾಣಮನ ದೀನಭಕತ
ನಿತ್ಯಾಮೃತ ಪ್ರೇಮ ಮಧು ದಾಸ್ಯೇ॥

ಪಂಚವಟೀ ತಟ ಧ್ಯಾನ ಧಾರಣ ರತ
ರಮ್ಯ ಮೂರತಿ ರೂಪಧಾರೀ।
ಭಕ್ತೇ ಅಭಯ ತವ ದೇಹೊ ಪದಪಂಕಜೇ
ಜಯ ಜಯ ದಯಾಲ್ ಭವಾಮಯವಾರೀ॥

ಕೀರ್ತನ – ಕವಾಲೀ

ಗಾಹೋರೇ ಜಯ ಜಯ ರಾಮಕೃಷ್ಣ ನಾಮ್॥

ಆಜಿ ಯೇ ಶುಭದಿನ ಮಿಲಿಯೇ ಭಕತಜನ।
ಗಾಹೋ ಗಾಹೋ ರಾಮಕೃಷ್ಣ ನಾಮ್॥

ರಾಮಕೃಷ್ಣ ನಾಮೇ ರಾಮಕೃಷ್ಣ ಪ್ರೇಮೇ।
ಮಾತಿಯಾ ಉಠುಕ್ ಧರಾಧಾಮ್॥

ಹರಿತೇ ಭೂಭಾರ್ ಪ್ರೇಮ ಅವತಾರ್।
ಪ್ರಭು ರಾಮಕೃಷ್ಣ ಗುಣಧಾಮ್॥

ಜೇಇ ರಾಮ ಜೇಇ ಕೃಷ್ಣ ವಿಶ್ವಗುರು ರಾಮಕೃಷ್ಣ।
ಏಕಾಧಾರೇ ಶ್ಯಾಮಾ-ಶಿವ-ಶ್ಯಾಮ್॥

ಬೇಹಾಗ್ – ತ್ರಿತಾಲ

ಹೇ ಮೋರ್ ಠಾಕೂರ್ ರಾಮಕೃಷ್ಣ
ಶಾಂತಿರ ಪಾರಾವಾರ್।
ಅಜಿ ಪ್ರತಿ ಧೂಲಿ ಕನಾ
ಅಧೀರ್ ಹೃದಯೇ ಡಾಕೇ
ಡಾಕೇ ತೋಮಾಯ್ ಅನಿವಾರ್॥

ಜತೊ ಮತ್ ತತೊ ಪಥ್ ಬೋಲೇ ಗೇಲೇ
ಸಾಧನಾರ್ ಶೇಷ್ ಅನುಭೂತಿ ಪೇಲೇ।
ಶುದ್ಧಾ ಭಕತಿ ಚೇಯೇಛಿಲೇ ಶುಧು
ಮಾರ್ ಕಾಛೇ ಅನಿವಾರ್॥

ಭಗವತ್ ಪ್ರೇಮೇ ಮಾತೊವಾರಾ ಛಿಲೇ
ಮಾನವದೇಹೇರ ಬೇಶೇ।
ಯುಗೇ ಯುಗೇ ತುಮಿ ಏಶೇಛೊ ಧರಾಯ್
ಮಾನುಷೇರೇ ಭಾಲೊಬೇಷೇ॥

ಮಾ ಬೀಜಮಂತ್ರ ಕಹಿಲೇ ಸಬಾರೇ
ಡೇಕೇ ಜೇಯೊ ಶುಧು ಕೇಂದೇ ಕೇಂದೇ ತಾರೇ
ಮಾ ಮಾ ಮಾ ಬೋಲೇ।
ಜೀವೇ ಶಿವ್ ಜ್ಞಾನೇ ಸೇವಾಯ್ ಧರ್ಮ
ಬೋಲೇಛೋ ಬಾರ್ ಅನುಬಾರ್॥

ಯಮನ್ ಪೂರ್ವೀ – ಏಕತಾಲ

ತುಮಿ ಕಾಂಗಾಲ್ ವೇಶೇ ಏಶೇಛೊ ಹರಿ
ಕಾಂಗಾಲೇ ಕರುಣಾ ಕೊರಿತೇ ಹೇ।
ಪ್ರೇಮ ವಿತರಿತೇ ಮರುಸಮ ಚಿತೇ
ಪತಿತಜನೇ ತಾರಿತೇ ಹೇ॥

ರಾಮಕೃಷ್ಣ ನಾಮ್ ಅಮಿಯಾ ಢಾಲಾ
ಹೇರಿಲೇ ಓ ರೂಪ ಜುಡಾಯ್ ಜ್ವಾಲಾ।
(ತವ) ಚರಣತಲೇ ಪರಾಣ ಸಪಿಲೇ
ಭಾವನಾ ಪಲಾಯ್ ದೂರೇತೇ ಹೇ॥

ಕೊರಿ ತವ ಕಥಾ ಅಮೃತಪಾನ್
ಜಾಗಿಯಾ ಉಠಿಛೇ ಅವಶ ಪ್ರಾಣ್।
ಹತಾಶಹೃದಯೇ ಶತ ಆಶಾ ಜಾಗೇ
ತೋಮಾರ್ ಮಧುರ ನಾಮೇತೇ ಹೇ॥

– ಸ್ವಾಮಿ ಪ್ರೇಮೇಶಾನಂದ

ಭೈರವೀ – ಏಕತಾಲ

ಪ್ರೇಮಾನಂದೇ ಮನರೇ ಕಹೋ ರಾಮಕೃಷ್ಣ ನಾಮ್
ಭಜೋ ರಾಮಕೃಷ್ಣ ನಾಮ್ ಜಪೋ ರಾಮಕೃಷ್ಣ ನಾಮ್
ನಾಮಸುಧಾಪಾನೇ ರಹೋ ಮತ್ತ ಅವಿರಾಮ್॥

ಕಾಮಾರ್‌ಪುಕುರ್ ಹೊಲೊ ಪುಣ್ಯ ವ್ರಜಧಾಮ್
ಶೇಥಾ ಸಖಾಗಣ ಲಯೇ ಕೊರೊ ಲೀಲಾಯ್ ಅಭಿರಾಮ್
ಆಮಾರ್ ಮಾನಸ ಮುಕುರೇ ಭಾಶೇ ಶೇ ಛವಿ ಸುಠಾಮ್॥

ನಮೋ ನಮೋ ಚಂದ್ರಮಣಿ ನಮೋ ಖುದಿರಾಮ್
ಕೃಪಾಮಯಿ ಮಾ ಜನನಿ ಲಹೋ ಗೋ ಪ್ರಣಾಮ್॥

ಜಯರಾಮ್‌ಬಾಟೀರ್ ಮಾಟಿ ಚಂದನ ಸಮಾನ್
ಆಮಾರ್ ಮಾ ಜನನೀರ್ ಜನ್ಮಭೂಮಿ ಮಹಾತೀರ್ಥಸ್ಥಾನ್।
ಏಕಬಾರ್ ಚರಣೇ ಶರಣ ನಿಲೇ ಪೂರೇ ಮನಸ್ಕಾಮ್
ಮಾಯೇರ್ ಚರಣೇ ಶರಣ ನಿಲೇ ಪೂರೇ ಮನಸ್ಕಾಮ್॥

ಬಾವುಲ್ – ದಾದರಾ

ಉಥಲೇಥೇ ಪ್ರೇಮ್ ಪಾರಾವಾರ್।
(ತೋರಾ) ಆಯ್ ನಾ ಛುಟೇ ಭವೇರ್ ಮುಟೇ
ಭಾಶಿಯೇ ದೇನಾ ಮಾಥಾರ್ ಭಾರ್॥

(ಜಾರ್) ಲೇಗೇಥೇ ಬೋಝಾ ತಾರ್ ಹೊಯೇಥೇ ಸೋಜಾ
ಬೋಝಾಬುಝೀರ್ ಬುಂಚ್‌ಕಿ ಫೇಲೇ ಮಾರ್ ಥೇ ಶೇ ಮೊಜಾ
ತುಇ ರೊಯ್‌ಲಿ ಬೊಶೆ ಬೋಝಾರ್ ಆಶೇ
ಕೊರ್‌ಬಿ ಶೇಷೇ ಹಾಹಾಕಾರ್॥

ಪ್ರೇಮಸಾಗರೇ ಭಾಶಿಯೇ ದೇನಾ ಗಾ
ಜಾಬಿ ಬೇಶೇ ಏಮೊನ್ ದೇಶೇ ಜಾರ್ ಪಾಶೇ ನಾಇ ಗಾ
(ಓರೇ) ಚಂದ್ರ ಸೂರ್ಯ ಧ್ವಂಸ ಹೋಲೇಓ
ಹೋಯ್ ನಾ ಶೇಥಾ ಅಂಧಕಾರ್॥

ಶೇಥಾಯ್ ಶೊಬೀ ಉಲ್ಟಾ ಢಂಗ್
ಶೇಥಾಯ್ ಶೊಬೀ ಉಲ್ಟಾ ಢಂಗ್
ಶೇಥಾಯ್ ಕಾಲೊ ಶೇಥಾಯ್ ಸಾದಾ ಬುಝ್‌ಬಿ ಕಿ ಭಾಇ ರಂಗ್
ಓತೋರ್ ಕಾರ್ಯ ಕಾರಣ ಸಬ್ ಅಕಾರಣ್
ನಾಇ ತಥಾಯ್ ತಾರ್ ಅಧಿಕಾರ್॥

ಗುರುದಾಸ್ ಕೇಂದೇ ಬೋಲೆ ತಾಇ ಆರ್ ಬಿಚಾರೇ ಕಾಜ್ ನಾಇ
ಬೋಝಾಬುಝಿ ಅನೇಕ್ ಹೊಲೊ ಸೋಜಾಯ್‌ಚಲೊ ಭಾಇ
ರಾಮಕೃಷ್ಣ ಆಮಾರ್ ಪ್ರೇಮೇರ್ ಪಾಥಾರ್
ಡುಬ್‌ಲೇ ಹೊಬಿ ಭವ ಪಾರ್॥

– ಗುರುದಾಸ್

ಮಿಶ್ರ – ಕಹರವಾ

ತುಮ್ ತ್ರಿಭುವನ ಕೇ ಆಧಾರ ಹೋ
ರಾಮಕೃಷ್ಣ ಭಗವಾನ್॥
ಜಡ-ಚೇತನ್ ಮೇ ಜಗಜೀವನ ಮೇ
ತುಮ್ ಹೀ ವಿರಾಜಮಾನ್॥

ಆತ್ಮನಾಥ್ ತುಮ್ ಅಜ್ ಅವಿನಾಶೀ
ಘಟ ಘಟ ಅಂತರವಾಸೀ।
ಹರ್‌ನೇ ಆಯೇ ಭವದುಃಖರಾಶಿ
ಸಕಲ ಮೋಹ ಅಜ್ಞಾನ್॥

ದೀನಬಂಧು ಮಮ ಚಿತ ಮೇ ಆವೋ
ಸುಮಧುರ್ ರೂಪ ದಿಖಾವೋ।
ಭಕ್ತಹೃದಯ ಕೀ ಪ್ಯಾಸ ಬುಝಾವೊ
ಕರೋ ಕೃಪಾಮೃತ ದಾನ॥

– ಸ್ವಾಮಿ ವಾಗೀಶ್ವರಾನಂದ

ಯಮನ್ ಕಲ್ಯಾಣ್ – ತ್ರಿತಾಲ

ರಾಮಕೃಷ್ಣ ಕೀ ಮಾನವಲೀಲಾ ಅದ್ಭುತ್ ಔರ್ ಮಹಾನ್
ಆವೋ ಹಮ್‌ಸಬ್ ಮಿಲ್‌ಕರ್ ಗಾಯೇ
ಜಯ ಜಯ ರಾಮಕೃಷ್ಣ ಗುಣಗಾನ್॥
ಜಯ ಜಯ ರಾಮಕೃಷ್ಣ ಭಗವಾನ್॥

ಭಕ್ತವೃಂದ್ ಹೈ ತೇರೇ ಅಪನೇ,
ತೇರೇ ಭಕ್ತ ಕೀ ತುಮ್ ಹೋ ಶಾನ್
ಭಕ್ತಜನೋಂಕಾ ಸಂಗ್ ಕರಾನೇ
ಛೋಡಕೇ ಆಯೇ ಧಾಮ್, ಜಯ ಜಯ ರಾಮಕೃಷ್ಣ॥

ತ್ಯಾಗೀಶ್ವರ್ ನೇ ತ್ಯಾಗ್ ಸಿಖಾಯಾ
ಕಾಮ್ ಔರ್ ಕಾಂಚನ್ ದೂರ್ ಹಟಾಯಾ
ಸೋನಾ ಮಿಟ್ಟಿ, ಮಿಟ್ಟಿ ಸೋನಾ
ದೋನೋ ಏಕ್‌ಸಮಾನ್, ಜಯ ಜಯ ರಾಮಕೃಷ್ಣ॥

ಯೋಗೇಶ್ವರ್ ನೇ ಯೋಗ ಸಿಖಾಯಾ
ಭಕ್ತಿ ಕಾ ಆದರ್ಶ ದಿಖಾಯಾ
ಕಲಿಯುಗ ಮೇ ಹೈ ನಾರದಭಕ್ತಿ
ಕರೋ ಪ್ರಭು ಕಾ ಗಾನ್, ಜಯ ಜಯ ರಾಮಕೃಷ್ಣ॥

ಸತ್ಯವಚನ ಕಾ ಕರಕೇ ಪಾಲನ್
ಬಾಕೀ ಸಬ್ ಕುಛ್ ಮಾ ಕೋ ಸಮರ್ಪಣ್
ಸತ್ಯವಚನ ಹೈ ಕಲೀ ತಪಸ್ಯಾ
ಛೋಡೋ ಝೂಠ ಜಬಾನ್, ಜಯ ಜಯ ರಾಮಕೃಷ್ಣ॥

ಗೀತಾ ಕಾ ತೂನೆ ಸಾರ ಸಿಖಾಯಾ
ದೋ ಶಬ್ದೋಂ ಮೇ ಮರ್ಮ್ ಬತಾಯಾ
ಗೀತಾ-ತಾಗೀ, ತಾಗೀ-ಗೀತಾ
ಯಹ್ ಗೀತಾ ಕಾ ಜ್ಞಾನ್, ಜಯ ಜಯ ರಾಮಕೃಷ್ಣ॥

ಸಾಧುಸಂಗ್ ಕೀ ಮಹಿಮಾ ನ್ಯಾರೀ
ಸಹಜ್ ಪಾರ್ ಹೋತಾ ಸಂಸಾರೀ
ಸಾಧುಸಂಗ್‌ಸೇ ಈಶ್ವರ್ ಭಕ್ತಿ
ಔರ್ ಮಿಲೇ ಭಗವಾನ್, ಜಯ ಜಯ ರಾಮಕೃಷ್ಣ॥

ಕಾಶೀಪುರ ಮೇ ರೂಪ ದಿಖಾಯಾ
ನರೇಂದ್ರ ಕೇ ಸಂಶಯ್ ಕೋ ಮಿಟಾಯಾ
ಜೋಈ ರಾಮ ಹೈ ಜೋಈ ಕೃಷ್ಣ ಹೈ
ರಾಮಕೃಷ್ಣ ಲಿಯೇ ನಾಮ್, ಜಯ ಜಯ ರಾಮಕೃಷ್ಣ॥

ಕೃಪಾ ಕೀ ತೂನೇ ಭಕ್ತಜನೋಂ ಪರ್
ಕಾಶೀಪುರ್-ಕಲ್ಪತರು ಹೋಕರ್
ಸುಪ್ತ ಶಕ್ತಿ ಕೋ ಕರಕೇ ಚೇತನ್
ಧನ್ಯ ಕಿಯೇ ತೂನೆ ಪ್ರಾಣ್, ಜಯ ಜಯ ರಾಮಕೃಷ್ಣ॥

ಶ್ರದ್ಧಾ ಹೈ ಏಕ್ ಚೀಜ್ ಅನೋಖೀ
ಜೈಸೇ ಗಿರೀಶ ಘೋಷ್ ಮೇ ದೇಖೀ
ರಾಮಕೃಷ್ಣ ಅವತಾರ್ ವರಿಷ್ಠ್
ಲಿಯೋ ಹಮಾರೇ ಪ್ರಣಾಮ್, ಜಯ ಜಯ ರಾಮಕೃಷ್ಣ॥

– ಸ್ವಾಮಿ ಶ್ರೀಕಾಂತಾನಂದ

ಶಿವರಂಜನಿ – ತ್ರಿತಾಲ

ಭಕ್ತಸಖಾ ತೂ ಭಕ್ತಪ್ರಿಯ ತೂ
ಭಕ್ತವತ್ಸಲ ರಾಮಕೃಷ್ಣ ತೂ
ಸಬಕೇ ಸ್ವಾಮಿ ಅಂತರ್ಯಾಮಿ
ಕೃಪಾ ಕರೋ ಹಮ್ ದೀನ ಭಿಖಾರಿ॥

ಗಿರೀಶ್ ಘೋಷ್ ಕಾ ಪಾಪ ಲಿಯಾ ತೂನೇ
ನಟಿ ವಿನೋದಿನೋ ಕೋ ಪಾರ ಕಿಯಾ
ಮೃತ್ಯುಸಮಯ ಪರ ದರಶನ ದೇ ಕರ್
ಭಂಗಿ ರಸಿಕ ಕೋ ತಾರ ದಿಯಾ ಪ್ರಭು
ಹಮನೇ ಕ್ಯಾ ಅಪರಾಧ್ ಕಿಯಾ॥

ಭಕ್ತಜನೋಂಕಾ ಸಂಶಯ ತುಮನೇ
ಸ್ಪರ್ಶಮಾತ್ರಸೇ ದೂರ ಕಿಯಾ
ಕಿಸೀಕೆ ಜಿಹ್ವಾ ಪರ್ ಕಿಸೀಕೆ ಕಾನಮೇ
ಮಹಾಮಂತ್ರ ಪ್ರದಾನ ಕಿಯಾ ಪ್ರಭು
ಹಮನೇ ಕ್ಯಾ ಅಪರಾಧ್ ಕಿಯಾ॥

ಕಾಶಿಪುರಕೋ ಆಶ್ರಯ ಕರಕೇ
ಭಕ್ತಹೃದಯ ತೂ ಜೀತಲಿಯಾ
ಕಿಸೀಕೋ ಸಮಾಧಿ ಕಿಸೀಕೋ ದರ್ಶನ್
ಕಿಸೀಕೋ ಸ್ವರೂಪ್ ಸಾಕ್ಷಾತ್ ಕಿಯಾ ಪ್ರಭು
ಹಮನೇ ಕ್ಯಾ ಅಪರಾಧ್ ಕಿಯಾ॥

– ಸ್ವಾಮಿ ಶ್ರೀಕಾಂತಾನಂದ

ಭಜನ್ – ತ್ರಿತಾಲ

ಹರಿ ಓಂ ರಾಮಕೃಷ್ಣ ಓಂ
ಜಯ ಜಯ ರಾಮಕೃಷ್ಣ
ತೇರಿ ಚರಣ ಜೋ ಧ್ಯಾವೇ
ಮಿಟ್ ಜಾವೇ ತೃಷ್ಣಾ॥

ಶರಣಾಗತ ದೀನ ತರಣ
ಅಸೀಮಿತ್ ತವ ಕರುಣಾ, ಪ್ರಭು
ನಿರ್ಮಲ್ ಹೋಗಾ ತನ್ ಮನ್
ನಾಮ್ ಜಪೇ ರಸನಾ॥

ಪ್ರೇಮಭಕ್ತಿ ಚಿತ್ ಧಾರಣ ಗಾವೇ
ಜೋ ತೇರಿ ಮಹಿಮಾ, ಪ್ರಭು
ಪಾಪ ತಾಪ ಹರ ಜಾವೇ
ನಾ ಪಡೇ ದುಃಖ್‌ಸಹನಾ॥

ಕಲಿಯುಗ್ ಕಾ ಯಹ ಮಾನವ್
ಜ್ಞಾನ ಭಕ್ತಿ ವಿಹೀನಾ ಪ್ರಭು
ತುಮಕೊ ಅಗರ್ ಭೂಲ್ ಜಾವೇ
ಹಾಥ್ ಪಕಡ ರಖನಾ॥

ಅಮೃತ್‌ಸಮ್ ತವ್ ವಾಣಿ
ಆಶಾ ಭರ್ ಝುರಣ, ಪ್ರಭು
ಶ್ರವಣ ಕರೇಗಾ ಜೋ ನರ್
ಪಾವನ್ ವೋ ಜೀನಾ॥

– ಸ್ವಾಮಿ ಶ್ರೀಕಾಂತಾನಂದ

ಶಂಕರಾಭರಣ – ತ್ರಿತಾಲ

ಮುತ್ಯಾಲ ಮೂಟಕನ್ನ ರತನಾಲ ರಾಶಿಕನ್ನ
ಎಂತೋ ವಿಲುವೈನದಿ ರಾಮಕೃಷ್ಣ ನಾಮ್।
ಭಕ್ತಿ-ಜ್ಞಾನಮಿಚ್ಚೇದಿ ಭುಕ್ತಿ-ಮುಕ್ತಿನಿಚ್ಚೇದಿ
ಎಂತೋ ವಿಲುವೈನದಿ ರಾಮಕೃಷ್ಣ ನಾಮ್॥

ರಾಮಕೃಷ್ಣ ನಾಮ್ ರಾಮಕೃಷ್ಣ ನಾಮ್
ರಾಮಕೃಷ್ಣ ನಾಮ್ ಜೈ ಜೈ ರಾಮಕೃಷ್ಣ ನಾಮ್॥

ತ್ಯಾಗಂಬುನು ಪೆಂಚೇದಿ ಪ್ರೇಮನು ಪಂಚಿಚ್ಚೇದಿ
ಎಂತೋ ವಿಲುವೈನದಿ ರಾಮಕೃಷ್ಣ ನಾಮ್।
ಪವಿತ್ರತನು ಪೆಂಚೇದಿ ಗಮ್ಯಮುನು ಚೇರ್ಚೇದಿ
ಎಂತೋ ವಿಲುವೈನದಿ ರಾಮಕೃಷ್ಣ ನಾಮ್॥

ರಾಮಕೃಷ್ಣ ನಾಮ್ ರಾಮಕೃಷ್ಣ ನಾಮ್
ರಾಮಕೃಷ್ಣ ನಾಮ್ ಜೈ ಜೈ ರಾಮಕೃಷ್ಣ ನಾಮ್॥

ಪಾಲುತೇನೆಲಕನ್ನ ಪಂಚದಾರ ಚಿಲಕಕನ್ನ
ಮಧುರಾತಿ ಮಧುರಮು ರಾಮಕೃಷ್ಣ ನಾಮ್।
ಸಾಧುಜನುಲ ಸಾಂಗತ್ಯಂ ಮನಕಂದರಿಕಿಚ್ಚೇದಿ
ಎಂತೋ ವಿಲುವೈನದಿ ರಾಮಕೃಷ್ಣ ನಾಮ್॥

ರಾಮಕೃಷ್ಣ ನಾಮ್ ರಾಮಕೃಷ್ಣ ನಾಮ್
ರಾಮಕೃಷ್ಣ ನಾಮ್ ಜೈ ಜೈ ರಾಮಕೃಷ್ಣ ನಾಮ್॥

ವ್ಯಥಲನು ತೊಲಗಿಂಚೇದಿ ವೈರಾಗ್ಯಮುನಿಚ್ಚೇದಿ
ಎಂತೋ ವಿಲುವೈನದಿ ರಾಮಕೃಷ್ಣ ನಾಮ್।
ಮನಸುಕು ನಿಲಕಡನಿಚ್ಚಿ ಧ್ಯಾನ ಸ್ಥಿತಿನಿ ಪೆಂಚೇದಿ
ಎಂತೋ ವಿಲುವೈನದಿ ರಾಮಕೃಷ್ಣ ನಾಮ್॥

ರಾಮಕೃಷ್ಣ ನಾಮ್ ರಾಮಕಷ್ಣ ನಾಮ್
ರಾಮಕೃಷ್ಣ ನಾಮ್ ಜೈ ಜೈ ರಾಮಕೃಷ್ಣ ನಾಮ್॥

ಸಾರಂಗ - ಕವಾಲೀ

ರಾಮಕೃಷ್ಣ ಜಯ ರಾಮಕೃಷ್ಣ ಜಯ
ಮಂತ್ರೇ ಪುಲಕಿತ ಕಾಯಾ।
ಶುದ್ಧಭಕ್ತಿ ದೇ ತವ ಶ್ರೀಚರಣಿ
ಚಿತ್ತ ಜಡವುನೀ ಸಖಯಾ॥

ಅಜ್ಞಾನಾಚೇ ತಿಮಿರ ಹರೋನೀ
ಉಜಳೀ ಹೋ ಮಮ ಹೃದಯಾ।
ಪಹಾಟ ಫಾಕೋ ದಿಶಾ ಉಜಳುದೇ
ಜ್ಞಾನರವೀಯೇ ಉದಯಾ॥

ಆವರಿ ಅಪುಲಿ ಭುವನಮೋಹಿನೀ
ದುರ್ದಮ ದೈವೀ ಮಾಯಾ।
ಅಹಂ ಮಮಾಚಿ ಭ್ರಾಂತಿ ಮೃಗಜಳ
ತೃಷ್ಣಾ ಶಮವೀ ಸಖಯಾ॥

ಅಂತರ ಬಾಹಿ ತೂಹಿ ತೂಹಿ ಹಾ
ಪ್ರತ್ಯಯ ಚಿತ್ತೀ ಜಡವೀ।
ಆಣಿ ಶಾಂತಿ ದೇ ಪರಮಾ ಹೃದಯೀ
ತುರೀಯ ಅಕ್ಷಯ ಪದವೀ॥

ಜಯ ಜಯ ದೇವಾ ಶರಣಾಗತ ತುಝು
ಜಯತು ಶ್ರೀಶಾರದೇಶ।
ಪ್ರಸಾದಭಿಕ್ಷಾ ದೇ ಮಝು ಸಖಯಾ
ರಾಮಕೃಷ್ಣ ಹೃದಯೇಶ॥

ಭೈರಾಗೀ ಭೈರವ್ – ಕವಾಲೀ

ಜಯ ಜಯ ರಾಮಕೃಷ್ಣ ಭುವನಮಂಗಲ್
ಜಯ ಮಾತಾ ಶ್ಯಾಮಾಸುತಾ ಅತಿ ನಿರಮಲ್।
ಜಯ ವಿವೇಕ ಆನಂದ ಪರಮ ದಯಾಲ್
ಪ್ರಭೂರ್ ಮಾನಸಸುತ ಜಯ ಶ್ರೀರಾಖಾಲ್॥

ಜಯ ಪ್ರೇಮಾನಂದ ಪ್ರೇಮಮಯಕಲೇವರ್
ಜಯ ಶಿವಾನಂದ ಜಯ ಲೀಲಾಸಹಚರ್।
ಯೋಗಿ ಯೋಗಾನಂದ ಜಯ ನಿತ್ಯನಿರಂಜನ್
ಜಯ ಶಶಿ ಗುರುಪದೇ ಗತ ತನುಮನ್॥

ಸೇವಾಪರ ಯೋಗಿವರ ಅದ್ಭುತ ಆನಂದ್
ಅಭೇದ ಆನಂದ ಜಯ ಗತ ಮೋಹಬಂಧ್।
ಯೋಗರತ ತ್ಯಾಗವ್ರತ ತುರೀಯ ಆಖ್ಯಾತ್
ಶರತ ಸುಧೀರ ಶಾಂತ ಜೇನೊ ಗಣನಾಥ್॥

ಜೀವೇ ಶಿವಸೇವಾವ್ರತ ಗಂಗಾಧರ ವೀರ್
ಜಯ ಶ್ರೀವಿಜ್ಞಾನಾನಂದ ಪ್ರಶಾಂತ ಗಂಭೀರ್।
ಪ್ರವೀಣ ಗೋಪಾಲ ಮಾತೃಸೇವಾ ಪರಾಯಣ್
ಸಾರದಾ ಸಾರದಾಪದೇ ಗತಪ್ರಾಣಮನ್॥

ಬಾಲಕಚರಿತ್ರ ಜಯ ಸುಬೋಧ ಸರಲ್
ನಾಗವರ ತ್ಯಾಗವೀರ ವಿವೇಕಸಂಬಲ್।
ಕಥಾಮೃತ ವರ್ಷಣ ಗೌರಜಲಧರ್
ಗಿರೀಶ ಭೈರವ ಜಯ ವಿಶ್ವಾಸ-ಆಕಾರ್॥

ರಾಮಕೃಷ್ಣ ದಾಸದಾಸ ಜಯ ಸಬಾಕಾರ್
ರಾಮಕೃಷ್ಣ ಲೀಲಾಸ್ಥಾನ್ ಜಯ ಬಾರಬಾರ್।
ರಾಮಕೃಷ್ಣ ನಾಮ ಜಯ ಶ್ರವಣಮಂಗಲ್
ಭಕತವಾಂಛಿತ ಜಯ ಚರಣಕಮಲ್॥

– ಸ್ವಾಮಿ ಪ್ರೇಮೇಶಾನಂದ

ಕೇದಾರ – ದಾದರಾ

ಶಿವ ಶಿವ ಮಹಾಶಿವ ಶಿವ ರಾಮಕೃಷ್ಣ ನಾಮ್
ಬ್ರಹ್ಮಾ ವಿಷ್ಣು ಸರ್ವದೇವ ರಾಮಕೃಷ್ಣ ದೀಪ್ತನಾಮ್
ಕಾರ್ತಿಕೇಯ ಗಣಪತಿ ವಿಶ್ವಕರ್ಮ ವಿಶ್ವಮಾನ್
ಯುಗದೇವ ರಾಮಕೃಷ್ಣ ರಾಮಕೃಷ್ಣ ಬ್ರಹ್ಮನಾಮ್।। ಶಿವ ಶಿವ

ಧರ್ಮ ಕರ್ಮ ಲಕ್ಷ್ಮಿ ಯೋಗಿ ಮಹಾದೇವಿ ಮಹೇಶ್ವರ
ಮೋಕ್ಷ ಕ್ಷೇಮ ಸರ್ವದೇವ ದೇವಿ ಶ್ರೀಯೋಗೀಶ್ವರ
ದುರ್ಗಾ ಶಿವ ಸತ್ಯ ಶ್ರೇಷ್ಠ ಶ್ರೇಯಶ್ರೇಯಾಧೀಶ್ವರ
ಜ್ಞಾನಿ ಸ್ಥೂಲ ಮಹಾಶೂನ್ಯ ರಾಮಕೃಷ್ಣ ಬೋಧೀಶ್ವರ।। ಶಿವ ಶಿವ

ಕಾಲಕಾಲ ಮಹಾಕಾಲ ಕಾಲಿ ಶ್ಯಾಮಾ ನಿತ್ಯಕಾಲ
ಸತ್ಯಾಸತ್ಯ ಪರಮಸತ್ಯ ದೇವ ಶ್ರೀಮಹೇಶ್ವಾಸ
ಶಂಖ-ಚಕ್ರ-ಗದಾ-ಪದ್ಮಧಾರಿ ಶ್ರೀನಾರಾಯಣ
ಆದಿದೇವ ರಾಮಕೃಷ್ಣ ಸರ್ವದೇವಾಧೀಶ್ವರ।। ಶಿವ ಶಿವ

ವಿಶ್ವಪತಿ ಲಕ್ಷ್ಮೀಪತಿ ಪ್ರಜಾಪತಿ ಮನೇಶ್ವರ
ಶೀತಲಾವಿಮಲಸ್ನಿಗ್ಧ ಸಾರದಾಶ್ರೀ ಅಧೀಶ್ವರ
ಸರ್ವದೇವ ದೇವೀರೂಪ ಸರ್ವ ಸಿದ್ಧಿಪರಾಯಣ
ರಾಮಕೃಷ್ಣ ಪರಬ್ರಹ್ಮ ನಿತ್ಯಾನಿತ್ಯ ಸೋಮೇಶ್ವರ।। ಶಿವ ಶಿವ

ರೂಪಾರೂಪ ಸೀಮಾಸೀಮ ಲೀಲಾನಿತ್ಯ ಸುರೇಶ್ವರ
ಅರ್ಥಾನರ್ಥ ಮಹಾದೇವ ಸತ್ಯದೇವಭೂತೇಶ್ವರ
ನಿದ್ರಾಲಜ್ಜಾ ಶ್ರದ್ಧಾಸ್ತುತಿ ಯಜ್ಞಕರ್ಮ ವಿದ್ಯಮಾನ
ನಿತ್ಯಸತ್ಯ ರಾಮಕೃಷ್ಣ ಏಕಮೇವಾದ್ವಿತೀಯಮ್।। ಶಿವ ಶಿವ

– ಸ್ವಾಮಿ ಸಂಬುದ್ಧಾನಂದ

ಬೇಹಾಗ್ – ತ್ರಿತಾಲ

ರಾಮಸ್ವರೂಪ ಕೃಷ್ಣಸ್ವರೂಪ
ರಾಮಕೃಷ್ಣ ನಮೋಽಸ್ತು ತೇ

ಸಕಲಸ್ವರೂಪ ಶಾಂತಸ್ವರೂಪ
ಪರಮಹಂಸ ನಮೋಽಸ್ತು ತೇ

ದೀನರಕ್ಷಕ ದೀನಪೋಷಕ
ರಾಮಕೃಷ್ಣ ನಮೋಽಸ್ತು ತೇ

ದಿವ್ಯಸ್ವರೂಪ ದೀನಬಾಂಧವ
ಪರಮಹಂಸ ನಮೋಽಸ್ತು ತೇ

ಭಗವತ್ಸ್ವರೂಪ ಭಾಸುರತೇಜ
ರಾಮಕೃಷ್ಣ ನಮೋಽಸ್ತು ತೇ

ಪಾಪವಿನಾಶ ಪಾವನಚರಿತ
ಪರಮಹಂಸ ನಮೋಽಸ್ತು ತೇ

ನೀರಜಲೋಚನ ನಿರ್ಮಲಕಾಯ
ರಾಮಕೃಷ್ಣ ನಮೋಽಸ್ತು ತೇ

ಪತಿತಪಾವನ ಪಾವನನಾಮ
ಪರಮಹಂಸ ನಮೋಽಸ್ತು ತೇ॥

ಶ್ರೀಶಾರದಾದೇವೀ ಸಂಕೀರ್ತನೆ

ಯಮನ್ ಕಲ್ಯಾಣ್ – ತ್ರಿತಾಲ

ತವ ಕೃಪೆ ಬೆಳಗಲಿ ಭವಭ್ರಮೆ ಕಳೆಯಲಿ
ಶಿವೆ ಶ್ರೀಶಾರದೆ ತವಕದಿ ಮೊರೆಯುವೆ॥

ಇಂದುಸುವಿಮಲೆ ವಂದಿತಪದತಲೇ।
ಕುಂದದ ಪ್ರೇಮದ ಮಂದಾಕಿನಿಯೆ॥

ತ್ಯಾಗವಿಭೂಷಿತೆ ತ್ಯಾಗಿಕುಲಾಂಬಿಕೆ।
ಯೋಗೀಂದ್ರಾರ್ಚಿತೆ ಯೋಗಪ್ರದಾತೆ॥

ನಿನ್ನಡಿದಾವರೆ ಎನ್ನಯ ಆಸರೆ।
ಮನ್ನಿಸು ದಾಸನ ಬಿನ್ನಹ ಮಾತೆ॥

– ಸ್ವಾಮಿ ಶಾಸ್ತ್ರಾನಂದ

ಕಾನಡಾ – ಏಕತಾಲ

ಸಾರದಾ ರೂಪ ತಾಳಿ ಬಂದಿಹಳು ತಾಯಿ ಕಾಳಿ
ಅದನರಿತೆ ರಾಮಕೃಷ್ಣ ಪೂಜಿಸಿದರು ಭಾವ ತಾಳಿ॥

ಆದ್ಯಾಶಕ್ತಿ ನೀ ಮಾತೆ ಸರ್ವಜೀವಮುಕ್ತಿದಾತೆ।
ಮಹಾಲಕ್ಷ್ಮಿ ಸರಸ್ವತಿ ಗುಪ್ತರೂಪ ಜ್ಞಾನದಾತೆ॥

ಸೀತಾ ರಾಧಾ ಅನ್ನಪೂರ್ಣಾ ಕಾಯ ಪಡೆದ ಬುವಿಯು ಧನ್ಯ।
ಪ್ರೇಮದಿಂದ ತಾಯಿಯೆಂದು ಕರೆವ ಮನುಜ ಜಗದಿ ಮಾನ್ಯ॥

ದೀನಜನರ ಉದ್ಧರಿಸೆ ದೀನರೂಪ ತಾಳಿ ಬಂದೆ।
ಅಭಯೇ ನೀನು ಉಭಯಕರದಿ ಅಭಯವನ್ನು ನೀಡಲೆಂದೆ॥

– ಸ್ವಾಮಿ ಶಾಸ್ತ್ರಾನಂದ

ಭೂಪಾಲೀ – ಝಪತಾಲ

ಶ್ರೀಶಾರದಾದೇವಿ ಹೇ ಮಹಾಮಾತೆ
ಶ್ರೀರಾಮಕೃಷ್ಣ ಗುರುದೇವ ಸಂಪ್ರೀತೆ।
ಪರಮಪಾವನಹೃದಯೆ ಕಲಿಯುಗದ ಸೀತೆ
ಭಕ್ತಿಯಿಂದಾರಾಧಿಪೆವು ನಿನ್ನನಮ್ಮ॥

ಗಗನದಂತಿಹುದಮ್ಮ ನಿನ್ನ ಗಾಂಭೀರ್ಯ
ನಿನ್ನ ತೇಜದ ಭಾಗವೀ ನಮ್ಮ ಸೂರ್ಯ।
ನೀ ಕಾಳಿ ನೀ ಲಕ್ಷ್ಮಿ ನೀ ಬಿಜ್ಜೆಯಮ್ಮ
ಮಕ್ಕಳಾಗಿಹ ನಮ್ಮ ಪೊರೆ ಶಕ್ತಿಯಮ್ಮ॥

ಮಹಿಮೆ ಮಹಿಮೆಯನರಿವುದೆಂದೆಂಬರಮ್ಮ
ಗುರುವರ್ಯನಂ ತಿಳಿದ ನೀ ಮಹಿಮಳಮ್ಮ।
ಪತಿಭಕ್ತಿಯದೆ ಮುಕ್ತಿ ನಿನಗಾಯಿತಮ್ಮ
ಪರಶಕ್ತಿ ನೀನಮ್ಮ ನಮ್ಮ ಸಲಹಮ್ಮ॥

ನಿನ್ನ ನಾಮವೆ ಜನನಿ ಸುರನದಿಯ ತೀರ್ಥ
ಎಲೆ ತಾಯೆ, ನೀನೇ ಪವಿತ್ರತಮ ತೀರ್ಥ।
ನಿನ್ನ ಪೂಜೆಯೆ ಭಕ್ತಿ, ಸಾಧನ ವಿರಕ್ತಿ
ನಿನ್ನ ನೆನೆವುದೆ ನಮಗೆ ಗುರು ತಪಶ್ಶಕ್ತಿ॥

– ಕುವೆಂಪು

ಬೃಂದಾವನ ಸಾರಂಗ – ಝಪತಾಲ

ಅಲೆದಲೆದು ಅತಿದಣಿದು ನೆಲೆಗಾಣ್ದೆ ನಿನ್ನಡಿಗೆ
ಎಲೆ ತಾಯೆ ಕಡೆಗಿಂದು ಬಂದೆಮ್ಮ ಸಲಹು॥

ಕೊನೆಯಿಲ್ಲ ಕೊರೆಯಿಲ್ಲ ಈ ನಮ್ಮ ದುಃಖಕ್ಕೆ
ಮನದಲ್ಲಿ ಬನದಲ್ಲಿ ನೆಮ್ಮದಿಯು ಇನಿತಿಲ್ಲ।
ಜನುಮಗಳು ಕಳೆಕಳೆದು ದುಃಖ ಮಿತಿಮೀರುತಿದೆ
ಜನನಿ ಮಂಗಳಮೂರ್ತಿ ಕಳೆಯೆಮ್ಮ ಕಲುಷಾರ್ತಿ॥

ಪರಮಹಂಸರ ಕರುಣೆರೂಪಿಣಿಯೆ ನೀ ತಾಯೆ
ಪರತನವನರಿಯದಿಹ ಪ್ರೇಮದಂಬುಧಿ ಜಲವ।
ಎರೆದೆಮ್ಮನುದ್ಧರಿಸು ಪತಿತಪಾವನೆ ಮಾತೆ
ಸಾರದಾಯಿನಿ ಪರಮೆ ಅಕಳಂಕಚರಿತೆ॥

– ಸ್ವಾಮಿ ತದ್ರೂಪಾನಂದ

ಮಿಶ್ರಪೀಲೂ – ಏಕತಾಲ

ರಾಮಕೃಷ್ಣ ತಪೋಸೂರ್ಯ
ಕಿರಣಬಿಂಬಚಂದ್ರಿಕೆ
ಓ ತಾಯಿ ಅಂಬಿಕೆ॥

ಗಿರಿಯ ದರಿಯ ನೆಲವ ಜಲವ
ತಬ್ಬಿ ನಿಂತ ಕರುಣೆಯೆ
ವಾತ್ಸಲ್ಯವರಣೆಯೆ॥

ರಾಮಕೃಷ್ಣ ತಪೋವನದ
ಪರ್ಣಕುಟಿಯ ದೀಪವೆ।
ಬಳಿಗೆ ಬಂದ ಹಣತೆಗಳಿಗೆ
ಬೆಳಕನಿತ್ತ ಕಿರಣವೆ
ಮೌನಪ್ರಭಾವಲಯವೆ॥

ಸಂಕಟಗಳ ವನವಸನವ-
ನುಟ್ಟು ನಿಂತ ಶಿಖರವೆ।
ನದನದಿಗಳ ವಾತ್ಸಲ್ಯದ
ಹಾಲೂಡಿದ ತೀರ್ಥವೆ
ದಿವ್ಯ ಕೃಪಾರೂಪವೆ॥

– ಜಿ. ಎಸ್. ಶಿವರುದ್ರಪ್ಪ

ಹಂಸಧ್ವನಿ - ತ್ರಿತಾಲ

ದೊರಕಿತು ಧರಣಿಗೆ ಸಿರಿವರ ಇಂದು
ಕರುಣೆಯ ಮೂರುತಿ ಶಾರದೆ ಬಂದು।
ಪರಮಗುರುವಿನ ಶಕ್ತಿಯ ಸಿಂಧು
ಪೊರೆವಳು ಸರ್ವರ ಹೃದಯದಿ ನಿಂದು॥

ಕಲಿಯುಗದಾರ್ತರ ನೋಡುತ ನೊಂದು
ಒಲುಮೆಯ ಸುರನದಿ ತನ್ನಲಿ ಮಿಂದು।
ಕಲುಷವ ಕಳೆಯುತ ಬೆಳಗಲಿ ಎಂದು
ಸುಲಭದ ಸಾಧನೆ ಸಾರವ ತಂದು॥

ನಿರ್ಮಲಮೂರುತಿ ನಿಷ್ಕಲ ಇಂದು
ಕರುಣಿಸು ಒಂದೇ ಪ್ರೇಮದ ಬಿಂದು।
ಪರಹಿತಜೀವಿತೆ ಸರ್ವರ ಬಂಧು
ಮೊರೆಯುವೆ ನಿನ್ನಲಿ ಕೃಪೆ ತೋರೆಂದು॥

- ಸ್ವಾಮಿ ಶಾಸ್ತ್ರಾನಂದ

ಶಿವರಂಜಿನಿ - ಝಪತಾಲ

ಅಮ್ಮ ಅಮ್ಮಾ ಎಂದು ಕರೆಯುತಿಹೆನಮ್ಮಾ।
ಕರಕರೆಯಿದೆಂದೆನದೆ ಓಡಿ ಬಾರಮ್ಮಾ॥

ಯಾರ ದೋಷಗಳೆಷ್ಟು ನನಗೇಕೆ ಬೇಕು।
ನನ್ನ ದೋಷವ ತಿದ್ದಿ ನೀ ಸಲಹಬೇಕು॥

ಪಾಪಿಗಳನುದ್ಧರಿಪ ನೀ ದಯಾಸಿಂಧು।
ನೀಡೆನಗೆ ಕರುಣೆಯಿಂ ಆ ಕೃಪೆಯ ಬಿಂದು॥

ತಾಯಿ ನೀನಿರುತಿರಲು ತಬ್ಬಲಿಯೆ ನಾನು।
ವಾತ್ಸಲ್ಯಸುಧೆಯುಣಿಸಲಾರೆಯಾ ನೀನು॥

ಜ್ಞಾನ ಭಕ್ತಿ ವಿವೇಕ ವೈರಾಗ್ಯ ನೀಡು।
ಎನ್ನ ಹೃನ್ಮಂದಿರದಿ ನಿತ್ಯ ನಲಿದಾಡು॥

- ಸ್ವಾಮಿ ಪುರುಷೋತ್ತಮಾನಂದ

ಸುನಾದ ವಿನೋದಿನಿ – ತ್ರಿತಾಲ

ಬಾರೆನ್ನ ತಾಯಿ ಬೇಗನೆ । ನೀ
ಕೈಪಿಡಿದೆನ್ನನು ಕಾಪಾಡಬೇಕು॥

ಬಂಧುಗಳು ಆಗುವರೆಂದು
ಬಾಯಿ ತೆರೆದು ಕುಳಿತೆನಮ್ಮ
ಬಂದು ಬಂದು ತಿಂದೇ ಹೋದರು॥
ಈ ಬಂಧುಗಳು....

ಮೆಚ್ಚುವವರ ನೆಚ್ಚಿಕೊಂಡೆ
ಹೆಚ್ಚು ಹೆಚ್ಚು ಮೆಚ್ಚಲೆಂದು
ಹುಚ್ಚು ಹಿಡಿಸಿ ಹೊರಟೇ ಹೋದರು॥
ಈ ಹೊಗಳುಭಟ್ಟರು....

ತಾಯೆ ನಿನ್ನ ನೆನೆಯದಿದ್ದ
ಫಲವನುಂಡೆ, ಕಹಿಯೋ ಕಹಿ
ಇನ್ನು ನಿಜಕು ನಿನ್ನ ಮರೆಯೆನು॥
ಓ ಮುದ್ದು ತಾಯಿ....

– ಸ್ವಾಮಿ ಪುರುಷೋತ್ತಮಾನಂದ

ಬಿಲಾವಲ್ – ಏಕತಾಲ

ನನ್ನ ಜನನಿ ನಿನ್ನ ಜನನಿ
ಎಂಬ ಭೇದ ಸಲ್ಲದು।
ಅವಳು ಜಗದ ಕೋಟಿಕೋಟಿ
ಜೀವಜನ್ಮದಾತೆಯು॥

ತಾಯೆ ನಿನ್ನ ಸಮ್ಮುಖದಲಿ
ನಾವು ಕೂಡಿ ನಲಿವೆವು।
ನಿನ್ನ ವಾತ್ಸಲ್ಯಸುಧೆಯ
ನೀಡಿ ಎಮ್ಮ ಕಾಪಿಡು॥

ಅಮ್ಮಾ ಎಂದು ಎಷ್ಟು ಬಾರಿ
ಕರೆದರದೂ ಸಾಲದು।
ತಾಯ ಮಧುರ ಋಣವ ನಾವು
ತೀರಿಸಲೇ ಆರೆವು॥

ಮೈಮನಗಳ ಮರೆಸುವಂಥ
ದಿವ್ಯನಾಮವಿಲ್ಲಿದೆ।
ಅಮ್ಮಾ ಎಂಬ ನಾಮಸುಧೆಗೆ
ಜಗದಿ ಸಾಟಿ ಎಲ್ಲಿದೆ॥

ಪರಬ್ರಹ್ಮ ಆದಿಶಕ್ತಿ
ಎನಿತೊ ನಾಮ ಅವಳಿಗೆ।
ಅಮ್ಮಾ ಎಂಬ ಒಂದೆ ನಾಮ
ಸಾಕು ನಮ್ಮ ಪಾಲಿಗೆ॥

– ಸ್ವಾಮಿ ಪುರುಷೋತ್ತಮಾನಂದ

ದೇಸ್ – ಕವಾಲೀ

ಜಗದ ಜೀವಿಗಳ ಎದೆಯ ಸಾವಿರದ ಕುಸುಮಕುಸುಮದಲ್ಲಿ
ತಾಯಿ ಶಾರದೆಯೆ, ಜೀವದುಂಬಿ ನೀ ಅರಳುತಿರುವೆಯಲ್ಲಿ!

ಕರುಣೆ ಕಣ್ಣ ಬೆಳಕಲ್ಲೆ ಬೆಳಗೆ ನೀ ನೋಟವೆಲ್ಲ ಚೆಲುವು;
ಅಭಯವಾಣಿಯಲಿ ಕಿವಿಯ ತುಂಬಿರುವೆ, ಇನಿದು ನಿನ್ನ ಉಲಿವು;
ಜೀವದಾಹವನು ತಣಿವ ತಾಯಿ ನೀ, ಸುಳಿವ ಕಂಪಿನೊಲವು;
ಅಮೃತಸ್ಪರ್ಶದಲಿ ಕೊಳೆಯ ತೊಳೆಯುತಿರೆ ಧನ್ಯ ಧನ್ಯ ಜಗವು!

ಜೀವಜೀವಗಳ ಬಿರುಕ ತುಂಬಿ ನೀ ಮಾತೃಹೃದಯದಲ್ಲಿ
ಕೋಟಿ ಕೋಟಿ ಸುತರೆದೆಯನಾಳುತಿಹೆ ಕರುಣೆಪೀಠದಲ್ಲಿ;
ಹರಡಿ ಹಬ್ಬುತಿಹ ನಿನ್ನ ಮಹಿಮೆ-ಆಗಸಕೆ ಇಲ್ಲ ಎಲ್ಲೆ;
ಅಲ್ಲಿ ಇಲ್ಲಿ ನಾ ಹುಡುಕಲೇಕೆ, ನೀನಿರುವೆ ಒಲುಮೆಯಲ್ಲೆ!

– ಎಚ್. ಎನ್. ಮುರಳೀಧರ

ಭಜನ್ – ತ್ರಿತಾಲ

ಶ್ರೀ ಮಾ ಜಯ ಜಯ ಮಾ
ಶ್ರೀ ಮಾ ಜಯ ಜಯ ಮಾ॥

ಮನದಾಸೆಗಳನು ಬಿಟ್ಟು
ಮೋಹಾದಿ ಅರಿಗಳ ಸುಟ್ಟು।
ಮಾತೃಪಾದದಿ ಭಕ್ತಿಯನಿಟ್ಟು
ಮಾಯಾಪಾಶವ ಗೆಲ್ಲುವ ಗುಟ್ಟು॥

ಪರರ ನಿಂದಿಪ ಚಾಳಿಯ ತೊರೆದು
ತನ್ನದೇ ತಪ್ಪನು ತಿದ್ದುತ ನಡೆದು।
ಜಗವೇ ತನ್ನದು ಎಂಬುದ ತಿಳಿದು
ಬಾಳ್ವ ಮನುಜಗೇ ಮಾತೆಯ ಕೃಪೆಯು॥

ಶಾಸ್ತ್ರ ಶ್ಲೋಕದ ಸಪ್ಪಳವಿಲ್ಲ
ಹವನ ಹೋಮದ ಅಬ್ಬರವಿಲ್ಲ।
ಮೌನ ಪ್ರಾರ್ಥನೆಯೊಂದನೇ ಬಲ್ಲ
ಮಾತೃ ಪ್ರೀತಿಗೆ ಸಾಟಿಯೆ ಇಲ್ಲ॥

– ಸತ್ಯನಾರಾಯಣ

ರಾಗಮಾಲಿಕೆ - ತ್ರಿತಾಲ

ಜಗದೀ ಸಂತೆಯೊಳಲೆಯುವ ಮನುಜ
ನಿಲ್ಲೋ ಒಂದು ಕ್ಷಣ।
ತಾಯಿಯ ನೆನೆಯಲು ಬಂದಿದೆ ಶುಭದಿನ
ಹಾಡೋ ತುಂಬಿ ಮನ॥

ಸ್ಥಾವರ ಜಂಗಮ ಎಲ್ಲಕೂ ತಾಯಿ
ಬಂದಿಹಳು ಈ ಧರೆಗೆ।
ಆಮೋದರ ನದಿತೀರದಿ ಕಾಣುವ
ಜಯರಾಂಬಾಟಿಯೊಳಗೆ (ಅಮ್ಮ)॥

ಮಕ್ಕಳು ಮರೆತರು ತಾಯಿಯು ಮರೆವಳೆ
ತನ್ನಯ ಶಿಶುಗಳನು।
ಮಣ್ಣಿನೊಳಾಡುವ ನಮ್ಮನು ಎತ್ತಲು
ಚಾಚಿಹ ಕೈ ನೋಡು (ತಾಯಿಯ)॥

ಭವದ ಬವಣೆಗಳೆಲ್ಲವ ಮರೆತು
ಜೈ ಮಾ ಎಂದೆನ್ನು।
ಪಾಪದ ರಾಶಿಗೆ ಇಡು ನೀ ತಾಯಿಯ
ಸ್ಮರಣೆಯ ಬೆಂಕಿಯನು॥

ಕಾಂಭೋಜಿ - ಮಿಶ್ರಛಾಪುತಾಲ

ತಾಯಿ ಶಾರದೆ ನಾವು ನಿನ್ನಯ
ಚರಣಕಮಲಕೆ ನಮಿಪೆವು।
ಪರಮಪಾವನೆ ನಿನ್ನ ಪುತ್ರರ
ಪ್ರೇಮದಿಂದಲಿ ಪಾಲಿಸು॥

ದೇವದೇವನ ಹೃದಯದಲ್ಲಿನ
ಕರುಣೆಯೆಂಬುವ ಗಂಗೆ ನೀ।
ಆರ್ತಜೀವರ ಶಾಂತಗೊಳಿಸಲು
ಹರಿದು ಬಂದಿಹೆ ಶೀಘ್ರದಿ॥

ನಿನ್ನ ನಾಮದ ವಾರಿಯಲಿ ನಾ-
ವೆಲ್ಲ ಮೀಯುತ ಹರ್ಷದಿಮ್।
ಶುದ್ಧರಾಗಲು ಮುಕ್ತರಾಗಲು
ಯತ್ನ ನಡೆಸುತಲಿರ್ಪೆವು॥

ಸಾಧುಸಜ್ಜನ ದುಷ್ಟದುರ್ಜನ-
ರೆಲ್ಲ ನಿನ್ನಯ ಮಕ್ಕಳೇ ।
ನಮ್ಮೆಲ್ಲರನು ಕೃಪೆಯ ತೋರುತ
ರಕ್ಷಿಸೀಗಲೆ ಮಾತೆಯೆ ॥

- ಸ್ವಾಮಿ ಹರ್ಷಾನಂದ

ಜೋಗ್ – ದಾದರಾ

ಶಾರದಾ ಮಹಾಮಾತೆ
ದಿವ್ಯಜ್ಞಾನ ವರಪ್ರದಾತೆ
ವಿಶ್ವಪ್ರೇಮಮೂರ್ತರೂಪ
ವಿಗತಸರ್ವಸ್ವಾರ್ಥತೆ॥

ಪರಮಹಂಸತಪೋಘನದ
ನಿತ್ಯಕೃಪಾವರ್ಷಿಣಿ।
ಭಕ್ತಹೃದಯಕ್ಷೇತ್ರವನ್ನು
ಪರಮಸಫಲಕಾರಿಣಿ॥

ಧರೆಗೆ ಇಳಿದ ವಿಶ್ವಶಕ್ತಿ
ಸರಳರೂಪಧಾರಿಣಿ।
ಪರಮಪದವ ತೊರೆದು ಬಂದೆ
ಜಗದ ಹಿತಾಕಾಂಕ್ಷಿಣಿ॥

– ಸ್ವಾಮಿ ನಿತ್ಯಸ್ಥಾನಂದ

ಮಲಯಮಾರುತ - ತ್ರಿತಾಲ

ವಿಶ್ವಾತ್ಮಾ ಪೂಜಿತ ಮಹಾಮಾಯಿ
ಧೀರಾತ್ಮಾ ಪರಿಪೂಜಿತ ಮಾಯಿ
ಸರ್ವಾತ್ಮಾ ಸುಖವರ್ಷಿಣಿ ಮಾಯಿ
ಮಾಯಿ ಮಾಯಿ ಮಾಯಿ ಮಾಯಿ।।

ಜಗ ಸಂತಾನ ಅಭೇದ ಪಾಲನಕರೀ
ಪಾರಿಜಾತ ಪ್ರೇಮಾಚ್ಛಾದಿತಕರೀ
ಮಾತೃ ಅಮಿತ ಮಮತಾ ಪೂರ್ಣಮಯೀ
ಮಾಯಿ.... ಮಹಾಮಾಯಿ
ಮಾಯಿ ಮಾಯಿ ಮಾಯಿ ಮಾಯಿ।।

ಮನುಜ ಮನಾಗ್ನಿರ್ ಜ್ಯೋತಿಃ ಕಾಂತಿಃ
ಜೀವನ ತಪನ ಹರೀ ತಾಪಸ್ವೀ
ಶೀತಲ ಚಂದ್ರಮ ನಯನ ಪ್ರಭಾಮಯೀ
ಮಾಯಿ.... ಮಹಾಮಾಯಿ
ಮಾಯಿ ಮಾಯಿ ಮಾಯಿ ಮಾಯಿ।।

ದೇಹಿ ಮನ ಸಮತೋಲನ ಭಾವನ
ಸ್ವೀಕುರು ನಮನ ಕ್ಷಮಾಕುರು ಶಿಶುಸ್ವನ
ವರ್ಷಾಕುರು ಪ್ರೇಮಾಮೃತ ಹೃನ್ಮಯೀ
ಮಾಯಿ.... ಮಹಾಮಾಯಿ
ಮಾಯಿ ಮಾಯಿ ಮಾಯಿ ಮಾಯಿ।।

- ಪದ್ಮಿನಿ ಮುರಳಿ

ಕಲ್ಯಾಣಿ – ತ್ರಿತಾಲ

ಸ್ವಾಗತವಮ್ಮ ಸರ್ವಚರಾಚರ ಕಲ್ಯಾಣಿ
ಮಾ ಸಾರದಾಮಣಿ ಮನತೋಷಿಣಿ॥

ಪ್ರೇಮಸ್ವರೂಪಿಣಿ ನಿಖಿಲಲೋಕಜನನಿ
ಮಾ ಸಾರದಾಮಣಿ ಪರಿಪೂರಣಿ
ದಯೆಯ ಕೈದುವಿಂ ದೌಷ್ಟ್ಯವ ಹರಿಸಿದ ನೀ
ಮಾ ಸಾರದಾಮಣಿ ಅಘಹಾರಿಣಿ॥

ಭಗವದನುಗ್ರಹ ಮಂತ್ರ ಸುಬೋಧಿನಿ
ಮಾ ಸಾರದಾಮಣಿ ಅವತಾರಿಣಿ
ರಾಮಕೃಷ್ಣ ಸನ್ಮಂದಿರ ಶಿಲಾಸನಿ
ಮಾ ಸಾರದಾಮಣಿ ಪರ್ವತವಾಸಿನಿ॥

– ಪದ್ಮಿನಿ ಮುರಳಿ

ಆನಂದಭೈರವಿ (ಮಿಶ್ರ) – ಖಂಡ

ಒಂದಂಶ ಒಂದು ಹನಿ ಒಂದು ಬೆಳಕಿನ ಗೆರೆ
ಪಡಿಮೂಡಿ ಮನದೊಳಗೆ ಮನುಜನೆನಿಸಲಿ ತಾಯೆ
ಒಂದೆ ಪರಮಾತ್ಮದ ಸತ್ವ ಸುಧಾಂಶವು ನಾನು-
ನೀನೆಂಬ ಸತ್ಯವನು ಸಾರಿ ತೋರೈ ತಾಯೆ॥

ಶಾರದೆಯೆ ನೀನೇನೊ ಸೃಷ್ಟಿಯಣುರೇಣುವನು
ಸಮಪ್ರೇಮದಲಿ ಕಂಡು ದೈವರೂಪಿಣಿಯಾದೆ
ನನ್ನೊಳಗ ದೈವಾಂಶ ಹಿಮದ ಕಲ್ಲದು ಕರಗಿ
ಸುರಗಂಗೆ ರೂಹಿಂದೆ ಹರಿಯಲಿಂದಿಂದೆ
ಆ ಇಂದು ಈ ದಿನವೊ ಈ ವರುಷ ಈ ಜನುಮ
ಜನುಮ ಜನುಮಾಂತರವೇ ಹಿಡಿಯಲೇಳಮ್ಮ
ನನ್ನಲಿನ ನೀನು ಉದಯವಾಗುವವರೆಗು
ಮುಕ್ತಿಯೇ ದೊರೆತರೂ ಬೇಡ ಬೇಡಮ್ಮ॥

– ಪದ್ಮಿನಿ ಮುರಳಿ

ಚಕ್ರವಾಕ – ಏಕತಾಲ

ಅಮ್ಮ ಅಮ್ಮ ಅಮ್ಮ
ಅಮ್ಮ ಎಂಬ ಕರೆ ರಕ್ಷೆ
ಸುಖ ಸಾಂತ್ವನಕೆ ನೇರ ಸುಗಮ ಮಾರ್ಗ।
ಅಮ್ಮ ಅಮ್ಮ ಅಮ್ಮ
ಅಮ್ಮನೊಲುಮೆ ಶ್ರೀರಕ್ಷೆ
ಅಮ್ಮನ ಮಡಿಲಲ್ಲೆ ಸಿದ್ಧಿಪುದು ಸ್ವರ್ಗ॥

ಹಸಿವಿನಿಂದಲಿ ಕರೆಯೆ
ಅನ್ನಪೂರ್ಣೆಯು ಆಗಿ ಸರಸ್ವತಿಯು ತಾನಾಗಿ
ಲಕ್ಷ್ಮಿಯಾಗಿ।
ತಳೆದ ಹಸಿವಿಗೆ ತಕ್ಕ ಹಸಾದವ ಉಣಬಡಿಸಿ
ಎದೆಗೊತ್ತಿಕೊಳ್ಳುವಳು ಅಮ್ಮ ಶಾರದೆ॥

ಬಾಯಾರಿ ಬಸವಳಿಯೆ
ಮಂದಾಕಿನಿಯಾಗಿ ನೇತ್ರಾವತಿಯಾಗಿ
ಗಂಗೆಯಾಗಿ।
ವಾತ್ಸಲ್ಯ ಧಾರೆಯಲಿ ತೋಯಿಸಿ ತಣಿಸುತ
ದಣಿವಾರಿಸುವಳೆಮ್ಮ ಅಮ್ಮ ಶಾರದೆ॥

– ಪದ್ಮಿನಿ ಮುರಳಿ

ಸಿಂಧುಭೈರವೀ – ಖಂಡ

ನೀನೊಲಿಯಲಿಹದಾಟ ಸರಳರಂಗ
ಒಲಿ ತಾಯೆ ಒಲುಮೆ ಚಿಲುಮೆಯ ಗಂಗ॥

ಶ್ರೀಶಾರದಾದೇವಿ ಕರುಣಿಸಿ ಪಾಲಿಸೈ
ದಯಪಾಲಿಸೈ ಮನಕೆ ಸದ್ಬುದ್ಧಿ ಸಂಗ
ನಿನ್ನ ಮಮತೆಯ ಮಡಿಲ ಬೆಚ್ಚನೆಯ ಆಸರೆಯೆ
ನೆರಳು ಜೀವನ ಪಥಕೆ ಮೆಲನಿಲ ತರಂಗ
ನೆರಳು ಜೀವನ ಪಥಕೆ ಮೆಲನಿಲ ತರಂಗ॥

ನಿನ್ನೆಡೆಗೆ ನಾ ಬರಲೊ ಬರುವೆಯಾ ಎನ್ನೆಡೆಗೆ
ಕೈ ಹಿಡಿಯಬೇಕಿದೆ ಚರಿಸೆ ಭವಶೃಂಗ
ನನ್ನ ಮುನ್ನಡೆಯ ಲಯ ಪ್ರಳಯಕೊಯ್ಯದ ಹಾಗೆ
ಗತಿತಪ್ಪದೊಲು ನುಡಿಸು ಬಾಳಿನ ಮೃದಂಗ
ಗತಿತಪ್ಪದೊಲು ನುಡಿಸು ಬಾಳಿನ ಮೃದಂಗ॥

ತೊಳಲಲಾರೆನು ಹುಳುವಿನಂದದಿ ಮನುಜ ನಾ
ಏರಲೇ ಬೇಕಿದೆ ಜೀವಿತದುತ್ತುಂಗ
ಒಲಿ ತಾಯೆ ಒಲುಮೆ ಚಿಲುಮೆಯ ಗಂಗ॥

– ಪದ್ಮಿನಿ ಮುರಳಿ

ಸರಸಾಂಗಿ – ಏಕತಾಲ

ನಲಿವೆ ಇನ್ನು ಚಣಚಣಕೂ
ನಗುವೆ ನಿತ್ಯಯೋಗ
ಬಾಳೆ ಚೆಲುವ ಚೈತ್ರವಲ್ಲ ಬಲವಂತದ ಮಾಘ
ಅಲ್ಲ ಬಲವಂತದ ಮಾಘ॥

ಕೆಸರಿನಲ್ಲಿ ಹೊರಳಿ ತೊಳಲಿ ವಿಲಿಗುಡುವ ಕ್ರಿಮಿಯು ನನ್ನ
ಹೆಸರನುಚ್ಚರಿಸಲಸಹ್ಯವದೃಷ್ಟ ಸಂಜಾತರಿಗೆ
ಉಸಿರನಿತ್ತಿರುವ ಅಮ್ಮ ಮರೆದು ಕೊಳಕ ಮಮತೆಗರೆಯೆ
ಕೆಸರದಾಗದಿರುವುದುಂಟೆ ಕ್ಷೀರ ಜಲಧಿ ಮೂರ್ತದಿ॥

ಅರೆಬೆಂದಿರುವನ್ನದಗಳ ವಿಲಕ್ಷಣದ ಕುಣಿತ ಸಹಜ
ಎರಕ ತಪ್ಪಿದಾಕಾರವದೆಂತೆಂತೋ ಇಹುದು ಸಹಜ
ಕೊರತೆ ದೈವದತ್ತವೆಂದು ಅರಿಯದಿಳೆಯು ದೂಡುತಿರಲು
ಇರುವೆ ನಾನು ಹೆದರದಿರು ಎನುವ ತಾಯಿ ಇರಲು ಭಯವೇ॥

ನಾನು ಯಾರಾದರೇನು ಮುಳ್ಳೊ ಹೂವೊ ಸುಳ್ಳೊ ಟೊಳ್ಳೊ
ಮುಳ್ಳ ಹೂವು ಹೂವ ಗಂಧ ಸುಳ್ಳ ಸುಖವು ಟೊಳ್ಳ ರಾಗ
ತಾನು ನನ್ನಲೊಂದೆ ಆಗಿ ಜೊಳ್ಳ ತೂರಿ ಮೆಲ್ಲ ಸಲಹೊ
ಒಳ್ಳೆ ತಾಯ ಕಂದ ನನಗೆ ನಗುವೆ ನಿತ್ಯಯೋಗ॥

– ಪದ್ಮಿನಿ ಮುರಳಿ

ಮಿಶ್ರ – ತ್ರಿತಾಲ

ದೀಪವ ಹಿಡಿದು ಆರತಿ ಬೆಳಗುವೆ
ಜ್ಯೋತಿಯ ಹೊಣೆಯು ನಿನದಮ್ಮ
ತುಪ್ಪದ ದೀಪದ ಆರತಿ ಬೆಳಗುವೆ
ತಮಹರಣದ ಹೊಣೆ ನಿನದಮ್ಮ॥

ಮಧುರ ರಾಗದಲಿ ಸ್ತುತಿಸುತ ಹಾಡುವೆ
ಮರೆಯಿಸದ ಹೊಣೆ ನಿನದಮ್ಮ
ಮನ ಪಗಲಿನಮಣಿಯಾಗೆ ಪ್ರಾರ್ಥಿಪೆ
ಮೋಡ ಸರಿಸೊ ಹೊಣೆ ನಿನದಮ್ಮ॥

ಮಲ್ಲಿಗೆ ತುಲಸಿ ಮುದದಿ ಪೂಜಿಪೆ
ಮುಡಿಗೇರಿಸೊ ಹೊಣೆ ನಿನದಮ್ಮ
ಮೌನವ ಧರಿಸಿ ಧ್ಯಾನಿಸಿ ಜಪಿಸುವೆ
ಮನದಿ ನಿಲ್ಲೋ ಹೊಣೆ ನಿನದಮ್ಮ॥

ತೊಡರೆಡರುಗಳಲಿ ತಡಬಡಿಪೆನಗೆ
ತೊಡೆಯಾಸರೆ ಹೊಣೆ ನಿನದಮ್ಮ
ತಾಯೆ ನಿನ್ನ ನಿಜ ಸಂತಾನವಾಗುವ
ತವಕವುದಿಪ ಹೊಣೆ ನಿನದಮ್ಮ॥

ದೀಪವ ಹಿಡಿದು ಆರತಿ ಬೆಳಗುವೆ
ಮಂಗಳಾರತಿಯು ನಿನಗಮ್ಮ
ಮಂಗಳಾರತಿಯು ನಿನಗಮ್ಮ

– ಪದ್ಮಿನಿ ಮುರಳಿ

ಸರಸ್ವತಿ – ತ್ರಿತಾಲ

ಅಜಬ್ರಾಹ್ಮಿ ವೀಣೆಯ ತಾ ಹಿಡಿದಳು
ದ್ವಿಜಬ್ರಾಹ್ಮಿ ತಂತಿಗಳ ಮಿಡಿದಳು
ಸತ್ಯಲೋಕದ ಸ್ವರ ಪಲ್ಲವಿಯು
ಮರ್ತ್ಯದಿ ಪ್ರೇಮದ ನಾದ ಉಲಿಯಿತು॥

ರಕ್ಕಸರಬ್ಬರದಟ್ಟಹಾಸವನು
ಮಟ್ಟ ಹಾಕಿದಳು ಅಜಬ್ರಾಹ್ಮಿ
ಅಸುರರಿಗೊಲುಮೆಯ ಅಮೃತವುಣಿಸುತ
ಅಸುರತೆ ತರಿದಳು ದ್ವಿಜಬ್ರಾಹ್ಮಿ॥

ಕಡುಪಾಪವನು ಪುಣ್ಯವ ಪರಕಿಸೊ
ಹಂಸವಾಹಿನಿಯು ಅಜಬ್ರಾಹ್ಮಿ
ಕೆಡುಕನು ಒಳಿತಿನ ಕ್ಷೀರವೆನಿಸಿದ
ಹಂಸಿನಿಯಿವಳು ದ್ವಿಜಬ್ರಾಹ್ಮಿ॥

ಸಮಸ್ತ ಜ್ಞಾನದ ಅಧಿದೇವತೆ ತಾ
ಪುಸ್ತಕಧಾರಿಣಿ ಅಜಬ್ರಾಹ್ಮಿ
ಹೊತ್ತಗೆ ಹಿಡಿಯದ ಹೆಚ್ಚನು ನುಡಿಯದ
ಜ್ಞಾನಪ್ರದಾತೆಯು ದ್ವಿಜಬ್ರಾಹ್ಮಿ॥

ಮುನಿ ಋಷಿ ವಂದಿತೆ ಪಂಡಿತ ವಿನುತೆ
ಮಂತ್ರಸ್ವರೂಪಿಣಿ ಅಜಬ್ರಾಹ್ಮಿ
ಅವನಿಯ ಸುಜ್ಞರ ಅಜ್ಞರ ಭಗ್ನರ
ಸಲಹುವ ಜನನಿಯು ದ್ವಿಜಬ್ರಾಹ್ಮಿ॥

– ಪದ್ಮಿನಿ ಮುರಳಿ

ಮಿಶ್ರ ಶಿವರಂಜಿನಿ – ತೇವರಾ

ಯಾವ ರೂಪದಿ ಬಂದು ನಿಲುವೆಯೋ
ಯಾರು ಅರಿಯಬಲ್ಲರು।
ಜೀವಿಗಳ ನೀ ಪೊರೆವ ಪರಿಯನು
ಯಾರು ತಿಳಿಯಬಲ್ಲರು॥

ಕೇಳದೆಯೇ ನೀನೆಲ್ಲ ಕೊಡುವೆಯೋ
ನೀನೆ ನನ್ನ ತಾಯಿಯು।
ಈ ಬಾಳ ಬವಣೆಯ ಕಂಡು ನಗುವೆಯೋ
ಬಲ್ಲೆ, ಈ ಜಗ ಮಾಯೆಯು॥

ತಾಯೆ ನೀನೇ ಹಗಲು ಇರುಳು
ಕಾಯಬೇಕು ನಮ್ಮನು।
ಈ ಮಾಯಾಪಾಶಕೆ ಸಿಲುಕದಂತೆ
ಹರಸಬೇಕು ನಮ್ಮನು॥

ನೀಡು ಅಭಯ ಮಾತೆ ಶಾರದೆ
ನಿನ್ನ ಪಾದವ ನಂಬಿಹೆ।
ನನ್ನದೇನಿದೆ ಎಲ್ಲ ನಿನ್ನದೆ
ನಿನ್ನ ಕರುಣೆಗೆ ಕಾದಿಹೆ॥

ಯಮನ್ – ತೇವರಾ

ಜಯ ಶಾರದೇ ಜಗದಂಬಿಕೆ ಕರುಣಾರೂಪಿಣಿ
ಹೇ ಮಾತಾ ಹೇ ಮಾತಾ ಪ್ರೇಮರೂಪಿಣಿ

ಈಶ್ವರೀ ಚಿನ್ಮಯಿ ಸ್ವಯಂಪ್ರಕಾಶಿನಿ
ಕೃಪಾಮಯಿ ಭಗವತಿ ಸತ್ಯಸನಾತನಿ
ದೇವೀ ಭವಾನಿ ಜಗಜನನಿ ಶುಭದಾಯಿನಿ

ಶ್ವೇತವಸ್ತ್ರಾಲಂಕೃತೆ ಕರುಣಾವಿಗ್ರಹೇ
ಪಾವನ ಚರಿತಾಮೃತೆ ಪತಿತಪಾವನೇ
ನಮಸ್ತೇ ನಮಸ್ತೇ ದೇವಿ ಶಾರದೆ ಮಾತಾ ವರದೇ

ಮೋಹನಾಶಿನಿ ತಾಪಹಾರಿಣಿ ಜ್ಞಾನದಾಯಿನಿ
ರಾಮಕೃಷ್ಣ ಲೀಲಾಸಂಗಿನಿ ಮಾತೃರೂಪಿಣಿ
ಪಾಹಿ ಮಾಂ ಪಾಹಿ ಮಾಂ ಪಾಹಿ ಜನನಿ ಪಾಹಿ ಜನನಿ

ಮಧ್ಯಮಾವತಿ - ತೇವರಾ

ಸರ್ವಮಂಗಲೆ ಸರ್ವವ್ಯಾಪಿಕೆ
ಜ್ಞಾನರೂಪಿಣಿ ಶಾರದೇ
ಆದಿಪೂಜ್ಯಳೆ ಲೋಕವಂದಿತೆ
ಹೃದಯದೇಗುಲ ದೇವತೆ,
ಹೃದಯದೇಗುಲ ದೇವತೆ॥

ಬರಡು ಮನಸಿನ ಕುರುಡು ಭಕ್ತಿಯು
ಶೂನ್ಯಭಾವದಿ ನೆಲೆಸಿದೆ;
ವ್ಯರ್ಥವಾದ ಕ್ಷಣಗಳೆಲ್ಲ
ನಿನ್ನ ಕಾಣದೆ ತಪಿಸಿದೆ,
ನಿನ್ನ ಕಾಣದೆ ತಪಿಸಿದೆ॥

ರಾಮಕೃಷ್ಣರ ಹೃದಯ ನೆಲೆಯಲಿ
ಮಿಂದು ಬೆಳಗಿದ ಜ್ಯೋತಿಯೇ
ನಿನ್ನ ಸೆಲೆಯಲಿ, ಗುರಿಯ ಬಲೆಯಲಿ
ಧನ್ಯಜೀವನ ನಡೆಸುವೆ,
ಧನ್ಯಜೀವನ ನಡೆಸುವೆ॥

ಶರಣು ಬಂದಿಹೆ ಕರುಣೆ ತೋರೆಯ
ಮಾತೃರೂಪಿಣಿ ಶಾರದೇ
ಅಭಯದಾಯಿನಿ ಸತತ ಪೊರೆಯೆ
ಜಯತು ಜಯತು ಶಾರದೇ
ಜಯತು ಜಯತು ಶಾರದೇ

ಶಿವರಂಜನಿ – ತ್ರಿತಾಲ

ಮಾತೆ ಶ್ರೀಮಾತೆ ಶಾರದಾಮಾತೆ
ರಾಜರಾಜೇಶ್ವರಿ ಶ್ರೀಲಲಿತೆ
ರಾಜರಾಜೇಶ್ವರಿ ಶ್ರೀಲಲಿತೆ

ಪಾರ್ವತಿದೇವಿಯೆ ಪರಶಿವನರಸಿಯೆ
ಭಕುತರ ಬವಣೆಯ ಪರಿಹರಿಸೆ
ನಿರ್ಮಲಭಾವದಿ ನಿರುತವು ನೆನೆವರ
ಜನುಮವ ಕಾಯುವ ವರದಾತೆ
ಜನುಮವ ಕಾಯುವ ವರದಾತೆ

ಭಕುತರ ಸಿರಿಯೆ ಭಾಗ್ಯದ ನಿಧಿಯೆ
ಭಾವದಿ ಬೇಡುವೆ ದಯಮಾಡೇ
ಕಮಲನಾಭನ ರಾಣಿ ಕರುಣೆಯ ತೋರೆ
ಕರಗಳ ಮುಗಿಯುವೆ ಕಮಲಾಂಬೆ

ಪಾವನಚರಿತಳೆ ಪತಿತರ ದೈವವೆ
ಅನುದಿನ ಭಜಿಸುವ ಮನ ನೀಡೇ
ಪರಿ ಪರಿ ಬೇಡುವೆ ತ್ವರಿತದಿ ಬಾರಮ್ಮ
ಜನನಿ ಜಯತು ಜಯ ಜಗನ್ಮಾತೆ
ಜನನಿ ಜಯತು ಜಯ ಜಗನ್ಮಾತೆ

ಧುನ್ – ತ್ರಿತಾಲ

ಜಯರಾಂಬಾಟಿಯಲ್ಲಿ ಜನಿಸಿ ಬಂದ ಜಾನಕಿ।
ಜನ್ಮ ಮೃತ್ಯು ಎಲ್ಲದಕೂ ನೀನೇ ವಿಧಾಯಕಿ॥

ಜಗಕೆ ನೀನೇ ಮೂಲ ಎಂದು ಅರಿತ ಜನರು ಧನ್ಯರು
ಜಯಕು ನೀನೇ ಮೂಲ ಎಂದು ಅರಿತ ಜನರು ಗಣ್ಯರು।
ನಿನ್ನ ಹರಕೆಯಿಂದ ಜಗವ ಜಯಿಸಿದ ವಿವೇಕಾನಂದ
ಯಾವ ಭಿಡೆಯೂ ಇಲ್ಲದೆ ಅದನು ಎಲ್ಲೆಡೆಯೂ ಸಾರಿದ॥

ನಿನ್ನ ಕೃಪಾಕಟಾಕ್ಷವೆ ಸಂಘಶಕ್ತಿಯಾಗಿದೆ
ಸರ್ವಜನಗ್ರಾಹ್ಯವದು ನಿಜಸಂಗತಿಯಾಗಿದೆ।
ಅಲ್ಪನಾದರೇನು ನಾನು ಜನಿಸಿದೆ ನಿನ್ನುದರದಲಿ
ನಿನ್ನ ಶಕ್ತಿಯೆಲ್ಲವನ್ನು ದಾಟಿಬಿಡುವೆ ಹಕ್ಕಿನಲಿ॥

ಅರಿಯಿರೆಲ್ಲ ಬೇಗ ಈ ಅದ್ಭುತ ಉಪಾಯ
ತಾಯ ಪುತ್ರನಾದರಾಯ್ತು ಬದುಕು ಎಲ್ಲ ಹಾಯಿ।
ಅರಿಯಿರೆಲ್ಲ ಬೇಗ ಈ ಅದ್ಭುತ ಉಪಾಯ
ತಾಯ ಪುತ್ರಿಯಾದರಾಯ್ತು ಬದುಕು ಎಲ್ಲ ಹಾಯಿ॥

– ಸ್ವಾಮಿ ನಿರ್ಭಯಾನಂದ

ಕೇದಾರ – ತ್ರಿತಾಲ

ನಿನ್ನಯ ಮಡಿಲಿಗೆ ಬಂದೆ ಮಾತೆ ಶಾರದೆ
ಸುರವನಿತೆ ಅನವರತ ಅಭಯ ವರದಾತೆ॥

ನಿನ್ನಯ ಕೃಪೆಯರಸಿ ಬರುವ ಸಾಸಿರ ಸುತರ।
ನೇವರಿಸಿ ಕಣ್ಣೊರಸಿ ಹರುಷ ತರಿಸಿ ಕೃಪೆಗೈದೆ॥

ಗಂಗೋತ್ರಿಯಲಿ ಹರಿವ ಸುರಗಂಗೆಯೊಲು।
ಪರಮ ಪಾವನೆ ಮಾತೆ ಕೃಪಾವಾರಿಧಿಯೈ॥

ಭವತಾರಿಣಿ ಕಾಳಿ ಶ್ರೀಶಾರದಾಮಣಿ।
ದಶಮಹಾವಿದ್ಯೆಯರು ನಲಿದು ಸಂಭ್ರಮಿಸೆ॥

– ಸ್ವಾಮಿ ನಿರ್ಭಯಾನಂದ

ಶ್ರೀಶಾರದಾ-ಸುಪ್ರಭಾತಮ್

ಮಾತಃ ಸಮಸ್ತಜಗತಾಂ ಪರಮಸ್ಯ ಪುಂಸಃ
ಶಕ್ತಿಸ್ವರೂಪಿಣಿ ಶಿವೇ ಕರುಣಾರ್ದ್ರಚಿತ್ತೇ।
ಲೋಕಸ್ಯ ಶೋಕಶಮನಾಯ ಕೃತಾವತಾರೇ
ಶ್ರೀಶಾರದೇಽಸ್ತು ಶಿವದೇ ತವ ಸುಪ್ರಭಾತಮ್॥

ಬಾಲ್ಯೇ ಭವಸ್ಯ ತಮಸಃ ಪರಿಹಾರಯಿತ್ರೇ
ಲೀಲಾಮನುಷ್ಯವಪುಷೇಽಥ ಗದಾಧರಾಯ।
ದತ್ತೇ ತದರ್ಪಿತಧಿಯಾಽಽಪ್ತಸಮಸ್ತವಿದ್ಯೇ
ಶ್ರೀಶಾರದೇಽಸ್ತು ಶುಭದೇ ತವ ಸುಪ್ರಭಾತಮ್॥

ಬಾಲ್ಯಾತ್ ಪರೇ ವಯಸಿ ಭರ್ತರಿ ಸಂಪ್ರವೃತ್ತಾಮ್
ಉನ್ಮತ್ತ ಇತ್ಯನುಚಿತಾಮವಧೂಯ ವಾರ್ತಾಮ್।
ತದ್ದರ್ಶನಕ್ರಮಿತದುರ್ಗಮದೂರಮಾರ್ಗೇ
ಶ್ರೀರಾಮಕೃಷ್ಣದಯಿತೇ ತವ ಸುಪ್ರಭಾತಮ್॥

ಸಂನ್ಯಾಸಿನಂ ಪತಿಮವೇಕ್ಷ್ಯ ಚ ನೋದ್ವಿಜಾನೇ
ಸೇವಾರ್ಪಿತತ್ರಿಕರಣೇ ಪರಿಶುದ್ಧಚಿತ್ತೇ।
ತತ್ಸಾಧನಾಚರಮಸೀಮ್ನಿ ಸಮರ್ಪಿತಾಂಘ್ರೇ
ಶ್ರೀರಾಮಕೃಷ್ಣಪರಮೇಶ್ವರಿ ಸುಪ್ರಭಾತಮ್॥

ಯಾಮೇವ ಚಾತ್ಮಜನನೀಂ ಭವತಾರಿಣೀಂ ಚ
ಸೇವಾಪರಾಂ ತು ಬುಬುಧೇ ಗುರುರಸ್ತಭೇದಃ।
ತಸ್ಯಾಸ್ಸಮಸ್ತಜಗತೋಽಸ್ಯ ಶರಣ್ಯಮೂರ್ತೇಃ
ಶ್ರೀರಾಮಕೃಷ್ಣದಯಿತೇ ತವ ಸುಪ್ರಭಾತಮ್॥

ಆವೃಣ್ವತೀ ಪರಮಿಕಾಂ ಪ್ರಕೃತಿಂ ಸ್ವಕೀಯಾಂ
ಸಂಸಾರಿಣೀವ ಬಹುದುಃಖಜಲೇ ಭವಾಬ್ಧೌ।
ಸರ್ವಂ ಸಹೇ ಶ್ರಿತಜನೋದ್ಧರಣೈಕದೀಕ್ಷೇ
ಶ್ರೀರಾಮಕೃಷ್ಣದಯಿತೇ ತವ ಸುಪ್ರಭಾತಮ್॥

ಗೇಹಸ್ಯ ಮಾರ್ಜನವಿಧೌ ಮಮ ಕರ್ಮಶಾಂತಿಂ
ನಾಯಾತ್ಯಸಂಖ್ಯ-ಭುಜನಿಷ್ಕ್ರಿಯಮಾಣಮೇವಮ್।
ಆಕಸ್ಮಿಕೋಕ್ತಿ-ವಿವೃತಾಖಿಲಶಕ್ತಿರೂಪೇ
ಶ್ರೀರಾಮಕೃಷ್ಣದಯಿತೇ ತವ ಸುಪ್ರಭಾತಮ್॥

ಶ್ರೀರಾಮಕೃಷ್ಣದಯಿತೇ ತದಧೀನಸತ್ತ್ವೇ
ತದ್ಭಕ್ತವೃಂದಪರಿಪಾಲಿನಿ ಮುಕ್ತಿದಾತ್ರಿ।
ತದ್ಭಾವರಕ್ತಹೃದಯೇ ತದಭಿನ್ನತತ್ತ್ವೇ
ಮಾತಸ್ಸಮಸ್ತಜಗತಾಂ ತವ ಸುಪ್ರಭಾತಮ್॥

– ಸ್ವಾಮೀ ಅಚಲಾನಂದ ಸರಸ್ವತೀ

ಶ್ರೀಶಾರದಾದೇವೀಸೂಕ್ತಮ್

ಅಹಂ ಶ್ರೀರಾಮಕೃಷ್ಣಸ್ಯ ಸಂಗಿನೀ ಸಹಧರ್ಮಿಣೀ।
ಆದ್ಯಾಶಕ್ತಿರಹಂ ವಿದ್ಯಾ ಸರ್ವಜ್ಞಾನಪ್ರದಾಯಿನೀ॥

ಅಹಂ ಸರಸ್ವತೀದೇವೀ ಸೀತಾ-ಲಕ್ಷ್ಮೀಸ್ವರೂಪಿಣೀ।
ಅಹಮೇವ ಮಹಾಕಾಲೀ ದಕ್ಷಿಣೇಶ್ವರವಾಸಿನೀ॥

ರಾಮಕೃಷ್ಣಮಹಾಸಂಘಜನನೀ ತ್ವಹಮೇವ ಚ।
ಪೂರ್ವಪಶ್ಚಿಮದೇಶಾನಾಂ ಭಕ್ತೇಭ್ಯಃ ಶುಭದಾಯಿನೀ॥

ಯತ್ರಾಸ್ತಿ ಪ್ರೀತಿಬಾಂಧವ್ಯಂ ಸಂಘೇಸಂಘೇ ಗೃಹೇಗೃಹೇ।
ಸ್ಥಿರಂ ವಸಾಮಿ ತತ್ರಾಽಹಂ ಶುಭಂ ಕರೋಮಿ ಸರ್ವದಾ॥

ನ ಭೇದೋಸ್ತಿ ಮತ್ಸಂತಾನೇ ಪ್ರೀಣಾಮ್ಯಹಂ ಸಮಾನತಃ।
ಯೇ ಮಾಂ ಸ್ಮರಂತಿ ಸತತಮ್ ಆನಂದಂ ಪ್ರಾಪ್ನುವಂತಿ ತೇ॥

'ಹೇ ಮಾತ' ಇತಿ ಸಪ್ರೇಮಂ ಯೇ ಭಕ್ತಾ ಆಹ್ವಯಂತಿ ಮಾಮ್।
ತಾಮಹಂ ಲಾಲಯಾಮ್ಯೇವ ಶೃಣು ಮೇ ವಚನಂ ಧ್ರುವಮ್॥

– ಸ್ವಾಮಿ ಪುರುಷೋತ್ತಮಾನಂದ

ಶ್ರೀಶಾರದಾದೇವೀ-ಅಷ್ಟೋತ್ತರಶತನಾಮಸ್ತೋತ್ರಮ್

ರಾಮಚಂದ್ರಾತ್ಮಜಾ ದೇವೀ ಶ್ಯಾಮಾಮಾತಾ ಸರಸ್ವತೀ।
ಕರ್ಮಾತೀತಾ ಸ್ವಯಂಜಾತಾ ಜಗತ್ತ್ರಯಸುಖೈಷಿಣೀ॥ ೧ ॥

ಶಾರದಾಮಣಿಸನ್ನಾಮ್ನೀ ದಯಾರ್ದ್ರಹೃದಯಾ ಸತೀ।
ಶಾಂತಾ ಸೌಮ್ಯಾ ಸುಗಂಭೀರಾ ಭ್ರಾತೃವಾತ್ಸಲ್ಯರೂಪಿಣೀ॥ ೨ ॥

ಅನ್ನಪೂರ್ಣಾಽಽಹಾರದಾತ್ರೀ ವಿಪ್ರಯೋಗವಿನಾಶಿನೀ।
ಪಿತೃಸಾಹಾಯ್ಯದಾಪುತ್ರೀ ಪೂಜಾಪುಷ್ಪಾವಚಾಯಿನೀ॥ ೩ ॥

ಬಾಲ್ಯೋಢಾ ಮುಗ್ಧಸತ್ಕನ್ಯಾ ಪತಿಸೇವಾಪರಾಯಣಾ।
ಕ್ರಂದಿತಾಽಽಭರಣಾಭೂಷಾಹೀನಾ ಸಹಜಸುಂದರೀ॥ ೪ ॥

ಪತ್ಯಾಪ್ತಸಕಲಜ್ಞಾನಾ ಪತಿದರ್ಶನಕೌತುಕಾ।
ತದ್ಧೇತುದುರ್ಗಮಾಧ್ವನ್ಯಾ ತತ್ಪ್ರೀತಿಸಮಲಂಕೃತಾ॥ ೫ ॥

ತತ್ಪದಾರ್ಪಿತಸರ್ವಸ್ವಾ ತದರ್ಚಿತಪದಾಂಬುಜಾ।
ತತ್ಸಂಯುತಸಮಾಧಿಸ್ಥಾ ತದ್ದತ್ತಸುತಪಃಫಲಾ॥ ೬ ॥

ಸಂಪ್ರಾಪ್ತಸರ್ವಮಾತೃತ್ವಾ ಸರ್ವಲೋಕೋಪಕಾರಿಕಾ।
ಸರ್ವಾರ್ತಿನಾಶಿನೀ ಸ್ನಿಗ್ಧಾ ಸರ್ವಸೌಭಾಗ್ಯದಾಯಿನೀ॥ ೭ ॥

ರಾಮಕೃಷ್ಣಪ್ರಿಯಾ ಸುಶ್ರೀಃ ತಲ್ಲೀಲಾಪೂರ್ತಿಕಾರಿಣೀ।
ತದ್ಭಕ್ತಿಸ್ತದ್ಗತಪ್ರಾಣಾ ತದ್ಭಾವಾರಕ್ತರೂಪಿಣೀ॥ ೮ ॥

ನಿಗೂಢದಿವ್ಯಸೌಂದರ್ಯಾ ತಿರೋಹಿತಸುಚಿತ್ಪ್ರಭಾ।
ಸ್ವೇಚ್ಛಾಸ್ವೀಕೃತಸಂಸಾರಾ ನಿರ್ಲಿಪ್ತಾಖಿಲಬಂಧನಾ॥ ೯ ॥

ಉತ್ತಮಾದಿನಿಕೃಷ್ಟಾಂತಸರ್ವಕರ್ತವ್ಯಕಾರಿಣೀ।
ನಿಷ್ಕಾಮಕರ್ಮನಿರತಾ ಸತ್ಕರ್ಮಾದರ್ಶವಿಗ್ರಹಾ॥ ೧೦ ॥

ಪತಿದತ್ತಪರಾವಿದ್ಯಾ ತದಾಜ್ಞಾಪರಿಪಾಲಿನೀ।
ಅಲಂಕೃತಗುರುಸ್ಥಾನಾ ಬದ್ಧಜೀವವಿಮೋಚಿಕಾ॥ ೧೧ ॥

ದುಷ್ಟಚೌರಪರಿಷ್ಕರ್ತ್ರೀ ಸರ್ವಸಜ್ಜನಸೌಹೃದಾ।
ಆಪಾಪಿಮಾತೃವಾತ್ಸಲ್ಯಾ ಸಾಧುಸಜ್ಜನರಕ್ಷಿಣೀ॥ ೧೨ ॥

ತೀರ್ಥಾಟನಪರಿಷ್ವಕ್ತಾ ಕ್ಷೇತ್ರತೀರ್ಥತ್ವದಾಯಿನೀ।
ಪ್ರಾಪ್ತಕ್ಷೇತ್ರಾಧಿದೇವೈಕ್ಯಾ ದೃಢಭಕ್ತಿಸ್ವರೂಪಿಣೀ॥ ೧೩ ॥

ಪಂಚಾತಪಾಪರಿಕ್ಲಿಷ್ಟಾ ಪರಾಭೂತೇಂದ್ರಿಯಕ್ರಿಯಾ।
ಪರಿಪೂರ್ಣಾ ಪರಾಽಽಚಾರ್ಯಾ ಪರಜ್ಞಾನಪ್ರದಾಯಿನೀ॥ ೧೪ ॥

ಯೋಗಾನಂದಾದಿಸಚ್ಛಿಷ್ಯಾ ತ್ರಿಗುಣಾತೀತಸೇವಿತಾ।
ಶಾರದಾನಂದಸಂನ್ಯಸ್ತಯೋಗಕ್ಷೇಮಾ ಮನಸ್ವಿನೀ॥ ೧೫ ॥

ಪ್ರತ್ಯಕ್ಷರಾಧಿಕಾಽಽಸಕ್ತಾ ಸ್ವಗುರ್ವಾಜ್ಞಾನುಸಾರಿಣೀ।
ಅಂತರ್ವೈರಾಗ್ಯಸಂಪ್ರಾಪ್ತಾ ಲೋಕಾರ್ಥಪ್ರಾಣಧಾರಿಣೀ॥ ೧೬ ॥

ಸಂಸಾರಕರ್ಮಸಂಸಕ್ತಾ ಜನಾದರ್ಶಪ್ರದರ್ಶಿನೀ।
ಭವಾಂಭೋಧಿಜಲಾಕ್ಲಿನ್ನಾ ಭವಜನ್ಮಪ್ರದಾಯಿನೀ॥ ೧೭ ॥

ಶರದಾದಿಬಿಡಾಲಾಂತಸರ್ವಲೋಕಹಿತೈಷಿಣೀ।
ಅಪಾರಕರುಣಾಂಭೋಧಿಃ ಶಿಷ್ಯವಾತ್ಸಲ್ಯಪೂರಿತಾ॥ ೧೮ ॥

ಗೋದಾವರೀಜಗನ್ನಾಥಪುರೀರಾಮೇಶ್ವರಾಟಿಕಾ।
ಸಂಜಾತಜಾನಕೀಭಾವಾ ಸಮಾಚ್ಛನ್ನಸುರಾಕೃತಿಃ॥ ೧೯ ॥

ನಂದಿಕ್ಷೇತ್ರಸಮಾಯಾತಾ ಸ್ತೋಕಪರ್ವತಸಂಸ್ಥಿತಾ।
ಭಕ್ತವೃಂದಸಮಾರಾಧ್ಯಾ ತದಭೀಷ್ಟಪ್ರದಾಯಿನೀ॥ ೨೦ ॥

ನಿಜಲೀಲಾಸಮಾಪ್ತಿಜ್ಞಾ ಸ್ವೇಚ್ಛಾನಿರ್ಮುಕ್ತಬಂಧನಾ।
ಸಮದರ್ಶನವೇದಾಂತಸಾರತತ್ತ್ವೋಪದೇಶಿಕಾ॥ ೨೧ ॥

ಸೂಕ್ಷ್ಮದೇಹತ್ವಮಾಪನ್ನಾ ಸ್ವಭಕ್ತೋದ್ಧಾರದೀಕ್ಷಿತಾ।
ಇಷ್ಟಾರ್ಥದಾಽನಿಷ್ಟಹಂತ್ರೀ ಭಕ್ತಹೃತ್ಪದ್ಮವಾಸಿನೀ॥ ೨೨ ॥

ಸರ್ವಮಂಗಲಮಾಂಗಲ್ಯಾ ಸರ್ವಭಕ್ತಾರ್ಥಸಾಧಿಕಾ।
ಶರಣ್ಯಾ ತ್ರ್ಯಂಬಕಾ ಗೌರೀ ವೈಷ್ಣವೀ ಸನ್ನತಾಮರಾ॥ ೨೩ ॥

ಶ್ರೀಕಾಲೀಶಾರದಾಮಾತಾ ಸರ್ವದೇವೀಸ್ವರೂಪಿಣೀ।
ಇತಿ ಶ್ರೀಶಾರದಾನಾಮ್ನಾಮಷ್ಟೋತ್ತರಶತಂ ಕೃತಮ್॥ ೨೪ ॥

ಇತಿ ಶ್ರೀಶಾರದಾದೇವ್ಯಷ್ಟೋತ್ತರಶತನಾಮಸ್ತೋತ್ರಂ ಸಂಪೂರ್ಣಮ್

ಶ್ರೀಶಾರದಾದೇವೀ-ಅಷ್ಟೋತ್ತರಶತನಾಮಾವಲಿಃ

ಓಂ।। ಅಪವಿತ್ರಃ ಪವಿತ್ರೋ ವಾ ಸರ್ವಾವಸ್ಥಾಂ ಗತೋಽಪಿ ವಾ।
ಯಸ್ಸ್ಮರೇತ್ಪುಂಡರೀಕಾಕ್ಷಂ ಸ ಬಾಹ್ಯಾಭ್ಯಂತರಶ್ಶುಚಿಃ।।

ಓಂ।। ಸರ್ವಮಂಗಲಮಾಂಗಲ್ಯಂ ವರೇಣ್ಯಂ ವರದಂ ಶುಭಮ್।
ನಾರಾಯಣಂ ನಮಸ್ಕೃತ್ಯ ಸರ್ವಕರ್ಮಾಣಿ ಕಾರಯೇತ್।।

ಓಂ ರಾಮಚಂದ್ರಾತ್ಮಜಾಯೈ ನಮಃ
ಓಂ ದೇವ್ಯೈ ನಮಃ
ಓಂ ಶ್ಯಾಮಾಮಾತ್ರೇ ನಮಃ
ಓಂ ಸರಸ್ವತ್ಯೈ ನಮಃ
ಓಂ ಕರ್ಮಾತೀತಾಯೈ ನಮಃ
ಓಂ ಸ್ವಯಂಜಾತಾಯೈ ನಮಃ
ಓಂ ಜಗತ್ರಯಸುಖೈಷಿಣ್ಯೈ ನಮಃ
ಓಂ ಶಾರದಾಮಣಿಸನ್ನಾಮ್ನ್ಯೈ ನಮಃ
ಓಂ ದಯಾರ್ದ್ರಹೃದಯಾಯೈ ನಮಃ
ಓಂ ಸತ್ಯೈ ನಮಃ
ಓಂ ಶಾಂತಾಯೈ ನಮಃ
ಓಂ ಸೌಮ್ಯಾಯೈ ನಮಃ
ಓಂ ಸುಗಂಭೀರಾಯೈ ನಮಃ
ಓಂ ಭಾತೃವಾತ್ಸಲ್ಯರೂಪಿಣ್ಯೈ ನಮಃ
ಓಂ ಅನ್ನಪೂರ್ಣಾಯೈ ನಮಃ
ಓಂ ಆಹಾರದಾತ್ರ್ಯೈ ನಮಃ
ಓಂ ವಿಪ್ರಯೋಗವಿನಾಶಿನ್ಯೈ ನಮಃ
ಓಂ ಪಿತೃಸಾಹಾಯ್ಯದಾಪುತ್ರ್ಯೈ ನಮಃ
ಓಂ ಪೂಜಾಪುಷ್ಪಾವಚಾಯಿನ್ಯೈ ನಮಃ
ಓಂ ಬಾಲ್ಯೋಢಾಯೈ ನಮಃ
ಓಂ ಮುಗ್ಧಸತ್ಕನ್ಯಾಯೈ ನಮಃ
ಓಂ ಪತಿಸೇವಾಪರಾಯಣಾಯೈ ನಮಃ

ಓಂ ಕ್ರಂದಿತಾಽಽಭರಣಾಯೈ ನಮಃ
ಓಂ ಭೂಷಾಹೀನಾಯೈ ನಮಃ
ಓಂ ಸಹಜಸುಂದರ್ಯೈ ನಮಃ
ಓಂ ಪತ್ಯಾಪ್ತಸಕಲಜ್ಞಾನಾಯೈ ನಮಃ
ಓಂ ಪತಿದರ್ಶನಕೌತುಕಾಯೈ ನಮಃ
ಓಂ ತದ್ಧೇತುದುರ್ಗಮಾಧ್ವನ್ಯಾಯೈ ನಮಃ
ಓಂ ತತ್ಪ್ರೀತಿಸಮಲಂಕೃತಾಯೈ ನಮಃ
ಓಂ ತತ್ಪಾದಾರ್ಪಿತಸರ್ವಸ್ವಾಯೈ ನಮಃ
ಓಂ ತದರ್ಚಿತಪದಾಂಬುಜಾಯೈ ನಮಃ
ಓಂ ತತ್ಸಂಯುತಸಮಾಧಿಸ್ಥಾಯೈ ನಮಃ
ಓಂ ತದ್ದತ್ತಸುತಪಃಫಲಾಯೈ ನಮಃ
ಓಂ ಸಂಪ್ರಾಪ್ತಸರ್ವಮಾತೃತ್ವಾಯೈ ನಮಃ
ಓಂ ಸರ್ವಲೋಕೋಪಕಾರಿಕಾಯೈ ನಮಃ
ಓಂ ಸರ್ವಾರ್ತಿನಾಶಿನ್ಯೈ ನಮಃ
ಓಂ ಸ್ನಿಗ್ಧಾಯೈ ನಮಃ
ಓಂ ಸರ್ವಸೌಭಾಗ್ಯದಾಯಿನ್ಯೈ ನಮಃ
ಓಂ ರಾಮಕೃಷ್ಣಪ್ರಿಯಾಯೈ ನಮಃ
ಓಂ ಸುಶ್ರಿಯೈ ನಮಃ
ಓಂ ತಲ್ಲೀಲಾಪೂರ್ತಿಕಾರಿಣ್ಯೈ ನಮಃ
ಓಂ ತಚ್ಛಕ್ತ್ಯೈ ನಮಃ
ಓಂ ತದ್ಗತಪ್ರಾಣಾಯೈ ನಮಃ
ಓಂ ತದ್ಭಾವಾರಕ್ತರೂಪಿಣ್ಯೈ ನಮಃ
ಓಂ ನಿಗೂಢದಿವ್ಯಸೌಂದರ್ಯಾಯೈ ನಮಃ
ಓಂ ತಿರೋಹಿತಸುಚಿತ್ರಭಾಯೈ ನಮಃ
ಓಂ ಸ್ವೇಚ್ಛಾಸ್ವೀಕೃತಸಂಸಾರಾಯೈ ನಮಃ
ಓಂ ನಿರ್ಲಿಪ್ತಾಖಿಲಬಂಧನಾಯೈ ನಮಃ
ಓಂ ಉತ್ತಮಾದಿನಿಕೃಷ್ಟಾಂತಸರ್ವಕರ್ತವ್ಯಕಾರಿಣ್ಯೈ ನಮಃ
ಓಂ ನಿಷ್ಕಾಮಕರ್ಮನಿರತಾಯೈ ನಮಃ
ಓಂ ಸತ್ಕರ್ಮಾದರ್ಶವಿಗ್ರಹಾಯೈ ನಮಃ
ಓಂ ಪತಿದತ್ತಪರಾವಿದ್ಯಾಯೈ ನಮಃ

ಓಂ ತದಾಜ್ಞಾಪರಿಪಾಲಿನ್ಯೈ ನಮಃ
ಓಂ ಅಲಂಕೃತಗುರುಸ್ಥಾನಾಯೈ ನಮಃ
ಓಂ ಬದ್ಧಜೀವವಿಮೋಚಿಕಾಯೈ ನಮಃ
ಓಂ ದುಷ್ಟಚೌರಪರಿಷ್ಕರ್ತ್ರ್ಯೈ ನಮಃ
ಓಂ ಸರ್ವಸಜ್ಜನಸೌಹೃದಾಯೈ ನಮಃ
ಓಂ ಆಪಾಪಿಮಾತೃವಾತ್ಸಲ್ಯಾಯೈ ನಮಃ
ಓಂ ಸಾಧುಸಜ್ಜನರಕ್ಷಿಣ್ಯೈ ನಮಃ
ಓಂ ತೀರ್ಥಾಟನಪರಿಷ್ವಕ್ತಾಯೈ ನಮಃ
ಓಂ ಕ್ಷೇತ್ರತೀರ್ಥತ್ವದಾಯಿನ್ಯೈ ನಮಃ
ಓಂ ಪ್ರಾಪ್ತಕ್ಷೇತ್ರಾಧಿದೇವೈಕ್ಯಾಯೈ ನಮಃ
ಓಂ ದೃಢಭಕ್ತಿಸ್ವರೂಪಿಣ್ಯೈ ನಮಃ
ಓಂ ಪಂಚಾತಪಾಪರಿಕ್ಲಿಷ್ಟಾಯೈ ನಮಃ
ಓಂ ಪರಾಭೂತೇಂದ್ರಿಯಕ್ರಿಯಾಯೈ ನಮಃ
ಓಂ ಪರಿಪೂರ್ಣಾಯೈ ನಮಃ
ಓಂ ಪರಾಯೈ ನಮಃ
ಓಂ ಆಚಾರ್ಯಾಯೈ ನಮಃ
ಓಂ ಪರಜ್ಞಾನಪ್ರದಾಯಿನ್ಯೈ ನಮಃ
ಓಂ ಯೋಗಾನಂದಾದಿಸಚ್ಛಿಷ್ಯಾಯೈ ನಮಃ
ಓಂ ತ್ರಿಗುಣಾತೀತಸೇವಿತಾಯೈ ನಮಃ
ಓಂ ಶಾರದಾನಂದಸಂನ್ಯಸ್ತಯೋಗಕ್ಷೇಮಾಯೈ ನಮಃ
ಓಂ ಮನಸ್ವಿನ್ಯೈ ನಮಃ
ಓಂ ಪ್ರತ್ಯಕ್ಷರಾಧಿಕಾಽಽಸಕ್ತಾಯೈ ನಮಃ
ಓಂ ಸ್ವಗುರ್ವಾಜ್ಞಾನುಸಾರಿಣ್ಯೈ ನಮಃ
ಓಂ ಅಂತರ್ವೈರಾಗ್ಯಸಂಪ್ರಾಪ್ತಾಯೈ ನಮಃ
ಓಂ ಲೋಕಾರ್ಥಪ್ರಾಣಧಾರಿಣ್ಯೈ ನಮಃ
ಓಂ ಸಂಸಾರಕರ್ಮಸಂಸಕ್ತಾಯೈ ನಮಃ
ಓಂ ಜನಾದರ್ಶಪ್ರದರ್ಶಿನ್ಯೈ ನಮಃ
ಓಂ ಭವಾಂಭೋಧಿಜಲಾಕ್ಲಿನ್ನಾಯೈ ನಮಃ
ಓಂ ಭವಜನ್ಮಪ್ರದಾಯಿನ್ಯೈ ನಮಃ

ಓಂ ಶರದಾದಿಬಿಡಾಲಾಂತಸರ್ವಲೋಕಹಿತೈಷಿಣ್ಯೈ ನಮಃ
ಓಂ ಅಪಾರಕರುಣಾಂಭೋಧಯೇ ನಮಃ
ಓಂ ಶಿಷ್ಯವಾತ್ಸಲ್ಯಪೂರಿತಾಯೈ ನಮಃ
ಓಂ ಗೋದಾವರೀಜಗನ್ನಾಥಪುರೀರಾಮೇಶ್ವರಾಟಿಕಾಯೈ ನಮಃ
ಓಂ ಸಂಜಾತಜಾನಕೀಭಾವಾಯೈ ನಮಃ
ಓಂ ಸಮಾಚ್ಛನ್ನಸುರಾಕೃತಯೇ ನಮಃ
ಓಂ ನಂದಿಕ್ಷೇತ್ರಸಮಾಯಾತಾಯೈ ನಮಃ
ಓಂ ಸ್ತೋಕಪರ್ವತಸಂಸ್ಥಿತಾಯೈ ನಮಃ
ಓಂ ಭಕ್ತವೃಂದಸಮಾರಾಧ್ಯಾಯೈ ನಮಃ
ಓಂ ತದಭೀಷ್ಟಪ್ರದಾಯಿನ್ಯೈ ನಮಃ
ಓಂ ನಿಜಲೀಲಾಸಮಾಪ್ತಿಜ್ಞಾಯೈ ನಮಃ
ಓಂ ಸ್ವೇಚ್ಛಾನಿರ್ಮುಕ್ತಬಂಧನಾಯೈ ನಮಃ
ಓಂ ಸಮದರ್ಶನವೇದಾಂತಸಾರತತ್ತ್ವೋಪದೇಶಿಕಾಯೈ ನಮಃ
ಓಂ ಸೂಕ್ಷ್ಮದೇಹತ್ವಮಾಪನ್ನಾಯೈ ನಮಃ
ಓಂ ಸ್ವಭಕ್ತೋದ್ಧಾರದೀಕ್ಷಿತಾಯೈ ನಮಃ
ಓಂ ಇಷ್ಟಾರ್ಥದಾಯೈ ನಮಃ
ಓಂ ಅನಿಷ್ಟಹಂತ್ರ್ಯೈ ನಮಃ
ಓಂ ಭಕ್ತಹೃತ್ಪದ್ಮವಾಸಿನ್ಯೈ ನಮಃ
ಓಂ ಸರ್ವಮಂಗಲಮಾಂಗಲ್ಯಾಯೈ ನಮಃ
ಓಂ ಸರ್ವಭಕ್ತಾರ್ಥಸಾಧಿಕಾಯೈ ನಮಃ
ಓಂ ಶರಣ್ಯಾಯೈ ನಮಃ
ಓಂ ತ್ರ್ಯಂಬಕಾಯೈ ನಮಃ
ಓಂ ಗೌರ್ಯೈ ನಮಃ
ಓಂ ವೈಷ್ಣವ್ಯೈ ನಮಃ
ಓಂ ಸನ್ನತಾಮರಾಯೈ ನಮಃ
ಓಂ ಶ್ರೀಕಾಲೀಶಾರದಾಮಾತ್ರೇ ನಮಃ
ಓಂ ಸರ್ವದೇವೀಸ್ವರೂಪಿಣ್ಯೈ ನಮಃ

ಓಂ ಶ್ರೀಶಾರದಾದೇವ್ಯೈ ಸಮರ್ಪಿತಮಸ್ತು

– ಸ್ವಾಮಿ ಹರ್ಷಾನಂದ

ಶ್ರೀಶಾರದಾಚರಿತದಿಂದ

ಕಾಫಿ – ತ್ರಿತಾಲ

ಸಕಲದಿಶಾಸು ಮುದಂ ತನ್ವಾನೇ
ಸಕಲನಿಶಾಸು ಮಹೋ ವಿಧದಾನೇ।
ಜಯ ವಿಶ್ವ-ಜಗದಘ-ತಿಮಿರ-ನಾಶಿನಿ
ಜಯ ಜನನಿ ಜಯ ಜಯ ಜನನಿ ಜಯ॥

ನಂದಿತ-ಸಂತತಿ-ವಂದಿತ-ಚರಣಂ
ಭಯಹರಣಂ ತವ ಕಮಲ-ಸುಲಲಿತಮ್।
ಶರಣಾಗತ-ಮಾನವ-ದುಃಖ-ಹರೇ
ಶಿರಸಾ ವಂದೇ ಹೇ ಜಗದತುಲೇ॥

ಪ್ರತಿಯಮಾಲಯಂ ವೇಗವಚ್ಚಲಂ
ವಹತಿ ಜೀವನಂ ಪ್ರತ್ಯಹಂ ನರಃ।
ವಿಷಯವೈಭವಂ ಫೇನಬುದ್ಬುದಃ
ಭಜತ ಶಾರದಾಮೀಶ್ವರೀಂ ಪರಾಮ್॥

ತಿಮಿರತಾರಣಂ ಭಕ್ತಿಕಾರಣಂ
ವಿಷಯಶೋಷಣಂ ವೇದಬೋಧನಮ್।
ಪರಪದಸ್ಯ ಮೇ ಪ್ರಾಪಣಂ ಕಣಂ
ಚರಣಶೋಭನಂ ದೇಹಿ ಶಾರದೇ॥

ಮಾತಾ ಮೇ ಶಾರದಾದೇವೀ ರಾಮಕೃಷ್ಣಪ್ರಭುಃ ಪಿತಾ।
ಬಾಂಧವಾಃ ಸಕಲಾ ಭಕ್ತಾಃ ಸ್ವದೇಶೋ ಭುವನತ್ರಯಮ್॥

ಶ್ರೀಶಾರದಾ-ನಾಮ-ಸಂಕೀರ್ತನಮ್

ಬೃಂದಾವನ ಸಾರಂಗ - ತ್ರಿತಾಲ

ಧ್ಯಾಯೇದ್ ಹೃದಂಬುಜೇ ದೇವೀಂ ತರುಣಾರುಣ-ವಿಗ್ರಹಾಮ್।
ವರಾಭಯಕರಾಂ ಶಾಂತಾಂ ಸ್ಮಿತೋತ್ಫುಲ್ಲ-ಮುಖಾಂಬುಜಾಮ್॥

ಸ್ಥಲಪದ್ಮಪ್ರತೀಕಾಶ-ಪಾದಾಂಭೋಜ-ಸುಶೋಭನಾಮ್।
ಶುಕ್ಲಾಂಬರಧರಾಂ ಧೀರಾಂ ಲಜ್ಜಾಪಟ-ವಿಭೂಷಿತಾಮ್॥

ಪ್ರಸನ್ನಾಂ ಧರ್ಮ-ಕಾಮಾರ್ಥ-ಮೋಕ್ಷದಾಂ ವಿಶ್ವಮಂಗಲಾಮ್।
ಸ್ವನಾಥ-ವಾಮ-ಭಾಗಸ್ಥಾಂ ಭಕ್ತಾನುಗ್ರಹಕಾರಿಣೀಮ್॥

ತ್ವಂ ಮೇ ಬ್ರಹ್ಮಸನಾತನಿ	ಮಾ	ಶಾರದೇ ಈಶ್ವರಿ ಸುಭಗೇ	ಮಾ
ಬ್ರಹ್ಮಾನಂದಸ್ವರೂಪಿಣಿ	ಮಾ	ಬ್ರಹ್ಮಶಕ್ತಿಸುಖದಾಯಿನಿ	ಮಾ
ಸಚ್ಚಿತ್ಸುಖಮಯರೂಪಿಣಿ	ಮಾ	ಸೃಷ್ಟಿಸ್ಥಿತಿಲಯಕಾರಿಣಿ	ಮಾ
ಬ್ರಹ್ಮಸುಧಾಂಬುಧಿಕೇಲಿನಿ	ಮಾ	ಬ್ರಹ್ಮಾತ್ಮೈಕ್ಯಶುಭಂಕರಿ	ಮಾ॥ ೧
ಜೀವೇಶ್ವರಭಿತ್ಕೌತುಕಿ	ಮಾ	ಅಗಾಧಲೀಲಾರೂಪಿಣಿ	ಮಾ
ಚಿನ್ಮಯರೂಪವಿಲಾಸಿನಿ	ಮಾ	ಬಹಿರಾಂತರಸುಖವರ್ಧಿನಿ	ಮಾ
ಜ್ಞಾನಾನಂದಪ್ರವರ್ಷಿಣಿ	ಮಾ	ದಿವ್ಯರಸಾಮೃತವರ್ಷಿಣಿ	ಮಾ
ಮೂಲಾಧಾರನಿವಾಸಿನಿ	ಮಾ	ಸಹಸ್ರಾರಶಿವಸಂಗಿನಿ	ಮಾ॥ ೨
ಆದ್ಯಾಶಕ್ತಿಸ್ವರೂಪಿಣಿ	ಮಾ	ಚಿತ್ಸುಖದಾಯಿನಿ ತಾರಿಣಿ	ಮಾ
ಶುಭಮತಿದಾಯಿನಿ ಶಂಕರಿ	ಮಾ	ದುರ್ಗತಿದುರ್ಮತಿನಾಶಿನಿ	ಮಾ
ಮಹಾಕಾಲಹೃದಿ ನರ್ತಿನಿ	ಮಾ	ಜೀವಶಿವಾಂತರವರ್ತಿನಿ	ಮಾ
ಜಗಜ್ಜನನಿ ಜಯದಾಯಿನಿ	ಮಾ	ತಡಿಲ್ಲಸಿತಸೌದಾಮಿನಿ	ಮಾ॥ ೩
ಸೀತಾರಾಮಾಕಾರಿಣಿ	ಮಾ	ಕೃಷ್ಣರಾಧಿಕಾರೂಪಿಣಿ	ಮಾ
ಕಮನೀಯಾಕೃತಿಧಾರಿಣಿ	ಮಾ	ಭವಸಾಗರಭಯಹಾರಿಣಿ	ಮಾ
ಶಾಂತಿಸೌಖ್ಯಚಿರದಾಯಿನಿ	ಮಾ	ಗಿರಿಶಾಂಕೋಪರಿ ವಾಸಿನಿ	ಮಾ
ಹರಾರ್ಧನಾರೀರೂಪಿಣಿ	ಮಾ	ನಟನಮಹೇಶ್ವರಸಂಗಿನಿ	ಮಾ॥ ೪

ಹರಹರ್ಷೋತ್ಕರಿನರ್ತಿನಿ	ಮಾ	ಶಾರದೇಶ್ವರಿ ಷೋಡಶಿ	ಮಾ
ಸಾಧಕಮಾನಸಶೋಧಿನಿ	ಮಾ	ಸರ್ವಸುಭಾಗ್ಯಪ್ರಸಾದಿನಿ	ಮಾ
ಗುಹಗಜಮುಖಜನಿದಾಯಿನಿ	ಮಾ	ಏಕಾನೇಕವಿಭಾಗಿನಿ	ಮಾ
ಹಿಮಗಿರಿನಂದಿನಿ ಲಾಸಿನಿ	ಮಾ	ಸರ್ವಚರಾಚರಸರ್ಜಿನಿ	ಮಾ।। ೫

ಸರ್ವಭವಾಮಯವಾರಿಣಿ	ಮಾ	ಸರ್ವಜಗತ್ತ್ರಯಸಾಕ್ಷಿಣಿ	ಮಾ
ನಿಖಿಲಾಧೀಶ್ವರಿ ಯೋಗಿನಿ	ಮಾ	ಏಲಾಗಂಧಸುಕೇಶಿನಿ	ಮಾ
ಚಿನ್ಮಯಸುಂದರರೂಪಿಣಿ	ಮಾ	ಪರಮಾನಂದತರಂಗಿಣಿ	ಮಾ
ಕ್ಷಾಂತಿಮಹಾಗುಣವರ್ಷಿಣಿ	ಮಾ	ಕಾಂತಿವರಾಭಯದಾಯಿನಿ	ಮಾ।। ೬

ಸದ್ಗತಿಸನ್ಮತಿದಾಯಿನಿ	ಮಾ	ಭವತಾರಿಣಿ ಕರುಣೇಶ್ವರಿ	ಮಾ
ತ್ರಿಪುರೇ ಸುಂದರಿ ಮೋಹಿನಿ	ಮಾ	ಬ್ರಹ್ಮಾಂಡೋದರಧಾರಿಣಿ	ಮಾ
ಪ್ರೇಮಾನಂದಪ್ರವರ್ಷಿಣಿ	ಮಾ	ಸರ್ವಚರಾಚರಪಾಲಿನಿ	ಮಾ
ಭುವನಚತುರ್ದಶಪ್ರಸವಿಣಿ	ಮಾ	ನಾನಾಲೀಲಾಕಾರಿಣಿ	ಮಾ।। ೭

ವಿವಿಧವಿಭೂತಿವಿಧಾರಿಣಿ	ಮಾ	ಜ್ಞಾನಾಲೋಕಪ್ರದಾಯಿನಿ	ಮಾ
ವಿಶ್ವಕ್ರೀಡಾಕೌತುಕಿ	ಮಾ	ವಿಶ್ವಾಧಿಷ್ಠಿತಚಿನ್ಮಯಿ	ಮಾ
ಮಂದಸ್ಮಿತಸ್ಮರಹಾರಿಣಿ	ಮಾ	ಭಕ್ತಾನುಗ್ರಹಕಾರಿಣಿ	ಮಾ
ಯೋಗಭೋಗವರದಾಯಿನಿ	ಮಾ	ಶಾಂತಿಸುಧಾನಿಸ್ಸ್ಯಂದಿನಿ	ಮಾ।। ೮

ರಮ್ಯಕಾಂತಿಚಿರಧಾರಿಣಿ	ಮಾ	ಸಮಸ್ತಸುಗುಣಾಭೂಷಿಣಿ	ಮಾ
ಸಮಾಧಿಚಿರಚಿತಿದಾತಿನಿ	ಮಾ	ವೀರ್ಯಬಲಾಭಯಕಾರಿಣಿ	ಮಾ
ತಾಪತ್ರಯಭಯಹಾರಿಣಿ	ಮಾ	ಸರ್ವೋತ್ತುಂಗಸುವಾಸಿನಿ	ಮಾ
ಪ್ರಸನ್ನವರದೇ ಭೈರವಿ	ಮಾ	ಹವನ-ಜಪಾರ್ಚನ-ಸಾಧಿನಿ	ಮಾ।। ೯

ಚಂಡಾಸುರಖಲಘಾತಿನಿ	ಮಾ	ಸಕಲದೇವಜಯಸಾಧಿನಿ	ಮಾ
ದುಷ್ಟಮುಂಡವಧಕಾರಿಣಿ	ಮಾ	ಚಾಮುಂಡೇಶ್ವರಿ ದರ್ಪಿಣಿ	ಮಾ
ಮಾಹಿಷದರ್ಪವಿನಾಶಿನಿ	ಮಾ	ಮಾಹೇಶ್ವರಸುಖವರ್ಧಿನಿ	ಮಾ
ಮಹಿಷಾಸುರಖಲಮರ್ದಿನಿ	ಮಾ	ತ್ರಿಗುಣತ್ರಿಲೋಕತ್ರಿರೂಪಿಣಿ	ಮಾ।। ೧೦

ನಿರ್ಗುಣಸಗುಣವಿಚಿತ್ರಿಣಿ ಮಾ ಕಾರಿತಧ್ಯಾನಾನಂದಿನಿ ಮಾ
ಭ್ರಾಂತಿರೋಗವಿಷಹಾರಿಣಿ ಮಾ ಕಾಂತಿಯೋಗಸುಖದಾಯಿನಿ ಮಾ
ವೀರನರೇಂದ್ರಪ್ರಹರ್ಷಿಣಿ ಮಾ ಸಮಸ್ತಲೋಕೋದ್ಧಾರಿಣಿ ಮಾ
ರಾಮಕೃಷ್ಣನವರೂಪಿಣಿ ಮಾ ಧರ್ಮಗ್ಲಾನಿವಿನಾಶಿನಿ ಮಾ।। ೧೧

ಧರ್ಮಸ್ಥಾಪನಕಾರಿಣಿ ಮಾ ರಮ್ಯಸಹಜಪಥದರ್ಶಿನಿ ಮಾ
ಮಾತೃಭಾವಮುಖಶೋಧಿನಿ ಮಾ ನಿರ್ಮಲಭಕ್ತೋತ್ಕರ್ಷಿಣಿ ಮಾ
ದಿವ್ಯಾದ್ಭುತಚರಿತಾರ್ಥಿನಿ ಮಾ ರಾಮಕೃಷ್ಣಸಹಧರ್ಮಿಣಿ ಮಾ
ಜಯರಾಮಾಖ್ಯಸುವಾಟಿನಿ ಮಾ ಮೃಗಕೇಸರಿವರವಾಹಿನಿ ಮಾ।। ೧೨

ದುರ್ಗಹಿಮಾಚಲನಂದಿನಿ ಮಾ ನರೇಂದ್ರಹೃದಯನಿವಾಸಿನಿ ಮಾ
ದರ್ಪಣಚಿತ್ತವಿಭಾಸಿನಿ ಮಾ ಚೇತೋದರ್ಪಣಕಾಶಿನಿ ಮಾ
ನವನವರೂಪಸುದರ್ಶಿನಿ ಮಾ ಲೋಕೋತ್ತರಕೃತಿದರ್ಶಿನಿ ಮಾ
ಸುಂದರರೂಪವಿಕಾಶಿನಿ ಮಾ ದಿವ್ಯಗುಣಾಕರಧಾರಿಣಿ ಮಾ।। ೧೩

ದುರ್ಬಲಸಬಲಸುಕಾರಿಣಿ ಮಾ ದುಃಖದೈನ್ಯಭಯನಾಶಿನಿ ಮಾ
ಸರ್ವಭೂತಹಿತಸಾಧಿನಿ ಮಾ ಸಮಸ್ತಲೋಕಾಭಯಕರಿ ಮಾ
ದುರ್ಗತಿನಾಶಿನಿ ದುರ್ಗೇ ಮಾ ನಾರಾಯಣಿ ಜಗದಾದ್ಯೇ ಮಾ
ಜಯ ಜಯ ಜಯ ಜಗದಾದ್ಯೇ ಮಾ ನಾರಾಯಣಿ ಜಯ ದುರ್ಗೇ ಮಾ।। ೧೪

ತ್ವಂ ಮೇ ಬ್ರಹ್ಮಸನಾತನಿ ಮಾ ಶಾರದೇ ಈಶ್ವರಿ ಸುಭಗೇ ಮಾ
ತ್ವಂ ಮೇ ಬ್ರಹ್ಮಸನಾತನಿ ಮಾ ಶಾರದೇ ಈಶ್ವರಿ ಸುಭಗೇ ಮಾ
ತ್ವಂ ಮೇ ಬ್ರಹ್ಮಸನಾತನಿ ಮಾ ಶಾರದೇ ಈಶ್ವರಿ ಸುಭಗೇ ಮಾ
ತ್ವಂ ಮೇ ಬ್ರಹ್ಮಸನಾತನಿ ಮಾ ಶಾರದೇ ಈಶ್ವರಿ ಸುಭಗೇ ಮಾ
ತ್ವಂ ಮೇ ಬ್ರಹ್ಮಸನಾತನಿ ಮಾ ಶಾರದೇ ಈಶ್ವರಿ ಸುಭಗೇ ಮಾ

– ಸ್ವಾಮಿ ಗುಣಾತೀತಾನಂದ

ವರದಾ ಭವ ಸರ್ವದಾ

ಅಂಬಿಕಾ ಚಂಡಿಕಾದೇವೀ ಬ್ರಹ್ಮಾಣೀ ಬ್ರಹ್ಮಚಾರಿಣೀ।
ತ್ರಾಹಿ ಮಾಂ ಪಾಹಿ ಮಾಂ ದೇವಿ ವರದಾ ಭವ ಸರ್ವದಾ॥

ಓಂಶಕ್ತಿಸ್ತ್ವಂ ಪರಾಶಕ್ತಿರಾದ್ಯಾಶಕ್ತಿಃ ಸನಾತನೀ।
ತ್ರಾಹಿ ಮಾಂ ಪಾಹಿ ಮಾಂ ದೇವಿ ವರದಾ ಭವ ಸರ್ವದಾ॥

ರಾಜರಾಜೇಶ್ವರೀ ರಮ್ಯಾ ಜ್ಞಾನಾಕ್ಷೀ ಮಂತ್ರರೂಪಿಣೀ।
ತ್ರಾಹಿ ಮಾಂ ಪಾಹಿ ಮಾಂ ದೇವಿ ವರದಾ ಭವ ಸರ್ವದಾ॥

ಮೀನಾಕ್ಷೀ ತ್ವಂ ವಿಶಾಲಾಕ್ಷೀ ಕಾಮಾಕ್ಷೀ ಶಕ್ತಿದಾಯಿನೀ।
ತ್ರಾಹಿ ಮಾಂ ಪಾಹಿ ಮಾಂ ದೇವಿ ವರದಾ ಭವ ಸರ್ವದಾ॥

ಭದ್ರಕಾಲೀ ಜಗದ್ಧಾತ್ರೀ ಕನ್ಯಕಾಪರಮೇಶ್ವರೀ।
ತ್ರಾಹಿ ಮಾಂ ಪಾಹಿ ಮಾಂ ದೇವಿ ವರದಾ ಭವ ಸರ್ವದಾ॥

ಹಂಸಿನೀ ವೈಷ್ಣವೀದೇವೀ ಶ್ರೀದುರ್ಗಾಪರಮೇಶ್ವರೀ।
ತ್ರಾಹಿ ಮಾಂ ಪಾಹಿ ಮಾಂ ದೇವಿ ವರದಾ ಭವ ಸರ್ವದಾ॥

ಕಾತ್ಯಾಯನೀ ಕಾಲರಾತ್ರೀ ಕೌಮಾರೀ ಕರುಣಾಮಯೀ।
ತ್ರಾಹಿ ಮಾಂ ಪಾಹಿ ಮಾಂ ದೇವಿ ವರದಾ ಭವ ಸರ್ವದಾ॥

ಶ್ರೀಚಾಮುಂಡೇಶ್ವರೀ ದೇವೀ ಮಹಿಷಾಸುರಮರ್ದಿನೀ।
ತ್ರಾಹಿ ಮಾಂ ಪಾಹಿ ಮಾಂ ದೇವಿ ವರದಾ ಭವ ಸರ್ವದಾ॥

ಮಹಾಕಾಲೀ ಮಹಾಲಕ್ಷ್ಮೀರ್ಮಹಾವಿದ್ಯಾ ಸರಸ್ವತೀ।
ತ್ರಾಹಿ ಮಾಂ ಪಾಹಿ ಮಾಂ ದೇವಿ ವರದಾ ಭವ ಸರ್ವದಾ॥

ಶ್ರೀಮಾತಾ ಶಾರದಾದೇವೀ ಭವಾನೀ ಭುವನೇಶ್ವರೀ।
ತ್ರಾಹಿ ಮಾಂ ಪಾಹಿ ಮಾಂ ದೇವಿ ವರದಾ ಭವ ಸರ್ವದಾ॥

ಪ್ರಪನ್ನೋಽಸ್ಮಿ ಶಕ್ತಿಮಾತಃ ಶರಣಾಗತವತ್ಸಲೇ।
ತ್ರಾಹಿ ಮಾಂ ಪಾಹಿ ಮಾಂ ದೇವಿ ವರದಾ ಭವ ಸರ್ವದಾ॥

– ಸ್ವಾಮಿ ಪುರುಷೋತ್ತಮಾನಂದ

ನಮಾಮಿ ಭವತಾರಿಣಿ

ಶ್ರೀದಕ್ಷಿಣೇಶ್ವರಾಂತಸ್ಥೇ ನಮಾಮಿ ಭವತಾರಿಣಿ।
ಮಹಾಕಾಲಮನೋರಮೇ ನಮಾಮಿ ಭವತಾರಿಣಿ।
ಗಣೇಶಸ್ಕಂದಸಂಪ್ರೀತೇ ನಮಾಮಿ ಭವತಾರಿಣಿ।
ರಾಸಮಣೀಸಮಾರಾಧ್ಯೇ ನಮಾಮಿ ಭವತಾರಿಣಿ।
ಶ್ರೀರಾಮಕೃಷ್ಣಸಂಪೂಜ್ಯೇ ನಮಾಮಿ ಭವತಾರಿಣಿ।
ದೇವೀಶ್ರೀಶಾರದಾರೂಪೇ ನಮಾಮಿ ಭವತಾರಿಣಿ।
ತಪಸ್ವಿಗಣಸಂಸೇವ್ಯೇ ನಮಾಮಿ ಭವತಾರಿಣಿ।
ಅಭೂತಪೂರ್ವಚರಿತೇ ನಮಾಮಿ ಭವತಾರಿಣಿ।
ಸೌಮ್ಯಗಂಭೀರವದನೇ ನಮಾಮಿ ಭವತಾರಿಣಿ।
ಆದ್ಯಾಶಕ್ತಿಸ್ವರೂಪಿಣಿ ನಮಾಮಿ ಭವತಾರಿಣಿ।
ಆತ್ಮಶಕ್ತಿಪ್ರದಾಯಿನಿ ನಮಾಮಿ ಭವತಾರಿಣಿ।
ನಾನಾಲೀಲಾಪ್ರದರ್ಶಿನಿ ನಮಾಮಿ ಭವತಾರಿಣಿ।
ನರೇಂದ್ರಾದಿಪ್ರಹರ್ಷಿಣಿ ನಮಾಮಿ ಭವತಾರಿಣಿ।
ಸಾಧಕಜನತೋಷಿಣಿ ನಮಾಮಿ ಭವತಾರಿಣಿ।
ಮಹಾಮೃತ್ಯುವಿಮೋಚನಿ ನಮಾಮಿ ಭವತಾರಿಣಿ।
ಸರ್ವೇಭ್ಯಃ ಶುಭದಾಯಿನಿ ನಮಾಮಿ ಭವತಾರಿಣಿ।

– ಸ್ವಾಮಿ ಪುರುಷೋತ್ತಮಾನಂದ

ಕೀರ್ತನ – ಕಹರವಾ

ಜಯ ಜಯ ಜನನೀ, ಜಯ ಶ್ರೀಸಾರದಾಮಣಿ
ಕರುಣಾರೂಪಿಣಿ ಜಯ ಮಾ।
ಆದ್ಯಾಶಕತಿ, ಪರಮಾ ಪ್ರಕೃತಿ
ಅಶರಣಗತಿ ತುಮಿ ಮಾ॥

ಜಯ ಜಗತಾರಿಣೀ ಭವಭಯಹಾರಿಣೀ
ದುರ್ಗತಿನಿವಾರಿಣೀ ಮಾ।
ಸಿದ್ಧಿಪ್ರದಾಯಿನೀ ಮುಕ್ತಿವಿಧಾಯಿನೀ
ಜೀವಗತಿದಾಯಿನೀ ಮಾ॥

ನಿಖಿಲ ಜಗತಮಾತಾ ಜೀವಕಲ್ಯಾಣರತಾ
ಲಜ್ಜಾಪಟಾವೃತಾ ಮಾ।
ದುರ್ಜನ ಸಜ್ಜನ ಸಂತಾನ ಅಗಣನ
ಪಾಲನಕಾರಿಣೀ ಮಾ॥

ಜಯ ಸಾರದೇಶ್ವರೀ ಸೀತಾ ರಾಧಾ ಮಾತಾ ಮೇರೀ
ಯಶೋಧರಾ ವಿಷ್ಣುಪ್ರಿಯಾ ಮಾ।
ಯುಗದೇವವಂದಿತಾ ಸುರನರ ಸೇವಿತಾ
ನಮೋ ನಾರಾಯಣಿ ಮಾ॥

– ಸ್ವಾಮಿ ಚಂಡಿಕಾನಂದ

ದೇಸ್ – ಕವಾಲೀ

ದೇ ಗೋ ಮಾ ದೇಖಾ ದೇ ಸಾರದೇ ಶುಭದೇ।
ಜ್ಞಾನ ಭಕತಿ ದೇ ಜ್ಞಾನ ದೇ ಮಾ ಜ್ಞಾನದೇ॥

ತಾಪಿತ ತಾರಣೇ ಏಲೇ ಯದಿ ಕರುಣಾಯ್।
ಆಮಾರೇ ಕೇನೊ ಮಾ ತಬೇ
ರಾಖಿಬೇ ನಾ ರಾಂಗಾ ಪಾಯ್॥

ದಿನ ಜಾಯ್ ಆಯು ಜಾಯ್
ದೇಖಿತೇ ದೇಖಿತೇ ಹಾಯ್।
ಆರ್ ಕಬೇ ದಿಬಿ ದೇಖಾ
ಬೋಲ್ ಗೋ ಮಾ ವರದೇ॥

– ಸ್ವಾಮಿ ಚಂಡಿಕಾನಂದ

ಬೃಂದಾವನಿ ಸಾರಂಗ – ಕಹರವಾ

ಬ್ರಹ್ಮಶಕ್ತಿ ಮಾ ಶಾರದಾ ಮಾತಾ
ವಿಶ್ವ ಕಾ ತುಮ್ ಆಧಾರ್।
ಪ್ರಸನ್ನವದನಾ ಹೋಕರ್ ಮಾತಾ
ಕರೋ ಮುಝೇ ಭವ ಪಾರ್॥

ಜನಮ ಜನಮ ಕಾ ಇಂತಜಾರ ಮೇ
ಖಡಾ ಹೂಂ ತೇರೇ ದ್ವಾರ್।
ನಾಮ ತುಮ್ಹಾರಾ 'ದಯಾಮಯೀ' ಮಾ
ಖೋಲೋ ಹೃದಯ್ ಕಾ ದ್ವಾರ್॥

ಏಕ ಏಕ ದಿನ ಬೀತ ರಹಾ ಹೈ
ಕರಕೇ ಜೀವನ ಅಸಾರ್।
'ಪುತ್ರವತ್ಸಲಾ' ನಾಮ್ ತುಮ್ಹಾರಾ
ಖೋಲೋ ಹೃದಯ್ ಕಾ ದ್ವಾರ್॥

ಅನಾಥ ಔರ್ ದುರ್ಬಲ ಬಾಲಕ
ಮೈ ಪ್ರಣಾಮ ಬಾರಂಬಾರ್।
'ಮಹಾಶಕ್ತಿ' ಮಾ ನಾಮ್ ತುಮ್ಹಾರಾ
ಖೋಲೋ ಹೃದಯ್ ಕಾ ದ್ವಾರ್॥

– ಸ್ವಾಮಿ ಶ್ರೀಕಾಂತಾನಂದ

ದರಬಾರೀ ಕಾನಡಾ – ತೇವರಾ

ಶ್ರೀರಾಮಕೃಷ್ಣ ಪ್ರೇಮಸುರಧುನೀ
ಕರುಣಾರೂಪಿಣೀ ಮಾ ಆಮಾರ್॥

ಆಸಿಲೇ ಧರಾಯ್ ಧರಿ ನರ ಕಾಯ್
ಜುಡಾತೇ ತಾಪಿತ ಹಿಯಾ ಸಬಾರ್॥

ನಿತ್ಯಶುದ್ಧ ಚಿನ್ಮಯಕಾಯ್
ಶ್ರೀರಾಮಕೃಷ್ಣ ಅರುಣಿಮಾ ತಾಯ್।
ಅರೂಪ ಉಥಲೇ ಓರೂಪ ಆಭಾಯ್
ಪರಾಣ ಮಾ ತಾಯ್ ಜಗಜನಾರ್॥

ನಿತ್ಯನಂದಿತಾ ನಿಖಿಲವಂದಿತಾ
ಶ್ರೀರಾಮಕೃಷ್ಣ ಆರಾಧಿತಾ।
ಗುಣಾತೀತಾ ತುಮಿ ಗುಣಮಯೀ ದೇವೀ
ತುಮಿ ಮಾತಾ ಪುನಃ ತುಮಿ ಪಿತಾ॥

ಸಾಧುಸಜ್ಜನಜನನೀ ತುಮಿ ಮಾ
ಅಸಾಧು ದುರ್ಜನ ಸುತ ತೋಮಾರ್।
ಬಹೇ ನಿರಂತರ ಅಂತಹೀನ ಧಾರ್
ತವ ಅನಂತ ಕರುಣಾ ಧಾರ್॥

– ಸ್ವಾಮಿ ಚಂಡಿಕಾನಂದ

ಸ್ವಾಮಿ ವಿವೇಕಾನಂದ ಸಂಕೀರ್ತನೆ

ಮಧುಮಾದ ಸಾರಂಗ – ಕಹರವಾ

ಓ ಬಂದ ಶ್ರೀಗುರು ವಿವೇಕಾನಂದ
ಆ ಧ್ರುವಮಂಡಲದಿಂದ॥

ಮೊರೆಯುವ ಕಡಲಿಗೆ ಹಾರಿ ಧುಮುಕಿದ
ತೆರೆಗಳ ಸೀಳಿದ, ಈಜಿದ, ನುಗ್ಗಿದ
ಗಟ್ಟಿ ಬಂಡೆಯಲಿ ಬೇರೂರಿದ
ಬಾನೆತ್ತರ ಬೆಳೆದ
ಬೆಳಕಿನ ಗೋಪುರವಾದ॥

ದಕ್ಷಿಣೇಶ್ವರದ ವಿದ್ಯುತ್ ಕೇಂದ್ರದ ಕೋಶಾಗಾರ
ಪೂರ್ವಪಶ್ಚಿಮಕೆ ತಂತಿಯ ಹಾಯಿಸಿ
ಕೊಟ್ಟನು ಬೆಳಕಿನ ಆಹಾರ
ಕೊಲಂಬೋದಿಂದಾಲ್ಮೋರದ ತನಕವು
ಇವನದೆ ಮಿಂಚಿನ ತೇರು
ಇವನಡಿಗಳ ನುಡಿಗಳ ಸ್ಪರ್ಶಕೆ ಝುಗ್ಗನೆ
ಹತ್ತದೆ ಇದ್ದವರಾರು?॥

ವಜ್ರದ ಮೈ, ಉಕ್ಕಿನ ನರ, ಕುಡಿಮಿಂಚಿನ ಕಣ್ಣು
ಗುಡುಗಿನ ದನಿ, ಹೊನಲಿನ ನಡೆ,
ಎದೆ ಬೆಳುದಿಂಗಳ ಹಣ್ಣು
ಕವಿ, ಋಷಿ, ಯೋಗಿ, ಸಂತ
ಲೋಕಾದ್ಯಂತ ನಡೆವ ವಸಂತ॥

– ಜಿ. ಎಸ್. ಶಿವರುದ್ರಪ್ಪ

ಮಾಲಕೌಂಸ್ – ದಾದರಾ

ಕ್ಷೀಣಪ್ರಾಣ ಹೀನತ್ರಾಣ
ದೀನ ಭಾರತೀಯ ಜನಕೆ।
ಪ್ರಾಣ ಮಾನ ದಾನಗೈದ
ಮಾನವೇಂದ್ರ ಸ್ವಾಮಿಯೇ।।

'ಸ್ಮರಿಸಿ ನಿಮ್ಮ ಹಿರಿಯ ಪದವ
ಧರಿಸಿ ಹೆಮ್ಮೆ ಧೈರ್ಯ ಬಲವ।
ಸಿರಿಯ ಆತ್ಮ ನೀವು' ಎನುತ
ಮೊರೆದ ಅಭಯವಾಣಿಯೇ।।

'ತ್ಯಾಗ ಸೇವೆ ನಿಮ್ಮ ನಾಡ
ಭಾಗ್ಯವೆಂದು ನಂಬಿ ನಡೆಯೆ।
ಭೋಗ ಯೋಗ ಸಿದ್ಧ'ವೆಂದ
ಯೋಗಿವರನೆ ವಂದಿಪೆ।।

– ಸ್ವಾಮಿ ಶಾಸ್ತ್ರಾನಂದ

ಕೇದಾರ – ಕವಾಲೀ

ಜಯ ವೀರೇಶ್ವರ ವಿವೇಕಭಾಸ್ಕರ
ಜಯ ಜಯ ಶ್ರೀ ವಿವೇಕಾನಂದ।
ಇಂದುನಿಭಾನನ ಸುಂದರಲೋಚನ
ವಿಶ್ವಮಾನವಚಿರವಂದ್ಯ।।

ಪ್ರೇಮ ಟಲಟಲ ಕಾಂತಿ ಸುವಿಮಲ
ಅಧಿಗತ ವೇದವೇದಾಂತ।
ತ್ಯಾಗ ತಿತಿಕ್ಷಾ ತಪಸ್ಯಾ ಉಜ್ವಲ
ಚಿತ್ತ ನಿರಮಲ ಶಾಂತ।।

ಕರ್ಮ-ಭಕ್ತಿ-ಜ್ಞಾನ ತ್ರಿಶೂಲಧಾರಣ
ಛೇದನ ಜೀವ ಮೋಹಬಂಧ।
ಬ್ರಹ್ಮಪರಾಯಣ ನಮೋ ನಾರಾಯಣ
ದೇಹಿ ದೇಹಿ ಚರಣಾರವಿಂದ॥

– ಸ್ವಾಮಿ ಚಂಡಿಕಾನಂದ

ಅಡಾಣಾ – ತೇವರಾ

ಜಯ ವಿವೇಕಾನಂದ ಗುರುವರ
ಭುವನಮಂಗಲಕಾರಿ।
ಚಿರಸಮಾಧಿಯ ಗಿರಿಶಿಖರದಿಂ
ನರರ ಸೇವೆಗೆ ಇಳಿದ ನರವರ॥

ಸುಪ್ತದೈವರೆ ಏಳಿರೇಳಿ
ಲುಪ್ತಪದವಿಯ ಮರಳಿ ತಾಳಿ।
ಸಪ್ತ ಭುವಿಗಳ ಆಳಿರೆನುತ
ದೀಪ್ತವಾಣಿಯ ಜಗದಿ ಮೊಳಗಿಹೆ॥

ವಿಶ್ವವ್ಯಾಪಕ ಪ್ರೇಮಮೂರ್ತಿಯೇ
ವಿಶ್ವದ್ಯೋತಕ ಪರಮಜ್ಞಾನಿಯೇ।
ವಿಶ್ವಮುಕ್ತಿ ಸಮರ್ಪಿತಾತ್ಮನೆ
ವಿಶ್ವವಂದ್ಯನೆ ಜಯತು ಜಯತು॥

– ಸ್ವಾಮಿ ಶಾಸ್ತ್ರಾನಂದ

ಛಾಯಾ ಖಮಾಜ್ – ಕವಾಲಿ

ಮೂರ್ತಮಹೇಶ್ವರಮುಜ್ಜ್ವಲ-ಭಾಸ್ಕರ-
ಮಿಷ್ಟಮಮರ-ನರ-ವಂದ್ಯಮ್॥

ವಂದೇ ವೇದತನುಮುಜ್ಝಿತ-ಗರ್ಹಿತ-
ಕಾಮಕಾಂಚನಬಂಧಮ್॥

ಕೋಟಿಭಾನು-ಕರದೀಪ್ತ ಸಿಂಹಮಹೋ
ಕಟಿತಟ-ಕೌಪೀನವಂತಮ್।
ಅಭೀರಭೀಃ ಹುಂಕಾರನಾದಿತದಿಙ್ಮುಖ-
ಪ್ರಚಂಡ-ತಾಂಡವ-ನೃತ್ಯಮ್॥

ಭುಕ್ತಿಮುಕ್ತಿ-ಕೃಪಾಕಟಾಕ್ಷ-ಪ್ರೇಕ್ಷಣ-
ಮಘದಲ-ವಿದಲನ-ದಕ್ಷಮ್।
ಬಾಲಚಂದ್ರಧರಮಿಂದುವಂದ್ಯಮಿಹ
ನೌಮಿ ಗುರು ವಿವೇಕಾನಂದಮ್॥

– ಶರಚ್ಚಂದ್ರ ಚಕ್ರವರ್ತಿ

ಸಿಂಧು ಭೈರವೀ – ಕವಾಲೀ

ಸಪ್ತಋಷಿ ಭುವನದಿಂದ
ಇಳೆಗಿಳಿದು ಬಂದ।
ಶ್ರೀಗುರುದೇವನ ಕಂದ
ವಿವೇಕಾನಂದ॥

ತ್ಯಾಗವಿರಾಗದ ಕಡಲು
ಭೋಗಗಳ ಸಿಡಿಲು।
ಜಗಜನರಿಗೆ ತಾಯ್ಮಡಿಲು
ಹರನ ನರನೊಡಲು॥

ಆತ್ಮಜ್ಞಾನದ ಕಾಂತಿ
ಮೋಹದುಪಶಾಂತಿ।
ಬಳಲಿದರಿಗೆ ವಿಶ್ರಾಂತಿ
ನೀಗಿರುವೆ ಭ್ರಾಂತಿ॥

ಮಿರುಗುವ ವಿದ್ಯಾಸೂರ್ಯ
ನಿಸ್ಸೀಮವೀರ್ಯ।
ಮೇರೆಯ ಅರಿಯದ ಧೈರ್ಯ
ಎಸಗೆ ಗುರುಕಾರ್ಯ॥

– ಸ್ವಾಮಿ ತದ್ರೂಪಾನಂದ

ಹಂಸಾನಂದೀ – ಏಕತಾಲ

ಸತ್ಯಜ್ಞಾನ ತಪೋನಿಧಿಯೇ
ವೀರ್ಯ ಧೈರ್ಯ ತ್ಯಾಗಗಣಿಯೇ।
ಭೃತ್ಯಜನರ ನಮನವಿದನು
ಸ್ವೀಕರಿಸು ನರೇಂದ್ರಮುನಿಯೇ॥

ಭವದ ಭ್ರಾಂತಿ ಬವಣೆ ನೀಗೆ
ಹರನೆ ನರನ ವೇಷ ತಾಳ್ದೆ
ಕವಿದ ಭ್ರಮೆಯ ಕತ್ತಲಳಿಸಿ
ದಿವ್ಯಜ್ಞಾನಪ್ರಭೆಯ ತೋರ್ದೆ
ಶಾಂತಿ ಕಾಂತಿ ನೀಡಿದೆ॥

ಹೇಡಿಜನರ ಹೃದಯದಲ್ಲಿ
ಆತ್ಮಶ್ರದ್ಧೆಶೂನ್ಯರಲ್ಲಿ
ಸಿಡಿಲ ಸ್ನಿಗ್ಧ ಮೊಳಗಿನಿಂದ
ಶಕ್ತಿ ಶ್ರದ್ಧೆ ಹೊಳೆ ಹರಿಸಿದೆ
ಧೈರ್ಯ ಸ್ಥೈರ್ಯ ಬಿತ್ತಿದೆ॥

ಕ್ಲೇಶ ಕಷ್ಟಗ್ರಸ್ತ ಜನಕೆ
ಅಮೃತಸುಖದ ಧಾಮವಾದೆ
ಈಶರೂಪಿ ರಾಮಕೃಷ್ಣ-
ಶಿಷ್ಯರತ್ನ ಶಿಖಾಮಣಿಯೆ
ಜ್ಞಾನಸೌಖ್ಯದಾತನೆ॥

– ಸ್ವಾಮಿ ತದ್ರೂಪಾನಂದ

ಮಾಲಕೌಂಸ್ – ತೇವರಾ

ಶ್ರೀವಿವೇಕಾನಂದ ಗುರುವರ ನವಯುಗಾಚಾರ್ಯ
ರಾಮಕೃಷ್ಣರ ಭೀಮಶಿಷ್ಯನೆ, ವೀರವೇದಾಂತಿ।
ಭಾರತಾಂಬೆಯ ಧೀರಪುತ್ರನೆ ಸಾಧುಭೈರವನೆ
ಸ್ಥೈರ್ಯದಚಲವೆ, ಧೈರ್ಯದಂಬುಧಿ ಜಯತು ಜಯ ಜಯತು॥

ಚಿದ್‌ಖುತಾಗ್ನಿಯ ಚಂಡಕಾಂತಿಯೆ, ಮೇರುಸಂನ್ಯಾಸಿ
ಭರತಖಂಡದ ನಂದಿದಿದ್ದಲಿಗಿತ್ತೆ ತೇಜವನು।
ಬೊಮ್ಮದಂಬುಧಿಗಲೆಯನೀಯುವ ಭರದ ಬಿರುಗಾಳಿ
ಬೂದಿಮುಚ್ಚಿದ ಭರತಭೂಮಿಯನೂದಿ ಬೆಳಗಿಸಿದೆ॥

ಭರತಖಂಡದೊಳರಚುತಲೆಯುವ ಮನುಜಕುರಿಗಳಿಗೆ
ಸಿಂಹಹೃದಯವನಿತ್ತು ಗರ್ಜಿಸುವಂತೆ ನೀ ಮಾಡಿ।
ಕುರಿಯ ದೊಡ್ಡಿಯ ಮುರಿದು ಸಿಂಹದ ಗುಹೆಯ ವಿರಚಿಸಿದೆ,
ಸಿಂಹಹೃದಯನೆ, ಶ್ರೀವಿವೇಕಾನಂದಯೋಗೀಂದ್ರ॥

ನಿಶೆಯ ಗಗನದೊಳಿರುವ ತಾರೆಯ ತೆರದಿ ರಂಜಿಸಿದೆ
ಜಗದ ಕಂಗಳು ನೋಡಲಾರದೆ ನಿನ್ನ ತೇಜವನು।
ವಿಸ್ಮಯಾಶ್ಚರ್ಯದಲಿ ನಿಂತವು ಮೂಗುವೆರಗಾಗಿ
ನಿನ್ನ ಮಹಿಮೆಯ ಸವಿವ ಸೆರೆಯೇ ಮುಕ್ತಿ, ವರಯೋಗಿ॥

ಮೊರೆದು ಗರ್ಜಿಪ ಕಡಲವಾಣಿಯು ನಿನ್ನ ವರವಾಣಿ
ಕಾರಮಿಂಚನು ನಗುವ ತೇಜವು ನಿನ್ನ ಮೈಕಾಂತಿ।
ಆಳವಂಬುಧಿಯೊಳ, ಮೇರೆಯು ನಭದ ವಿಸ್ತಾರ
ಮಂದರಾದ್ರಿಯ ಮೀರಿದಚಲನು ನೀನು, ಯೋಗೀಂದ್ರ॥

ಬ್ರಹ್ಮವಿದ್ಯೆಯ ದಿವ್ಯದೀಪ್ತಿಯ ದೇಶದೇಶದಲಿ
ಹರಡಿ, ಅಭಯವನೀಯುತಮೃತವ ಸುರಿದು ಪಾಲಿಸಿದೆ।
ಗಗನಕೆತ್ತಿದೆ ಭಾರತಾಂಬೆಯ ಕೀರ್ತಿಕೇತನವ
ಓಜೆ ತುಂಬಿಹುದಾರ್ಯಮಾತೆಯ ಶ್ರೀನಿಕೇತನವ॥

ನಿನ್ನ ಹೆಸರದೆ ಶಕ್ತಿಯೀಯುವ ದಿವ್ಯತರಮಂತ್ರ
ನಿನ್ನ ಮಾರ್ಗವೆ ಮುಕ್ತಿದಾಯಕವಾದ ವರಮಾರ್ಗ।
ನಮ್ಮ ಹೃದಯಕೆ ಹೃದಯ ನೀನ್ನೈ, ಶಕ್ತಿಸಾಗರನೆ
ಯಮನ ನುಂಗಿದ ರಾಜಯೋಗಿಯೆ, ರುದ್ರಸಂನ್ಯಾಸಿ॥

ನಿನ್ನ ಧೈರ್ಯಸ್ಥೈರ್ಯ ದೃಢತೆಯು, ನಿನ್ನ ಪವಿಶಕ್ತಿ
ಭಾರತೀಯರಿಗಿಂದು ಬೇಕಾಗಿಹುದು ದಿವ್ಯಾತ್ಮ!
ರುದ್ರನರ್ತನವೆಸಗು ಹೃದಯದಿ, ಬುದ್ಧಿಭೈರವನೆ
ರುದ್ರಭೂಮಿಗಳಾಗಲೆಮ್ಮೀ ಕ್ಷುದ್ರಹೃದಯಗಳು॥

– ಕುವೆಂಪು

ಬಿಭಾಸ್ – ಕೆಹರವಾ

ವೀರನರೇಂದ್ರ ವಿವೇಕಾನಂದ
ಇಳೆಗಿಳಿದು ತಾ ಬಂದ॥ ನಮ್ಮ॥

ಜ್ಞಾನ ಮಸ್ತಕ, ತ್ಯಾಗವೆ ಉಸಿರು
ದಿವ್ಯಜ್ಯೋತಿಯೆ ನಯನಾಂಬುಜವು
ಪ್ರಣವರಚಿತ ವಾಗ್ಯಂತ್ರವಾತನದು॥

ದಯೆಯೆ ಹೃದಯ, ನಿರ್ಭಯ ರುಧಿರ
ಶ್ರದ್ಧಾಶಕ್ತಿ ನರನಾಡಿಗಳು।
ಮುಕ್ತಿಯೆ ಆತನ ಮೂಲಮಂತ್ರವು॥

ವೀರ್ಯೋತ್ಸಾಹವೆ ಅಸ್ಥಿಸ್ನಾಯುಗಳು
ಕ್ರಿಯೋತ್ತೇಜವೆ ಕೈಕಾಲುಗಳು
ದಿವ್ಯ ಗುಣಾಕರ ಮೂರ್ತರೂಪ॥ ನಮ್ಮ॥

– ಸ್ವಾಮಿ ನಿತ್ಯಸ್ಥಾನಂದ

ಭೂಪಾಲೀ – ದಾದರಾ

ರಾಮಕೃಷ್ಣದಿಗಂತದಲಿ
ಅರುಣಕಿರಣ ಹೊಮ್ಮಲು
ಮೂಡಿಬಂದ ತ್ಯಾಗರವಿಯೆ
ಬೆಳಕ ಹರಡಿ ಸುತ್ತಲು!

ಗುರುವಿನಡಿಯೆ ಮಲ್ಲಸಾಲೆ-
ಶಿಲೆಯು ಶಿಲ್ಪವಾಯಿತು;
ನೂರು ಪ್ರಶ್ನೆ ಕರಗಿ ಉರಿದು
ಜ್ಯೋತಿ ಜಗವ ತುಂಬಿತು!

ಉತ್ಸವರಥವೇರಿ ಜಗವ
ಸುತ್ತಿಬಂದ ಸ್ಫೂರ್ತಿಯೇ;
ಶ್ರೀಗುರುವಿನ ಧವಳಕೀರ್ತಿ-
ಧ್ವಜವ ಮೆರೆದ ಮೂರ್ತಿಯೆ!

ಎನ್ನೆದೆಯೊಳು ಉದಯಿಸಿಂದು,
ಕಾಳರಾತ್ರಿ ಕಳೆಯಲಿ;
ಕಿರಣಜಲದಿ ಜೀವ ನೆನೆದು
ಪುಳಕಾಂಕುರ ಬೆಳೆಯಲಿ!

– ಎಚ್. ಎನ್. ಮುರಳೀಧರ

ದರಬಾರೀ ಕಾನಡಾ – ಝಪತಾಲ

ಗುಡುಗು ಸಿಡಿಲುಗಳಲ್ಲಿ ನಿನ್ನೊಡಲ ನುಡಿ ಕಂಡೆ
ಗುಡುಗು ಸಿಡಿಲುಗಳೆಮ್ಮ ತವರು, ತಾಯ್ಮಡಿಲು;
ಭೋರ್ಗರೆವ ಅಂಬುಧಿಯು ನುಗ್ಗುನುಗ್ಗುತ ಮುಂದೆ
ಹಿಗ್ಗುತಲಿ ಹಾಡಿಹುದು 'ಬಗ್ಗದಿರು ಸೋದರ'॥

ಬಗ್ಗಿರುವ ತಲೆಗಳಿಗೆ ತಗ್ಗಿರುವ ತೇಜಕೆ
ಅಗ್ಗದಾಚಾರ ಮೇಣ್ ಭಗ್ನ ವ್ಯಕ್ತಿತ್ವಕೆ।
ಲಗ್ಗೆಯನೆ ಇಟ್ಟೆ ನಿನ್ನಗ್ನಿ ಉಕ್ತಿಗಳಿಂದ
ಸಗ್ಗ ನಿರ್ಮಾಣವದು ಯಜ್ಞಪುರುಷ॥

ಧರ್ಮಕರ್ಮಗಳ ಮರ್ಮವರಿಯದ ಎನಗೂ
ಧರ್ಮಕರ್ಮವು ಎಲ್ಲ ನಿನ್ನಯ ನಾಮ
ನಿನ್ನ ನಾಮದ ಮಹಿಮೆ ಬಲ್ಲವರೆ ಬಲ್ಲರು
ಅಂತರಿಕ್ಷಕೆ ಬೆಳೆದ ತ್ರಿವಿಕ್ರಮ॥

ಹರಿಸು ಧಮಧಮನಿಯಲಿ ಹರ ನಿನ್ನ ತೇಜವ
ತಪಿಸು ನನ್ನೀ ಮೌಢ್ಯವನು ಮೃಡನೆ।
ಕೇಸರಿಯನಾಗಿಸು ನಿನ್ನ ಈ ದಾಸನನು
ಸಾಸಿರದ ನಮನವನು ಸ್ವೀಕರಿಸು ಪ್ರಭುವೆ॥

– ಸ್ವಾಮಿ ನಿರ್ಭಯಾನಂದ

‘ಸಂನ್ಯಾಸಿಗೀತೆ’

ಭೂಪಾಲೀ – ತೇವರಾ

ಏಳು, ಮೇಲೇಳೇಳು ಸಾಧುವೆ, ಹಾಡು ಚಾಗಿಯ ಹಾಡನು;
ಹಾಡಿನಿಂದೆಚ್ಚರಿಸು ಮಲಗಿಹ ನಮ್ಮ ಈ ತಾಯ್ನಾಡನು!
ದೂರದಡವಿಯೊಳೆಲ್ಲಿ ಲೌಕಿಕವಿಷಯವಾಸನೆ ಮುಟ್ಟದೊ,
ಎಲ್ಲಿ ಗಿರಿಗುಹೆಕಂದರರದ ಬಳಿ ಜಗದ ಗಲಿಬಿಲಿ ತಟ್ಟದೊ,
ಎಲ್ಲಿ ಕಾಮವು ಸುಳಿಯದೊ,—ಮೇಣ್
ಎಲ್ಲಿ ಜೀವವು ತಿಳಿಯದೊ—
ಕೀರ್ತಿ ಕಾಂಚನವೆಂಬುವಾಸೆಗಳಿಂದ ಜನಿಸುವ ಭ್ರಾಂತಿಯ,
ಎಲ್ಲಿ ಆತ್ಮವು ಪಡೆದು ನಲಿವುದೊ ನಿಚ್ಚವಾಗಿಹ ಶಾಂತಿಯ,
ನನ್ನಿಯರಿವಾನಂದವಾಹಿನಿಯೆಲ್ಲಿ ಸಂತತ ಹರಿವುದೊ,
ಎಲ್ಲಿ ಎಡಬಿಡದಿರದ ತೃಪ್ತಿಯ ಝರಿ ನಿರಂತರ ಸುರಿವುದೊ,
ಅಲ್ಲಿ ಮೂಡಿದ ಹಾಡನುಲಿಯೈ, ವೀರ ಸಂನ್ಯಾಸಿ—
ಓಂ! ತತ್! ಸತ್! ಓಂ।। ೧ ।।

ಕುಟ್ಟಿ ಪುಡಿಪುಡಿಮಾಡು ಮಾಯೆಯು ಕಟ್ಟಿಬಿಗಿದಿಹ ಹಗ್ಗವ;
ಕಿತ್ತು ಬಿಸುಡೈ ಹೊಳೆವ ಹೊನ್ನಿನ ಹೆಣ್ಣುಮಣ್ಣಿನ ಕಗ್ಗವ!
ಮುದ್ದಿಸಲಿ ಪೀಡಿಸಲಿ ದಾಸನು ದಾಸನೆಂಬುದೆ ಸತ್ಯವು;
ಕಬ್ಬಿಣವೊ? ಕಾಂಚನವೊ? ಕಟ್ಟಿದ ಕಣ್ಣಿ ಕಣ್ಣಿಯೆ ನಿತ್ಯವು.
ಪಾಪ ಪುಣ್ಯಗಳೆಂಬವು, ಮಾ-
ತ್ಸರ್ಯ ಪ್ರೇಮಗಳೆಂಬವು
ದ್ವಂದ್ವರಾಜ್ಯದ ಧೂರ್ತಚೋರರು; ಬಿಟ್ಟು ಕಳೆ, ಕಳೆಯವರನು!
ಮೋಹಗೊಳಿಪರು, ಬಿಗಿವರಿರಿವರು; ಎಚ್ಚರಿಕೆಯಿಂದವರನು
ತಳ್ಳು ದೂರಕೆ, ಓ ವಿರಕ್ತನೆ! ಹಾಡು ಚಾಗಿಯ ಹಾಡನು!
ಹಾಡಿನಿಂದೆಚ್ಚರಿಸು ಮಲಗಿಹ ನಮ್ಮ ಈ ತಾಯ್ನಾಡನು!
ಹಾಡು ಮುಕ್ತಿಯ ಗಾನವನು, ಓ ವೀರ ಸಂನ್ಯಾಸಿ—
ಓಂ! ತತ್! ಸತ್! ಓಂ।। ೨ ।।

ಕತ್ತಲಳಿಯಲಿ; ಮಬ್ಬುಕವಿಸುವ ಭವದ ತೃಷ್ಣೆಯು ಬತ್ತಲಿ;
ಬಾಳಮೋಹವು ಮರುಮರೀಚಿಕೆ; ಮಾಯೆ ಕೆತ್ತಿದ ಪುತ್ಥಳಿ;
ಜನನದೆಡೆಯಿಂ ಮರಣದೆಡೆಗಾಗೆಳೆವುದೆಮ್ಮನು ದೇಹವು!
ಜನ್ಮ ಜನ್ಮದಿ ಮರಳಿ ಮರಳುವುದೆಮ್ಮ ಬಿಗಿಯಲು ಮೋಹವು!
ತನ್ನ ಜಯಿಸಿದ ಶಕ್ತನು ಅವ-
ನೆಲ್ಲ ಜಯಿಸಿದ ಮುಕ್ತನು
ಎಂಬುದನು ತಿಳಿ; ಹಿಂಜರಿಯದಿರು. ಸಂನ್ಯಾಸಿಯೆ, ನಡೆ ಮುಂದಕೆ.
ಗುರಿಯು ದೊರಕುವವರೆಗೆ ನಡೆ ನಡೆ; ನೋಡದಿರು ನೀ ಹಿಂದಕೆ.
ಏಳು ಮೇಲೇಳೇಳು ಸಾಧುವೆ, ಹಾಡು ಚಾಗಿಯ ಹಾಡನು;
ಹಾಡಿನಿಂದೆಚ್ಚರಿಸು ಮಲಗಿಹ ನಮ್ಮ ಈ ತಾಯ್ನಾಡನು!
ಹಾಡು ಸಿದ್ಧನೆ, ಓ ಪ್ರಬುದ್ಧನೆ, ಹಾಡು ಸಂನ್ಯಾಸಿ—
ಓಂ! ತತ್! ಸತ್! ಓಂ॥ ೩ ॥

"ಬೆಳೆಯ ಕೊಯ್ವನು ಬಿತ್ತಿದಾತನು; ಪಾಪ ಪಾಪಕೆ ಕಾರಣ;
ವೃಕ್ಷಕಾರ್ಯಕೆ ಬೀಜ ಕಾರಣ; ಪುಣ್ಯ ಪುಣ್ಯಕೆ ಕಾರಣ;
ಹುಟ್ಟಿ ಮೈವಡೆದಾತ್ಮ ಬಾಳಿನ ಬಲೆಯ ತಪ್ಪದೆ ಹೊರುವುದು;
ಕಟ್ಟು ಮೀರಿಹನಾವನಿರುವನು? ಕಟ್ಟು ಕಟ್ಟನೆ ಹೆರುವುದು!"
ಎಂದು ಪಂಡಿತರೆಂಬರು—ಮೇಣ್
ತತ್ತ್ವದರ್ಶಿಗಳೆಂಬರು!
ಆದೊಡೇನಂತಾತ್ಮವೆಂಬುದು ನಾಮರೂಪಾತೀತವು;
ಮುಕ್ತಿಬಂಧಗಳಿಲ್ಲದಾತ್ಮವು ಸರ್ವನಿಯಮಾತೀತವು!
ತತ್ತ್ವಮಸಿ ಎಂದರಿತು, ಸಾಧುವೆ, ಹಾಡು ಚಾಗಿಯ ಹಾಡನು!
ಹಾಡಿನಿಂದೆಚ್ಚರಿಸು ಮಲಗಿಹ ನಮ್ಮ ಈ ತಾಯ್ನಾಡನು!
ಸಾರು ಸಿದ್ಧನೆ, ವಿಶ್ವವರಿಯಲಿ! ಹಾಡು ಸಂನ್ಯಾಸಿ—
ಓಂ! ತತ್! ಸತ್! ಓಂ॥ ೪ ॥

ತಂದೆ ತಾಯಿಯು ಸತಿಯು ಮಕ್ಕಳು ಗೆಳೆಯರೆಂಬುವರರಿಯರು;
ಕನಸು ಕಾಣುತಲವರು ಸೊನ್ನೆಯ ಸರ್ವವೆನ್ನುತ ಮೆರೆವರು.
ಲಿಂಗವರಿಯದ ಆತ್ಮವಾರಿಗೆ ಮಗುವು? ಆರಿಗೆ ತಾತನು?
ಆರ ಮಿತ್ರನು? ಆರ ಶತ್ರುವು? ಒಂದೆಯಾಗಿರುವಾತನು?

ಆತ್ಮವೆಲ್ಲಿಯು ಇರುವುದು; ಮೇಣ್
ಆತ್ಮವೊಂದಾಗಿರುವುದು.
ಭೇದವೆಂಬುವ ತೋರಿಕೆಯು ನಮ್ಮಾತ್ಮನಾಶಕೆ ಹೇತುವು.
ಭೇದವನು ತೊರೆದೊಂದೆಯೆಂಬುದನರಿಯೆ ಮುಕ್ತಿಗೆ ಸೇತುವು.
ಧೈರ್ಯದಿಂದಿದನೆಲ್ಲರಾಲಿಸೆ ಹಾಡು ಚಾಗಿಯ ಹಾಡನು!
ಹಾಡಿನಿಂದೆಚ್ಚರಿಸು ಮಲಗಿಹ ನಮ್ಮ ಈ ತಾಯ್ನಾಡನು!
ಸಾರು, ಜೀವನ್ಮುಕ್ತ! ಸಾರೈ ಧೀರ ಸಂನ್ಯಾಸಿ—
ಓಂ! ತತ್! ಸತ್! ಓಂ॥ ೫ ॥

ಇರುವುದೊಂದೇ! ನಿತ್ಯಮುಕ್ತನು, ಸರ್ವಜ್ಞಾನಿಯು ಆತ್ಮನು!
ನಾಮರೂಪಾತೀತನಾತನು; ಪಾಪಪುಣ್ಯಾತೀತನು!
ವಿಶ್ವಮಾಯಾಧೀಶನಾತನು; ಕನಸು ಕಾಣುವನಾತನು!
ಸಾಕ್ಷಿಯಾತನು; ಪ್ರಕೃತಿಜೀವರ ತೆರದಿ ತೋರುವನಾತನು!
ಎಲ್ಲಿ ಮುಕ್ತಿಯ ಹುಡುಕುವೆ?
ಏಕಿಂತು ಸುಮ್ಮನೆ ದುಡುಕುವೆ?
ಇಹವು ತೋರದು, ಪರವು ತೋರದು; ಗುಡಿಯೊಳದು ಮೈದೋರದು
ವೇದ ತೋರದು, ಶಾಸ್ತ್ರ ತೋರದು; ಮತವು ಮುಕ್ತಿಯ ತೋರದು!
ನಿನ್ನ ಕೈಲಿದೆ ನಿನ್ನ ಬಿಗಿದಿಹ ಕಬ್ಬಿಣದ ಯಮಪಾಶವು;
ಬರಿದೆ ಶೋಕಿಪುದೇಕೆ? ಬಿಡು, ಬಿಡು! ನಿನಗೆ ನೀನೇ ಮೋಸವು!
ಬೇಡ, ಪಾಶವ ಕಡಿದು ಕೈಬಿಡು! ಹಾಡು ಸಂನ್ಯಾಸಿ—
ಓಂ! ತತ್! ಸತ್! ಓಂ॥ ೬ ॥

“ಶಾಂತಿ ಸರ್ವರಿಗಿರಲಿ” ಉಲಿಯೈ, “ಜೀವಜಂತುಗಳಾಳಿಗೆ
ಹಿಂಸೆಯಾಗದೆ ಇರಲಿ ಎನ್ನಿಂದೆಲ್ಲ ಸೊಗದಲಿ ಬಾಳುಗೆ!
ಬಾನೊಳಾಡುವ, ನೆಲದೊಳೋಡುವ ಸರ್ವರಾತ್ಮನು ನಾನಹೆ;
ನಾಕ ನರಕಗಳಾಸೆ ಭಯಗಳನೆಲ್ಲ ಮನದಿಂ ದೂಡುವೆ!”
ದೇಹ ಬಾಳಲಿ, ಬೀಳಲಿ;—ಅದು
ಕರ್ಮನದಿಯಲಿ ತೇಲಲಿ!
ಕೆಲರು ಹಾರಗಳಿಂದ ಸಿಂಗರಿಸದನು ಪೂಜಿಸಿ ಬಾಗಲಿ!
ಕೆಲರು ಕಾಲಿಂದೊದೆದು ನೂಕಲಿ! ಹುಡಿಯು ಹುಡಿಯೊಳೆ ಹೋಗಲಿ!

ಎಲ್ಲ ಒಂದಿರಲಾರು ಹೊಗಳುವರಾರು ಹೊಗಳಿಸಿಕೊಂಬರು?
ನಿಂದೆ ನಿಂದಿಪರೆಲ್ಲ ಕೂಡಲು ಯಾರು ನಿಂದೆಯನುಂಬರು?
ಪಾಶಗಳ ಕಡಿ! ಬಿಸುಡು, ಕಿತ್ತಡಿ! ಹಾಡು ಸಂನ್ಯಾಸಿ—
ಓಂ! ತತ್! ಸತ್! ಓಂ॥ ೭ ॥

ಎಲ್ಲಿ ಕಾಮಿನಿಯೆಲ್ಲಿ ಕಾಂಚನದಾಸೆ ನೆಲೆಯಾಗಿರುವುದೊ,
ಸತ್ಯವೆಂಬುವುದಲ್ಲಿ ಸುಳಿಯದು! ಎಲ್ಲಿ ಕಾಮವು ಇರುವುದೊ
ಅಲ್ಲಿ ಮುಕ್ತಿಯು ನಾಚಿ ತೋರದು! ಎಲ್ಲಿ ಸುಳಿವುದೊ ಭೋಗವು
ಅಲ್ಲಿ ತೆರೆಯದು ಮಾಯೆ ಬಾಗಿಲನಲ್ಲಿಹುದು ಭವರೋಗವು;
ಎಲ್ಲಿ ನೆಲಸದೊ ಚಾಗವು, ದಿಟ-
ವಲ್ಲಿ ಸೇರದು ಯೋಗವು!
ಗಗನವೇ ಮನೆ! ಹಸುರೆ ಹಾಸಿಗೆ! ಮನೆಯು ಸಾಲ್ವುದೆ ಚಾಗಿಗೆ?
ಹಸಿಯೊ, ಬಿಸಿಯೊ? ಬಿದಿಯು ಕೊಟ್ಟಾಹಾರವನ್ನವು ಯೋಗಿಗೆ!
ಏನು ತಿಂದರೆ, ಏನು ಕುಡಿದರೆ, ಏನು? ಆತ್ಮಗೆ ಕೊರತೆಯೆ?
ಸರ್ವಪಾಪವ ತಿಂದುತೇಗುವ ಗಂಗೆಗೇಂ ಕೊಳೆ-ಕೊರತೆಯೇ?
ನೀನು ಮಿಂಚೈ! ನೀನು ಸಿಡಿಲೈ! ಮೊಳಗು ಸಂನ್ಯಾಸಿ—
ಓಂ! ತತ್! ಸತ್! ಓಂ॥ ೮ ॥

ನಿಜವನರಿತವರೆಲ್ಲೊ ಕೆಲವರು; ನಗುವರುಳಿದವರೆಲ್ಲರೂ
ನಿನ್ನ ಕಂಡರೆ, ಹೇ ಮಹಾತ್ಮನೆ! ಕುರುಡರೇನನು ಬಲ್ಲರು?
ಗಣಿಸದವರನು ಹೋಗು, ಮುಕ್ತನೆ, ನೀನು ಊರಿಂದೂರಿಗೆ
ಸೊಗವ ಬಯಸದೆ, ಅಳಲಿಗಳುಕದೆ! ಕತ್ತಲಲಿ ಸಂಚಾರಿಗೆ
ನಿನ್ನ ಬೆಳಕನು ನೀಡೆಲೈ;
ಸಂಸಾರ ಮಾಯೆಯ ದೂಡೆಲೈ!
ಇಂತು ದಿನದಿನ ಕರ್ಮಶಕ್ತಿಯು ಮುಗಿವವರೆಗೂ ಸಾಗೆಲೈ!
ನಾನು-ನೀನುಗಳಳಿದು ಆತ್ಮದೊಳಿಳಿದು ಕಡೆಯೊಳು ಹೋಗೆಲೈ!
ಏಳು, ಮೇಲೇಳೇಳು ಸಾಧುವೆ, ಹಾಡು ಚಾಗಿಯ ಹಾಡನು!
ಹಾಡಿನಿಂದೆಚ್ಚರಿಸು ಮಲಗಿಹ ನಮ್ಮ ಈ ತಾಯ್ನಾಡನು!
ತತ್ತ್ವಮಸಿ ಎಂದರಿತು ಹಾಡೈ, ಧೀರ ಸಂನ್ಯಾಸಿ—
ಓಂ! ತತ್! ಸತ್! ಓಂ॥ ೯ ॥

ಇಂಗ್ಲಿಷ್ ಮೂಲ: ಸ್ವಾಮಿ ವಿವೇಕಾನಂದ. ಅನುವಾದ: ಕುವೆಂಪು

ಮಿಶ್ರ ಸಾರಂಗ – ತ್ರಿತಾಲ

ಉತ್ತಿಷ್ಠತ ಜಾಗ್ರತ। ಮನುಜ-
ಉತ್ತಿಷ್ಠತ ಜಾಗ್ರತ॥

ಗುರಿಯನು ಸೇರುವವರೆಗೂ। ನೀ
ಅರೆಕ್ಷಣ ನಿಲ್ಲದೆ ಮುನ್ನಡೆ ಸಖನೇ॥

ನಿನ್ನಯ ಗುರಿಯು ಆತ್ಮದರುಶನ
ನಿನ್ನೊಳಗೆಯೆ ಇದೆ ಆ ರತುನ।
ಬನ್ನಪಡುತ ಈ ಕ್ಷುದ್ರ ಜೀವನದಿ
ಇನ್ನು ತೊಳಲದಿರು ಮುನ್ನಡೆ ಸಖನೇ॥

ಮಮತೆಯ ಈ ದೇಹವೆ ನೀನೆಂದು
ಭ್ರಮಿಸದಿರೈ ನೀ ಎಂದೆಂದೂ।
ಅಮರ ಆತ್ಮ ನೀ ಅಮೃತಪುತ್ರನೇ
ಅಮಲಾನಂದದಿ ಪರಿಪೂರ್ಣನು ನೀ॥

– ಸ್ವಾಮಿ ಪುರುಷೋತ್ತಮಾನಂದ

ಭೈರಾಗೀ ಭೈರವ್

ಶೃಣ್ವಂತು ವಿಶ್ವೇ ಅಮೃತಸ್ಯ ಪುತ್ರಾಃ
ಆ ಯೇ ಧಾಮಾನಿ ದಿವ್ಯಾನಿ ತಸ್ಥುಃ
ವೇದಾಹಮೇತಂ ಪುರುಷಂ ಮಹಾಂತಂ
ಆದಿತ್ಯವರ್ಣಂ ತಮಸಃ ಪರಸ್ತಾತ್
ತಮೇವ ವಿದಿತ್ವಾ ಅತಿಮೃತ್ಯುಮೇತಿ
ನಾನ್ಯಃ ಪಂಥಾ ವಿದ್ಯತೇಽಯನಾಯ॥
ಉತ್ತಿಷ್ಠತ ಜಾಗ್ರತ। ಪ್ರಾಪ್ಯ ವರಾನ್ ನಿಬೋಧತ॥

ಮಿಶ್ರ ಸಾರಂಗ – ತ್ರಿತಾಲ (ಸಂಸ್ಕೃತ)

ಉತ್ತಿಷ್ಠ ಭೋ ಜಾಗ್ರತ। ಮನುಜ-
ಉತ್ತಿಷ್ಠ ಭೋ ಜಾಗ್ರತ॥

ಲಕ್ಷ್ಯಂ ಸಿದ್ಧ್ಯತಿ ಯಾವತ್ ತವ।
ಕ್ಷಣಮಪಿ ಮಾವಿಸ್ಮರ ಮಾ ತಿಷ್ಠ॥

ಪಶ್ಯ ಚ ಲಕ್ಷ್ಯಂ ಆತ್ಮದರ್ಶನಮ್
ನಿವಸತಿ ತತ್‌ಖಲು ಹೃದಿರತ್ನಮ್।
ದುಃಖಕೂಪ ಇಹ ಕ್ಷುದ್ರ ಜೀವನಾದ್
ಪುನಃ ಸಂತ್ರಾಸಂ ಅನುಭವ ಮಾ ಭೋ॥

ಮಮ ಖಲು ಆತ್ಮಾ ಏಷ ದೇಹ ಇತಿ
ಭ್ರಮಣಂ ಮಾ ಪ್ರಾಪ್ನುಹಿ ನೂನಮ್।
ಆತ್ಮರೂಪಿ, ಹೇ ಅಮೃತಪುತ್ರ ಭೋ
ಅಮರಾನಂದಃ ಪರಿಪೂರ್ಣಃ ತ್ವಮ್॥

– ಕನ್ನಡ ಮೂಲ: ಸ್ವಾಮಿ ಪುರುಷೋತ್ತಮಾನಂದ

ಭೈರಾಗೀ ಭೈರವ್

ಶೃಣ್ವಂತು ವಿಶ್ವೇ ಅಮೃತಸ್ಯ ಪುತ್ರಾಃ
ಆ ಯೇ ಧಾಮಾನಿ ದಿವ್ಯಾನಿ ತಸ್ಥುಃ
ವೇದಾಹಮೇತಂ ಪುರುಷಂ ಮಹಾಂತಂ
ಆದಿತ್ಯವರ್ಣಂ ತಮಸಃ ಪರಸ್ತಾತ್
ತಮೇವ ವಿದಿತ್ವಾ ಅತಿಮೃತ್ಯುಮೇತಿ
ನಾನ್ಯಃ ಪಂಥಾ ವಿದ್ಯತೇಽಯನಾಯ॥
ಉತ್ತಿಷ್ಠತ ಜಾಗ್ರತ। ಪ್ರಾಪ್ಯ ವರಾನ್ ನಿಬೋಧತ॥

ಶ್ರೀವಿವೇಕಾನಂದ ಸುಪ್ರಭಾತಮ್

ಹೇ ಪ್ರೇಷ್ಠನಾಥ ಸುಮಹನ್ ಯುಗಶಕ್ತಿಧಾರಿನ್
ಹೇ ನಿತ್ಯಮುಕ್ತ ಸತತಂ ಹಿ ಮಹಾವರೇಣ್ಯ।
ಆನಂದರೂಪ ಭುವಿ ವೈ ಜನಮುಗ್ಧಕಾರಿನ್
ವಿಶ್ವಸ್ಯ ವೀರ ಸುಯತೇ ತವ ಸುಪ್ರಭಾತಮ್॥ ೧ ॥

ಹೇ ಬುದ್ಧ ಶಾಶ್ವತವಿವೇಕ ಸುಬೋಧದಾಯಿನ್
ಸತ್ಯಾಶ್ರಯಿನ್ ಜನಗಣೇ ಪಥಿದಾನಕಾರಿನ್।
ಹೇ ಮುಕ್ತ ಸರ್ವಜನಮುಕ್ತಿ ವಿಧಾನಕಾರಿನ್
ವಿಶ್ವಸ್ಯ ವೀರ ಸುಯತೇ ತವ ಸುಪ್ರಭಾತಮ್॥ ೨ ॥

ಭಕ್ತಿಶ್ಚ ತೇ ಸುವಿದಿತಾ ಭುವಿ ರಾಮಕೃಷ್ಣೇ
ಶ್ರೀರಾಮಕೃಷ್ಣಹೃದಿ ಹೇ ಸುಕೃತಾಧಿಕಾರ।
ಹೇ ಮಾತೃಭಕ್ತ ಪೃಥಿವೀವಿಜಯೀ ಧ್ರುವಂ ತ್ವಂ
ವಿಶ್ವಸ್ಯ ವೀರ ಸುಯತೇ ತವ ಸುಪ್ರಭಾತಮ್॥ ೩ ॥

ಹೇ ಶುದ್ಧ ಪೂತ ಭುವನೇ ಶುಚಿತಾವಿಧಾತೋ
ರಿಕ್ತಾರ್ತಪೀಡಿತಜನೇಶ್ವರ ಬುದ್ಧಿಕಾರಿನ್।
ನಿತ್ಯಂ ಕೃಪಾಮಹಿತಹೃತ್ ಪರದುಃಖಹಾರಿನ್
ವಿಶ್ವಸ್ಯ ವೀರ ಸುಯತೇ ತವ ಸುಪ್ರಭಾತಮ್॥ ೪ ॥

ಮಾಯಾವಿಹೀನ ಭುವಿ ನೋ ನಯ ಮೋಹಪಾರೇ
ತ್ವಂ ಜಾಗೃತೋ ಹಿ ಸತತಂ ಜನಮುಕ್ತಿಧಾರಿನ್।
ಜಾಗರ್ತಿ ಮಾನವಗಣಸ್ತವ ಸುಪ್ರಭಾವೈಃ
ವಿಶ್ವಸ್ಯ ವೀರ ಸುಯತೇ ತವ ಸುಪ್ರಭಾತಮ್॥ ೫ ॥

ಸಂಸಾರಪಾರ ಕಮಲಾಕ್ಷ ಸುಕರ್ಮಕಾರಿನ್
ನಿತ್ಯಂ ವಿವೇಕಮತಿಶಕ್ತಿ ವಿಧಾನದಕ್ಷ।
ಹೇ ಬುದ್ಧ ಜಾಗರಯ ನಃ ಸುಮತಿಂ ವಿವೇಕಂ
ವಿಶ್ವಸ್ಯ ವೀರ ಸುಯತೇ ತವ ಸುಪ್ರಭಾತಮ್॥ ೬ ॥

ಸಂತಪ್ತ ಮಾನವಗಣೇಷು ಮಹಾಕೃಪಾ ತೇ
ಪ್ರಜ್ಞಾವತಾಮಪಿ ಹಿತೇ ಮಹನೀಯಪ್ರಜ್ಞಾ।

ಸೂರ್ಯಪ್ರಭಸ್ತ್ವಮಪಿ ತೇ ಕಮನೀಯಕಾಂತಿಃ
ವಿಶ್ವಸ್ಯ ವೀರ ಸುಯತೇ ತವ ಸುಪ್ರಭಾತಮ್॥ ೭ ॥

ಆನಂದಸುಂದರ ಹಿ ಶಾಂತ ವಿವೇಕಮೂರ್ತೇ
ಧೀರಾಪ್ಯನುತ್ತಮಗತಿಸ್ತವ ಕರ್ಮಶಕ್ತಿಃ।
ವೀರೇಶ್ವರೋಽಸಿ ಶಿವ ಹೇ ಚ ಶಿವತ್ವದಾಯಿನ್
ವಿಶ್ವಸ್ಯ ವೀರ ಸುಯತೇ ತವ ಸುಪ್ರಭಾತಮ್॥ ೮ ॥

ನ್ಯಾಸಿನ್ ನರೋತ್ತಮ ಪವಿತ್ರ ನರೇಂದ್ರನಾಥ
ಶ್ರೀರಾಮಕೃಷ್ಣ ಕರುಣಾ ಹಿ ಸದಾ ತ್ವಯಾಪ್ತಾ।
ಸಂನ್ಯಾಸ್ಯಸಿ ತ್ವಮಸಿ ತೇ ಪರದುಃಖ ಸೇವಾ
ವಿಶ್ವಸ್ಯ ವೀರ ಸುಯತೇ ತವ ಸುಪ್ರಭಾತಮ್॥ ೯ ॥

ಹೇ ಸತ್ಯ ಹೇ ಸಕಲಮೋಹತಮೋವಿನಾಶಿನ್
ತೇಜೋಽಸಿ ದೇಹಿ ಸತತಂ ಹ್ಯಮಿತಂ ಸುತೇಜಃ।
ಹೇ ಶ್ರೇಷ್ಠ ಜಾಗರಯ ನಃ ಶಮದೈರ್ನಿನಾದೈಃ
ವಿಶ್ವಸ್ಯ ವೀರ ಸುಯತೇ ತವ ಸುಪ್ರಭಾತಮ್॥೧೦।

ಹೇ ದೇಶಪ್ರೇಮಿಕ ಚ ಜಾತಸುವಿಶ್ವಪ್ರೇಮ
ಬ್ರಹ್ಮಜ್ಞ ಹೇ ವಿದಿತಮರ್ಮ ಸಮಗ್ರ ವಿಶ್ವ।
ಬ್ರಹ್ಮನ್ ಮಹಾಪುರುಷ ಜಾಗೃಹಿ ದೇವ ನಿತ್ಯಂ
ವಿಶ್ವಸ್ಯ ವೀರ ಸುಯತೇ ತವ ಸುಪ್ರಭಾತಮ್॥ ೧೧ ॥

ನಿಸ್ವಾರ್ಥ ಹೇ ಕಮಲನೇತ್ರ ಮಹಾಸಮುದ್ರ
ಸ್ನಿಗ್ಧಂ ವಿಶಾಲಹೃದಯಂ ಹಿ ತವೇತಿ ಜಾನೇ।
ಯೋಗ್ಯಾನ್ ನರಾನ್ ಹಿ ಕುರು ನಃ ಸಕಲಾಂಶ್ಚ ಪೃಥ್ವಾ
ವಿಶ್ವಸ್ಯ ವೀರ ಸುಯತೇ ತವ ಸುಪ್ರಭಾತಮ್॥ ೧೨ ॥

ಶ್ರೀರಾಮಕೃಷ್ಣ ಚರಿತೇ ನಿತರಾಂ ಹಿ ಮುಗ್ಧಃ
ಶ್ರೀರಾಮಕೃಷ್ಣ ಮನನೇ ಸ್ಥಿತಧೀಃ ಸದಾ ತ್ವಮ್।
ಶ್ರೀರಾಮಕೃಷ್ಣ ಮನನೇಷು ಮುದಸ್ತ್ವಯಾಪ್ತಾಃ
ಶ್ರೀರಾಮಕೃಷ್ಣಮಯ ಹೇ ತವ ಸುಪ್ರಭಾತಮ್॥ ೧೩ ॥

ಶ್ರೀವಿವೇಕಾನಂದ-ಪ್ರಭಾತಪ್ರಾಂಜಲಿಃ

ಸಮಾಧಿಸ್ಥಃ ಶಿವಃ ಸ್ವರ್ಲೋಕೇ ನಿರ್ಭರಂ
ಜನಾನಾಂ ಕ್ರಂದನಾದ್ ಭವಾಗ್ನೌ ಭೀಷಣೇ।
ಪ್ರದಗ್ಧಾನಾಂ ಪ್ರಬೋಧಿತಸ್ತ್ವಂ ಹ್ಯಾಗತಃ
ವಿವೇಕಾನಂದ ತೇ ಪ್ರಭಾತೇ ಪ್ರಾಂಜಲಿಃ॥ ೧ ॥

ನರೇಂದ್ರಃ ಶೈಶವೇ ನರೇಂದ್ರೋ ಯೌವನೇ
ನರೇಂದ್ರಃ ಕ್ರೀಡನೇ ನರೇಂದ್ರಃ ಶಿಕ್ಷಣೇ।
ನರೇಂದ್ರಃ ಪಾಲನೇ ನರೇಂದ್ರೋ ಹ್ಯರ್ಪಣೇ
ವಿವೇಕಾನಂದ ತೇ ಪ್ರಭಾತೇ ಪ್ರಾಂಜಲಿಃ॥ ೨ ॥

ಹರೀಂದ್ರಶ್ಚೇಷ್ಟಿತೈಃ ಕಲಾಜ್ಞೋ ಗಾಯನೈಃ
ಪರಿಜ್ಞಾನೈರ್ಬುಧೋ ಮಹರ್ಷಿರ್ದರ್ಶನೈಃ।
ಯತೀಂದ್ರೋಽಸಕ್ತಿಭಿರ್ಭವಾನ್ ಯನ್ನಾಸ್ತಿ ಕಿಂ
ವಿವೇಕಾನಂದ ತೇ ಪ್ರಭಾತೇ ಪ್ರಾಂಜಲಿಃ॥ ೩ ॥

ಮುಮುಕ್ಷಾ ದರ್ಶಿತಾಽಭಿಹಂಸಂ ಧಾವನೈಃ
ವಿನೈಕಾಂ ಪಾದುಕಾಂ ನಿತಾಂತೋನ್ಮತ್ತವತ್।
ಸಮಾನಾಂ ದೇಹಿ ಮೇ ಮುಮುಕ್ಷಾಂ ಮದ್ಗುರೋ
ವಿವೇಕಾನಂದ ತೇ ಪ್ರಭಾತೇ ಪ್ರಾಂಜಲಿಃ॥ ೪ ॥

ಗುರೋರಂಘ್ರ್ಯುತ್ಪಲೇ ಸ್ವಮಾತ್ಮಾನಂ ದದೌ
ಪರೀಕ್ಷ್ಯಾನಂತರಮ್ ಬಹುಪ್ರಶ್ನೈರ್ಭೃಶಮ್।
ವಿಶುದ್ಧೈಸ್ಸೇವನೈರ್ಭವಾಂಸ್ತಂ ಪಿಪ್ರಿಯೇ
ವಿವೇಕಾನಂದ ತೇ ಪ್ರಭಾತೇ ಪ್ರಾಂಜಲಿಃ॥ ೫ ॥

ಸುಗಂಧಃ ಶ್ರೀಗುರುರ್ಭವಾನ್ ವಾಯುಃ ಖಲು
ಸ ತೂರ್ಯಂ ತ್ವಂ ಚ ಭೋ ಮಹೋಚ್ಚೈರ್ಘೋಷಕಃ।
ಗುರುಃ ಸೂರ್ಯಸ್ತು ಹೇ ಕಿಲಾದರ್ಶೋ ಭವಾನ್
ವಿವೇಕಾನಂದ ತೇ ಪ್ರಭಾತೇ ಪ್ರಾಂಜಲಿಃ॥ ೬ ॥

ಸ್ವಧರ್ಮಶ್ರೇಷ್ಠತಾಂ ಸಗರ್ವಂ ಶಂಸತಾಂ
ಜನಾನಾಂ ಧೃಷ್ಟತಾ ತ್ವಯೈವಾಭಾಜ್ಯಹೋ

ಸ್ವಧರ್ಮೋ ವೈದಿಕೋ ಹ್ಯನರ್ಘೋ ದರ್ಶಿತಃ
ವಿವೇಕಾನಂದ ತೇ ಪ್ರಭಾತೇ ಪ್ರಾಂಜಲಿಃ॥ ೭ ॥

ಸ್ಫುಲಿಂಗಾನ್ ಸ್ಫೋಟಯನ್ ಸುದೀಪ್ತಾಗ್ನಿರ್ಯಥಾ
ತಥೈವ ತ್ವಂ ಯತೇ ವಿಕೀರ್ಯರ್ಮಾನುಷೀಮ್।
ಪರಿಜ್ಞಾನಪ್ರಭಾಮಚಾರೀರ್ಭಾರತೇ
ವಿವೇಕಾನಂದ ತೇ ಪ್ರಭಾತೇ ಪ್ರಾಂಜಲಿಃ॥ ೮ ॥

ಅಹೋ ಆಕರ್ಷಣಂ ತವಾಸ್ಯಸ್ಯಾತುಲಂ
ತವಾಹೋ ಪೌರುಷಂ ವಿರಾಗೋ ಮುಗ್ಧತಾ।
ಪ್ರಗಾಢಂ ಪ್ರೇಮ ಚ ಹ್ಯಗಾಧಂ ವೇದನಂ
ವಿವೇಕಾನಂದ ತೇ ಪ್ರಭಾತೇ ಪ್ರಾಂಜಲಿಃ॥ ೯ ॥

ವಿಮೋಕ್ಷಂ ಸ್ವಾತ್ಮನಶ್ಚತುರ್ಯೋಗಾಧ್ವಭಿಃ
ಪೃಥಗ್ವಾ ಸಂಹತ್ಯೈರ್ಹಿತಂ ಲೋಕಸ್ಯ ಚ।
ತವಾಜ್ಞಾ ಸಾಧಯೇದಿತಿ ಪ್ರೀತ್ಯಾ ನರಃ
ವಿವೇಕಾನಂದ ತೇ ಪ್ರಭಾತೇ ಪ್ರಾಂಜಲಿಃ॥ ೧೦ ॥

ಯತೇನೂರುಸ್ತವ ಪ್ರಣಾಮಂ ದಾಸ್ಯತಿ
ಪ್ರಪುಲ್ಲಂ ಷಟ್ಪದೈಃ ಪ್ರಸೂನಂ ಪ್ರಾವೃತಮ್।
ತವಾರ್ಥಂ ಕೋಕಿಲೋ ಮನೋಜ್ಞಂ ಕೂಜತಿ
ವಿವೇಕಾನಂದ ತೇ ಪ್ರಭಾತೇ ಪ್ರಾಂಜಲಿಃ॥ ೧೧ ॥

ಉಷಃಕಾಲೇ ಪದೇ ನಮಸ್ಕೃತ್ಯಾಶಿಷಾ
ಲಭೇರನ್ ಧನ್ಯತಾಮಿತಿ ಶ್ರದ್ಧಾಲವಃ।
ಸಮೇತಾಸ್ಸಂಮುಖೇ ದದೇಥಾ ದರ್ಶನಂ
ವಿವೇಕಾನಂದ ತೇ ಪ್ರಭಾತೇ ಪ್ರಾಂಜಲಿಃ॥ ೧೨ ॥

ಹಿಮಾದ್ರೇರಾಶ್ರಮೇ ಜಯಂತ್ಯಾಂ ನಿರ್ಮಿತಃ
ಭುಜಂಗಸ್ರಗ್ವಿಣೀತಿವೃತ್ತೇ ನೂತನೇ।
ಸ್ತವೋಽಯಂ ಯಃ ಪಠೇತ್ ಸಭಕ್ತ್ಯಾಂ ತಂ ನರಃ
ಸ ಶಕ್ತಿಂ ಪೌರುಷಂ ವಿರಾಗಂ ಚಾರ್ಜತಿ॥ ೧೩ ॥

– ಸ್ವಾಮಿ ಹರ್ಷಾನಂದ

ಶ್ರೀವಿವೇಕಾನಂದ-ಅಷ್ಟೋತ್ತರಶತನಾಮಸ್ತೋತ್ರಮ್

ಸಪ್ತರ್ಷಿಮಂಡಲಾಯಾತಃ ಶಿವಪೂಜಾತಪಃಫಲಃ।
ಸದಾಶಿವಾಂಶಸಂಭೂತೋಽಶಿವಸಂಘಾತನಾಶಕಃ॥ ೧ ॥

ವಿಶ್ವನಾಥಾತ್ಮಜೋ ಬಾಲಃ ಶ್ರೀಭುವನೇಶ್ವರೀಸುತಃ।
ಬಲಕ್ರೀಡಾವಚೋದಕ್ಷಃ ಕ್ರೀಡಾಕಷ್ಟಾವಹೋಽರ್ಭಕಃ॥ ೨ ॥

ಶಿವನಾಮಸಮೇತಾಭಿಷೇಕಸಂಶಾಂತಮಾನಸಃ।
ಗಾಢಧ್ಯಾನಸಮಾರೂಢಃ ಸರ್ಪಸೇವಿತಶೀರ್ಷಕಃ॥ ೩ ॥

ನರೇಂದ್ರನಾಥಸನ್ನಾಮಾ ನರೇಂದ್ರಾನ್ವರ್ಥನಾಮಕಃ।
ಅನ್ಯಜೀವಸುರಕ್ಷಾರ್ಥಸದಾಸನ್ನದ್ಧಪೂರುಷಃ॥ ೪ ॥

ಅಸಂತೃಪ್ತಾನ್ನವಿಜ್ಞಾನಃ ಬ್ರಹ್ಮವಿದ್ಯಾಪಿಪಾಸಿತಃ॥
ಈಶ್ವರಾಸ್ತಿತ್ವಜಿಜ್ಞಾಸುಃ ರಾಮಕೃಷ್ಣಪದಾರ್ಪಿತಃ॥ ೫ ॥

ತತ್ಪ್ರತ್ಯುತ್ತರಸಂತುಷ್ಟಃ ತತ್ಪ್ರೇಮಸಮಲಂಕೃತಃ।
ತತ್ಪರೀಕ್ಷಿತಸದ್ಭಾವಃ ತದ್ದತ್ತಜ್ಞಾನಪೂರಿತಃ॥ ೬ ॥

ವಿದ್ಯಾಲಯಶಿರೋರತ್ನಂ ನೈಕವಿದ್ಯಾಕಲಾಧಿಪಃ।
ಜ್ಞಾನಾಸಕ್ತಸ್ಸುಮೇಧಾವೀ ಶಿಶುತುಲ್ಯಸ್ವಭಾವಕಃ॥ ೭ ॥

ಪಿತೃಪಂಚತ್ವಸಂತಪ್ತಃ ಮಾತೃಸೇವಾಪರಾಯಣಃ।
ಕಾಲಿಕಾದರ್ಶನಾಕಾಂಕ್ಷೀ ದರ್ಶಿತಶ್ರೀಪದಾಂಬುಜಃ॥ ೮ ॥

ಜ್ಞಾನವೈರಾಗ್ಯಭಿಕ್ಷಾರ್ಥೀ ಗುರ್ವಾಕ್ಷಿಪ್ತವಿಚಾರವಾನ್।
ಆರಾತ್ರಗಾನಸಂಮಗ್ನಃ ಭಕ್ತ್ಯುದ್ರಿಕ್ತಮಹಾಮತಿಃ॥ ೯ ॥

ಆತ್ಮವಿಜ್ಞಾನಸಂಪ್ರೇಪ್ಸುಃ ಸುತೀಕ್ಷ್ಣಮತಿಸಂಯುತಃ।
ಗುರುಸೇವಾಭಿಸಂಸಕ್ತಃ ತದ್ದಯಾಸಿದ್ಧಸಿದ್ಧಿಮಾನ್॥ ೧೦ ॥

ತತ್ಕೃಪಾಽಽಪ್ತಸಮಾಧಿಸ್ಥಃ ತತ್ಸಂರುದ್ಧಸಮಾಧಿಮಾನ್।
ತದ್ವಿಯೋಗಾತಿದುಃಖಾರ್ತಃ ತದಾಜ್ಞಾಪರಿಪಾಲಕಃ॥ ೧೧ ॥

ಸಮಲಂಕೃತಸಂನ್ಯಾಸಃ ಪರವೈರಾಗ್ಯಸಂಯುತಃ।
ತೀರ್ಥಾಟನಸಮಾಸಕ್ತಃ ದೇವೀಕ್ಷೇತ್ರಸಮಾಗತಃ॥ ೧೨ ॥

ತದ್ದರ್ಶನಸಮಾಕಾಂಕ್ಷೀ ದರ್ಶನಾನಂದತುಂದಿಲಃ।
ತತ್ಸಂಸ್ಫೂರ್ತಿಸಮಾಯುಕ್ತಃ ತೀರ್ಣಾಬ್ಧಿರ್ಗಿರಿಸಂಸ್ಥಿತಃ॥ ೧೩ ॥

ಸರ್ವರಾತ್ರಸಮಾಧಿಸ್ಥಃ ಗುರ್ವಾಜ್ಞಾಪಿತಮಾನಸಃ।
ಸ್ವದೇಶೋದ್ಧಾರದೀಕ್ಷಾವಾನ್ ವಿದೇಶಗಮನೋತ್ಸುಕಃ॥ ೧೪ ॥

ಸರ್ವಧರ್ಮಸಭಾಮಧ್ಯಸಂಸ್ಥಾಪಿತಸುಕೀರ್ತಿಮಾನ್।
ವೇದಾಂತಕೇಸರೀ ಧೀಮಾನ್ ಶಿಷ್ಯಾಯಿತಸಿತಪ್ರಜಃ॥ ೧೫ ॥

ಚಕ್ರಸುದರ್ಶನಧಾರೀ
ಭಕ್ತನಕೀ ಟೇಕ್ ನ ಟಾರೀ॥

ಜೈಸೀ ಲಾಜ ರಾಖೀ ದ್ರೌಪದಿಕೀ
ಹೋನ ನ ದೀನಿ ಉಘಾರೀ
ಖೈಂಚತ ಖೈಂಚತ ದೋ ಭುಜ ಥಾಕೇ
ದುಶ್ಯಾಸನ ಪಚಿಹಾರೀ
ಚೀರ ಬಢಾಯೋ ಮುರಾರೀ॥

ಸೂರದಾಸಕೀ ಲಾಜ ರಾಖೋ
ಅಬ್‌ಕೋ ಹೈ ರಖವಾರೀ
ರಾಧೇ ರಾಧೇ ಶ್ರೀವರ ಪ್ಯಾರೋ
ಶ್ರೀವೃಷಭಾನದುಲಾರೀ
ಶರಣ ತಕ್ ಆಯೋ ತುಮ್ಹಾರೀ॥

– **ಸೂರದಾಸ**

ಭೈರವ – ತ್ರಿತಾಲ

ಜಾಗೋ ಜಾಗೋ ಜಾಗೋ ಮೋಹನ ಪ್ಯಾರಾ॥

ಕೋಯಲ ಕೂಜತ ಬನ ಬನ ಬೋಲೇ॥

ಬಿಂದಿರಾಬನಮೇ ಮುರಲೀ ಬಜಾಯೀ
ನಂದಲೋಗಕೇ ಸಂಗ ಕನ್ಹಯ್ಯಾ
ಹರರಂಗ ಮನ ಪ್ರಭು ತುಮ್ಹಾರೇ ಚರಣಕೀ॥

– **ಹರರಂಗ**

ಝಿಂಝೋಟಿ – ದಾದರಾ

ಮೇರೇ ತೋ ಗಿರಿಧರ ಗೋಪಾಲ ದೂಸರಾ ನ ಕೋಯೀ॥

ಜಾಕೇ ಸಿರ ಮೋರಮುಕುಟ ಮೇರೋ ಪತಿ ಸೋಯೀ।
ಶಂಖ ಚಕ್ರ ಗದಾ ಪದ್ಮ ಕಂಠಮಾಲಾ ಹೋಯೀ॥

ತಾತ ಮಾತ ಭ್ರಾತ ಬಂಧು ಅಪನೋ ನ ಕೋಯೀ।
ಅಬತೋ ಬಾತ ಫೈಲ ಗಈ ಜಾನೇ ಸಬ ಕೋಯೀ॥

ಸಂತನಸಂಗ ಬೈಠ ಬೈಠ ಲೋಕಲಾಜ ಖೋಯೀ।
ಛಾಡ ದಈ ಕುಲಕೀ ಕಾನ ಕ್ಯಾ ಕರೇಗಾ ಕೋಯೀ॥

ಅಸುವನ ಜಲ ಸೀಂಚ ಸೀಂಚ ಪ್ರೇಮಬೀಜ ಬೋಯೀ।
ಮೀರಾ ಪ್ರಭು ಲಗನ ಲಾಗೀ ಜೋ ಹೋಯ್‌ಸೋ ಹೋಯೀ॥

– ಮೀರಾ

ಮಾಲಕೌಂಸ್ – ತ್ರಿತಾಲ

ಪಗ ಘುಂಘುರು ಬಾಂಧಕರ ನಾಚೀರೇ॥

ಲೋಗ ಕಹೇ ಮೀರಾ ಹೋಗಈ ಬಾವರೀ
ಸಾಸ ಕಹೇ ಕುಲನಾಸೀರೇ।
ಜಹರ ಪ್ಯಾಲಾ ರಾಣಾನೇ ಭೇಜಾ
ಪೀವತ ಮೀರಾ ಹಾಸೀರೇ॥

ಮೈತೋ ಅಪನೇ ನಾರಾಯಣ ಕೀ
ಹೋಗಯೀ ಆಪಹೀ ದಾಸೀರೇ।
ಮೀರಾ ಕೇ ಪ್ರಭು ಗಿರಿಧರ ನಾಗರ
ವೇಗ ಮಿಲಾ ಅವಿನಾಸೀರೇ॥

– ಮೀರಾ

ಮಿಶ್ರ – ಕಹರವಾ

ಭೈಯಾರೇ ಕನ್ಹೈಯಾರೇ
    ನೇಕ ದರಶ ದಿಖಾಯೇ ಜಾ ರೇ।
ಶ್ಯಾಮಲಿಯಾ ಪ್ಯಾರೇ ಬನ್ಸೀವಾರೇ
    ಮೇರೇ ಛಾತಿಯಾಪೇ ಆಜಾ ರೇ॥

ಮೇರೋ ಭೈಯಾ ವರಜ್‌ಲಾಲಾ
    ವ್ರಜಬಾಲ ಸೈಯಾ ನಂದದುಲಾಲಾ।
ಯಮುನಾಕಿನಾರೇ ಧೀರಸಮೀರೇ
    ನೇಕ ಬಾಸರೀ ಬಾಜಾಯೇ ಜಾ ರೇ॥

ಪ್ರಾಣಕೀ ಪ್ರಾಣ ಭೈಯಾ ಮೇರೋ
    ಭಿಕ್ಷಾ ಮಾಂಗಿ ದರಶನ ತೇರೋ।
ನಯನಮೇ ತಾರೋ ಪಿಯಾಸ ನಿವಾರೋ
    ಮೇರೇ ರಾಜನಕೀ ರಾಜಾ ರೇ॥

– ವ್ರಜೇಂದ್ರನಾಥ ಮುಖ್ಯೋಪಾಧ್ಯಾಯ

ಪೀಲೂ – ತ್ರಿತಾಲ

ತುಮ ಬಿನ ಮೋರೀ ಕೌನ ಖಬರ ಲೇ
ಗೋವರ್ಧನ ಗಿರಿಧಾರೀ॥

ಮೋರಮುಕುಟ ಪೀತಾಂಬರ ಸೋಭೇ
ಕುಂಡಲಕೀ ಛಬ್ ನ್ಯಾರೀ ರೇ॥

ಭರಿಸಭಾ ಮೇ ದ್ರೌಪದಿ ಠಾಡೇ
ರಾಖೋ ಲಾಜ್ ಹಮಾರೀ।

ಮೀರಾ ಕೇ ಪ್ರಭು ಗಿರಿಧರ ನಾಗರ
ಚರಣ ಕಮಲ ಬಲಿಹಾರೀ॥

– ಮೀರಾ

ಭೀಮಪಲಾಸೀ – ತ್ರಿತಾಲ

ಆನಂದಾಚ ಕಂದ ಹರಿಲಾ ದೇವಕೀನಂದನ ಪಾಹಿಲಾ॥

ಭಕ್ತ ಸಾಠಿ ಠೇವುನ ಕರಕಟಿ ಭೀಮಾ ನಿಕಟೀ ರಾಹಿಲಾ॥

ಕಂಸಭಯಾನೇ ವಸುದೇವಾನೇ
ನಂದಯಶೋದೇ ವಾಹಿಲಾ॥

ಯಜ್ಞ ಯಾಗ ಜಪ ತಪಾಸಿ ನ ಭೂಲೇ
ಧ್ಯಾನ ಧಾರಣೇ ನಾಕಲೇ
ನಿಶ್ಚಯ ಸಾಚ ಪರಿ ತುಕಾ ಯಾಚ
ಭಕ್ತಿ ಗುಣಾಸೀ ಮೋಹಿಲಾ॥

– **ತುಕಾರಾಮ**

ಶಂಕರಾ – ತ್ರಿತಾಲ

ಜನ್ಮಜನ್ಮಕ್ರೋ ಮೈ ದಾಸ ತುಮ್ಹಾರೋ।
ಕರುಣಾಕರ ಅಬ ಪಾರ ಮುರಾರೇ॥

ಭವಸಾಗರ ಜಲ ತರನ ಕಠಿಣ ಹೈ।
ಕಿಸವಿಧ ಜಾವೂ ಪಾರ ಮುರಾರೇ॥

ತುಮ ಬಿನ ಔರ ನ ಪಾಲಕ ಮೇರೋ।
ವಂಚಕ ಸಬ್ ಪರಿವಾರ ಮುರಾರೇ॥

ಮೈ ಗುಣಹೀನ ದೋಷಪರಿಪೂರಣ।
ಅಪನೀ ಓರ ನಿಹಾರ ಮುರಾರೇ॥

ಬ್ರಹ್ಮಾನಂದ ವಿಲಂಬ ನ ಕೀಜೇ।
ಸುನಿಯೇ ಮೇರೀ ಪುಕಾರ ಮುರಾರೇ॥

– **ಬ್ರಹ್ಮಾನಂದ**

ಭಜನೆ – ತ್ರಿತಾಲ

ಜಯ ಜಗದೀಶ ಹರೇ ಸ್ವಾಮಿ ಜಯ ಜಗದೀಶ ಹರೇ।
ಭಕತ ಜನೋಂಕಾ ಸಂಕಟ ಛಿನಮೇ ದೂರ ಕರೇ।।

ಜೋ ಧ್ಯಾವೇ ಫಲ ಪಾವೇ ದುಃಖ ಬಿನಸೇ ಮನಕಾ।
ಸುಖಸಂಪತಿ ಘರ ಆವೇ ಕಷ್ಟ ಮಿಟೇ ತನಕಾ।।

ಮಾತಾ ಪಿತಾ ತುಮ ಮೇರೇ ಶರಣ ಜಾವೂ ಕಿಸಕೀ।
ತುಮ ಬಿನ ಔರ ನ ದೂಜಾ ಆಶ ಕರೂ ಜಿಸಕೀ।।

ತುಮ ಪೂರಣ ಪರಮಾತ್ಮಾ ತುಮ ಅಂತರಯಾಮೀ।
ಪಾರಬ್ರಹ್ಮ ಪರಮೇಶ್ವರ ತುಮ ಸಬಕೇ ಸ್ವಾಮೀ।।

ತುಮ ಕರುಣಾಕೇ ಸಾಗರ ತುಮ ಪಾಲನ ಕರತಾ।
ಮೈ ಮೂರಖ ಖಲ ಕಾಮೀ ಕೃಪಾ ಕರೋ ಭರತಾ।।

ತುಮ ಹೋ ಏಕ ಅಗೋಚರ ಸಬಕೇ ಪ್ರಾಣಪತೀ।
ಕಿಸ ವಿಧ ಮಿಲೂ ಗುಸಾಯೀ ತುಮಕೋ ಮೈ ಕುಮತೀ।।

ದೀನಬಂಧು ದುಃಖಹರತಾ ಠಾಕುರ ತುಮ ಮೇರೇ।
ಅಪನೇ ಹಾಥ ಉಠಾವೋ ದ್ವಾರ ಪರೋ ತೇರೇ।।

ವಿಷಯ ವಿಕಾರ ಮಿಟಾವೋ ಪಾಪ ಹರೋ ದೇವಾ।
ಶ್ರದ್ಧಾ ಭಕತಿ ಬಢಾವೋ ಸಂತನಕೀ ಸೇವಾ।।

ದರಬಾರೀ ಕಾನಡಾ – ಝಪತಾಲ

ಶ್ಯಾಮಲ ಕದಂಬ ಮೂಲೇ
ಮುರಲೀ ಬಾಜಾವತ
ಖೇಲತ ಮೋಹನ ಶ್ಯಾಮ್॥

ನವನೀರದ ನೇತ್ರೇ ಜೈಸೇ
ಖೇಲತ ಬಿಜುರಿಯಾ ನಯನ ಮೋಹೇ॥

ಪ್ರಭು ಹೋ ಕೃಪಾಲು ಅತುಲ ಗುಣಾಕೋ
ದೇಖಕೇ ಜೀಯಾರಾ ಹೋತ್
ಸುಮಧುರ್ ಹಾಸ್ ಜೀಯಾರಾ ಉದಾಸ್
ಬ್ರಜವನ ವಿಹಾರೀ ವನಮಾಲೀ ವಂಶೀಧಾರೀ॥

ಭೂಪಾಲೀ – ತ್ರಿತಾಲ

ತುಮ್ಹರೇ ಕಾರಣ ಸಬ ಸುಖ ಛೋಡ್ಯಾ
ಅಬ ಮೋಹಿಂ ಕ್ಯೋಂ ತರಸಾವೋ ಹೋ॥

ಬಿರಹ ಬಿಥಾ ಲಾಗೀ ಉರ ಅಂತರ
ಸೋ ತುಮ ಆಯ ಬುಝಾವೋ ಹೋ॥

ಅಬ ಛೋಡತ ನಹೀ ಬಡೈ ಪ್ರಭುಜೀ
ಹँಸಕರ ತುರತ ಬುಲಾವೋ ಹೋ।
ಮೀರಾದಾಸೀ ಜನಮ ಜನಮಕೀ
ಸಾಂಚೀ ದಾಸೀ ಬನಾವೋ ಹೋ॥

– ಮೀರಾ

ಮಿಶ್ರ ಪೀಲೂ – ಕವಾಲೀ

ಠುಮಕ ಠುಮಕ ಪಗ
ಕುಮಕ ಕುಂಜ ಮಗ
ಚಪಲಚರಣ ಹರಿ ಆಯೇ। ಓಹೋ॥

ಮೇರೇ ಪ್ರಾಣ ಭುಲಾವನ ಆಯೇ
ಮೇರೇ ನಯನ ಲುಭಾವನ ಆಯೇ॥

ನಿಮಿಕ ಝಿಮಿಕ ಝಿಮ
ನಿಮಿಕ ಝಿಮಿಕ ಝಿಮ
ನರ್ತನ ಪದ ವ್ರಜ ಆಯೇ।

ಮೇರೇ ಪ್ರಾಣ ಭುಲಾವನ ಆಯೇ
ಮೇರೇ ನಯನ ಲುಭಾವನ ಆಯೇ॥

ಅಮಲ ಕಮಲ ಕರ
ಮುರಲೀ ಮಧುರ ಧರ
ಬಂಶೀ ಬಜಾವನ ಆಯೇ।

ಮೇರೇ ಪ್ರಾಣ ಭುಲಾವನ ಆಯೇ
ಮೇರೇ ನಯನ ಲುಭಾವನ ಆಯೇ॥

– ಕಾಜಿ ಅಶರಫ್ ಮಹಮೂದ್

ಮಾಂಡ್ – ತ್ರಿತಾಲ

ಮಾಯಿ ಮೈನೇ ಗೋವಿಂದ ಲೀನೋ ಮೋಲ್॥

ಕೋಈ ಕಹೇ ಸಸ್ತಾ ಕೋಈ ಕಹೇ ಮಹಂಗಾ
ಲೀನೋ ತರಾಜೂ ತೋಲ್॥

ಕೋಈ ಕಹೇ ಘರ್‌ಮೇ ಕೋಈ ಕಹೇ ಬನಮೇ
ರಾಧಾ ಕೇ ಸಂಗ ಖಿಲೋಲ್॥

ಮೀರಾ ಕೇ ಪ್ರಭು ಗಿರಿಧರ ನಾಗರ
ಆವತ ಪ್ರೇಮಕೇ ಡೋಲ್॥

– ಮೀರಾ

ಬೇಹಾಗ್ – ತ್ರಿತಾಲ

ಸುಂದರ ತೇ ಧ್ಯಾನ ಉಭಾ ವಿಟೇವರಿ
ಕರ ಕಟಾವರೀ ಠೇವುನಿಯಾ॥

ಗಳಾ ತುಳಸೀಹಾರ ಕಾಂಸೇ ಪೀತಾಂಬರ
ಆವಡೇ ನಿರಂತರ ಹೇಂಚಿ ಧ್ಯಾನ॥

ಮಕರ ಕುಂಡಲೇ ತಳಪತೀ ಶ್ರವಣೀ
ಕಂಠೀ ಕೌಸ್ತುಭಮಣಿ ವಿರಾಜಿತ॥

ತುಕಾ ಮ್ಹಣೇ ಮಾಝೇ ಹೇಂಚಿ ಸರ್ವಸುಖ
ಪಾಹಿನ ಶ್ರೀಮುಖ ಆವಡೀನೇ॥

– ತುಕಾರಾಮ

ಮಿಶ್ರ ಕಲಾವತೀ – ತ್ರಿತಾಲ

ಮದನಗೋಪಾಲ ಸರನ ತೇರೀ ಆಯೋ॥

ಚರನಕಮಲ್ ಕೀ ಸರನ್ ದೀಜಿಯೇ।
ಚೇರಿ ಕರಿ ರಾಖೋ ಘರ್ ಜಾಯೋ॥

ಧನಿ ಧನಿ ಮಾತಾ ಪಿತಾ ಸುತ ಬಂಧು।
ಧನಿ ಜನನಿ ಗೋದ ಖಿಲಾಯೋ॥

ಧನಿ ಧನಿ ಚರನ ಚಲತ ತೀರಥಕೋ।
ಧನಿ ಗುರುಜನ್ ನಾಮ ಸುನಾಯೋ॥

ಶ್ರೀಭಟ್‌ಕೇ ಪ್ರಭು ದಿಯೌ ಅಭಯಪದ
ಜಮ ಡರಪ್ಯೋ ದಾಸ ಕಹಾಯೋ॥

ಮಿಶ್ರ ಅಸಾವೇರೀ – ತ್ರಿತಾಲ

ಅಬ ಮನ ಕೃಷ್ಣ ಕೃಷ್ಣ ಕಹಿ ಲೀಜೇ॥

ಕೃಷ್ಣನಾಮ ಕೀ ಮಾಲಾ ಲೈಕೇ
ಕೃಷ್ಣನಾಮ ಚಿತ ದೀಜೇ॥

ಕೃಷ್ಣನಾಮ ಅಮ್‌ರತ್‌ರಸ ರಸನಾ
ತೃಷಾವಂತ ಹೋ ಪೀಜೇ॥

ಕೃಷ್ಣನಾಮ ಹೈ ಸಾರ ಜಗತ್ ಮೇ
ಕೃಷ್ಣಹೇತು ತನ ಛೀಜೇ॥

ರೂಪಕುವರಿ ಧರಿ ಧ್ಯಾನ ಕೃಷ್ಣಕೋ
ಕೃಷ್ಣ ಕೃಷ್ಣ ಕಹಿ ಲೀಜೇ॥

– ರೂಪಕುವರಿ

ಭೈರವೀ – ದಾದರಾ

ಮೀರಾ ಮಗನ್ ಭಈ ಹರಿಕೇ ಗುಣ ಗಾಯ್॥

ಸಾಂಪ್ ಪಿಟಾರಾ ರಾಣಾ ಭೇಜ್ಯಾ
ಮೀರಾ ಹಾಥ್ ದಿಯಾ ಜಾಯ್।
ನ್ಹಾಯ ಧೋಯ ಜಬ ದೇಖನ ಲಾಗೀ
ಸಾಲಿಗ್‌ರಾಮ ಗಈ ಪಾಯ್॥

ಜಹರಕಾ ಪ್ಯಾಲಾ ರಾಣಾ ಭೇಜ್ಯಾ
ಇಮ್‌ರತ ದಿಯಾ ಬನಾಯ್।
ನ್ಹಾಯ ಧೋಯ ಜಬ್ ಪೀವನ ಲಾಗೀ
ಹೋಗಈ ಅಮರ ಅँಚಾಯ್॥

ಮೀರಾ ಕೇ ಪ್ರಭು ಸದಾ ಸಹಾಈ
ರಾಖೇ ಬಿಘನ ಹಟಾಯ್।
ಭಜನಭಾವ ಮೇ ಮಸ್ತ್ ಡೋಲತೀ
ಗಿರಿಧರ ಪರ ಬಲಿ ಜಾಯ್॥

– ಮೀರಾ

ಸೋಹಿನೀ – ಕವಾಲೀ

ಪಾಂಡುರಂಗ ಶ್ರೀರಂಗ ಭಜರೇ ಮನಾ॥

ಅಮೋಲಿಕ ಜಾತೇ ವಯ ಆತಾ ತರಿ ಧರಿ ಸೋಯ
ಆಸಾ ಕಾಯ ಮಾನವದೇಹ ಯೇಯಿಲ ಪುನ್ಹಾ॥

ವಿಷಯಾಂಚೇ ಸುಖದ್ವಾಡ ಯೇಥೇ ಆಹೇ ಬಹುಗೋಡ
ಪುಡೇ ಆಹೇ ಅವಘಡ ಯಮಯಾತನಾ॥

ತುಕಾ ಮ್ಹಣೇ ಏಕ ಕರಾ ಹರಿಚರಣ ದೃಢ ಧರಾ
ಚುಕೇಲ ಚೌರ್ಯಾ ಶಿಂಚಾ ಫೇರಾ ತುಝಿಯಾ ಪ್ರಾಣಾ॥

– ತುಕಾರಾಮ

ಭೈರವೀ – ಕವಾಲೀ

ಶ್ಯಾಮ್ ಗಿರಿಧಾರಿ ಹೈ
ಪ್ರೀತಮ್ ಹಮಾರೋ ಪ್ಯಾರೋ॥

ಮೋಹನ್ ಅನಾಥನಾಥ್
ಭಕ್ತನ್‌ಕೇ ರಹೇ ಸಾಥ್।
ವೇದ ಗುಣ ಗಾವೇ ಗಾಥ್
ಬಾಂಕೇಬಿಹಾರಿ ಹೈ॥

ಕಮಲ ಬಿಸಾಲ ನೈನ್
ನಿಪಟ ರಸೀಲೇ ಬೈನ್।
ದೀನನ್ ಕೋ ಸುಖ್ ದೈನ್
ಚಾರ್ ಭುಜಧಾರೀ ಹೈ॥

ಸುಮಿರೂ ಮೈ ಸಾಂಝ್ ಭೋರ್
ಬಾರ್‌ಬಾರ್ ಹಾಥ್ ಜೋರ್।
ತುಮಿ ಹೋ ಪ್ರಭುಜೀ ಮೋರ್
ಚರಣ ತಿಹಾರೀ ಹೈ॥

– ಪ್ರತಾಪಬಾಲಾ

ಸಿಂಧುಖಮಾಜ್ – ತ್ರಿತಾಲ

ಕೋಈ ಕಹಿಯೋ ರೇ ಪ್ರಭು ಆವನಕೀ।
ಆವನಕೀ ಮನ ಭಾವನಕೀ॥

ಆಪ ನ ಆವೈ ಲಿಖ ನಹಿ ಭೇಜೈ।
ಬಾಣ ಪಡೀ ಲಲಚಾವನಕೀ॥

ಏ ದೋವು ನೈನ ಕಹ್ಯೋ ನಹಿ ಮಾನೈ।
ನದಿಯಾ ಬಹೈ ಜೈಸೇ ಸಾವನ ಕೀ॥

ಕಹಾಂ ಕರೂ ಕಛು ನಹಿ ಬಸ ಮೇರೋ।
ಪಾಖ್ ನಹೀ ಉಡ ಜಾವನಕೀ॥

ಮೀರಾ ಕಹೈ ಪ್ರಭು ಕಬ ರೇ ಮಿಲೋಗೇ
ಚೇರಿ ಭಈ ಹೂಂ ತೇರೇ ದಾವನಕೀ॥

– ಮೀರಾ

ಪಹಾಡೀ – ತ್ರಿತಾಲ

ಹಮಾರೇ ಮುರಲೀವಾರೋ ಶ್ಯಾಮ್॥

ಬಿನ ಮುರಲೀ ವನಮಾಲ ಚಂದ್ರಿಕಾ
ನಹಿ ಪಹಿಚಾನತ್ ನಾಮ್॥

ಗೋಪರೂಪ ಬೃಂದಾವನಚಾರೀ
ವ್ರಜಜನ ಪೂರನ ಕಾಮ್।
ಯಾಹೀ ಸೋ ಹಿತ ಚಿತ್ತ ಬಡೋ ನಿತ
ದಿನ ದಿನ ಪಲಛಿನ ಯಾಮ್॥

ನಂದೀಸುರ ಗೋವರ್ಧನ ಗೋಕುಲ್
ಬರಸಾನೋ ಬಿಸರಾಮ್।
ನಾಗರೀದಾಸ ದ್ವಾರಿಕಾ ಮಥುರಾ
ಇನಸೋ ಕೈಸೋ ಕಾಮ್॥

– ನಾಗರೀದಾಸ

ಮೇಘ ಮಲ್ಹಾರ – ಝಪತಾಲ

ಪ್ರಬಲದಲ ಸಾಜೇ
ಝುಕ ಝುಮ ಭೂಮಿ ಪರ
ವ್ರಜ ಉಮಂಡ ಘನ ಘುಮಂಡ
ಝುರ ಇಂದ್ರ ಭಾಯೋ॥

ಬರಸತ ಮುಸರ ಧಾರಾ
ಹೋತ ಪ್ರಹರ ಚಾರ।
ಕೃಷ್ಣ ಗಿರಿಕರ ಧರಕೇ
ಗೋಕುಲ ಬಚಾಯೋ॥

ಬೂಂದನಸೇ ಧರಣೀಧರ
ಸಬಕೀ ರಕ್ಷಾ ಕರತ।
ಜೀವಜಂತು ಪಶುಪಕ್ಷಿ
ಅತಿಸುಖ ಪಾಯೋ॥

ತಾನಸೇನ ಕೇ ಪ್ರಭು
ತುಮ್ಹರೀ ಗತಿ ಅದ್‌ಭುತ।
ಸುರಪತಿ ಅಧೀನ ಹೋತ
ಅತಿಸುಖ ಪಾಯೋ॥

– ತಾನಸೇನ

ಭೈರವೀ – ಕವಾಲೀ

ಮತ್ ಕರ್ ಮೋಹ್ ತೂ
ಹರಿಭಜನ ಕೋ ಮಾನ್ ರೇ॥

ನಯನ್ ದಿಯೇ (ಹರಿ) ದರಸನ್ ಕರನೇಕೋ
ಶ್ರವಣ್ ದಿಯೇ ಸುನ್ ಜ್ಞಾನ ರೇ॥

ವದನ್ ದಿಯಾ ಹರಿಗುಣ ಗಾನೇಕೋ
ಹಾಥ ದಿಯೇ ಕರ್ ದಾನ ರೇ॥

ಕಹತ ಕಬೀರ ಸುನೋ ಭಾಯೀ ಸಾಧೋ
ಕಂಚನ್ ನಿಪಜತ್ ಖಾನ್ ರೇ॥

– ಕಬೀರದಾಸ

ಮಿಶ್ರ ಆಭೋಗಿ – ತ್ರಿತಾಲ

ಕರಿ ಗೋಪಾಲ ಕೀ ಸಬ ಹೋಈ।

ಜೋ ಅಪನೋ ಪುರುಷಾರಥ ಮಾನತ್
ಅತಿ ಝೂಠೋ ಹೈ ಸೋಈ॥

ಸಾಧನ ಮಂತ್ರ ಜಂತ್ರ ಉದ್ಯಮ ಬಲ
ಯಹ ಸಬ ಡಾರಹು ಧೋಈ।
ಜೋ ಕಛು ಲಿಖಿ ರಾಖೀ ನಂದನಂದನ
ಮೇಟಿ ಸಕೈ ನಹಿ ಕೋಈ॥

ಸುಖ ದುಃಖ ಲಾಭ ಅಲಾಭ ಸಮಝಿ ತುಮ
ಕತಹಿ ಮರತ ಹೌ ರೋಈ।
ಸೂರದಾಸ ಸ್ವಾಮೀ ಕರುಣಾಮಯ
ಸ್ಯಾಮ ಚರಣ ಮನ ಪೋಈ॥

– ಸೂರದಾಸ

ಮಿಶ್ರಸಿಂಧು – ಕವಾಲೀ

ಶ್ಯಾಮಲ ಬನಸೀವಾಲಾ
ನಂದಲಾಲಾ ಮತವಾಲಾ
ಗೋಕುಲಕೇ ಊಂಜೀವಾಲ॥

ಕೃಷ್ಣ ಕೃಷ್ಣ ಕಹು ಸಾಂಜ ಸಬೇರೇ
ಕೃಷ್ಣ ನಾಮ ಸಬ ದುಃಖಹಾರೇ
ಕೃಷ್ಣ ಹೀ ಭವಸಾಗರ ಪಾರೇ
ಪಾರ ಲಗಾನೇ ವಾಲಾ॥

ಕೋಈ ಕಹತ ಹೈ ಕೃಷ್ಣ ಮುರಾರೀ
ಕೋಈ ಕಹತ ಹೈ ರಾಸಬಿಹಾರೀ
ಕೋಈ ಕಹತ ಹೈ ಹರೇ ಮುರಾರೀ
ಜಪೇ ತುಲಸೀ ಮಾಲಾ॥

ಜೋಗಿಯಾ – ತ್ರಿತಾಲ

ಭಜೋ ಮಧುರ ಹರಿನಾಮ ನಿರಂತರ॥

ಸರಲಭಾವಸೇ ಹರಿ ಭಜೇ ಜೋ
ಪಾವೇ ಸೋ ಸುಖರಾಮ ನಿರಂತರ॥

ಹರಿ ಹೀ ಸುಖ ಹೈ ಹರಿ ಹೀ ಶಾಂತಿ
ಹರಿ ಹೀ ಪ್ರಾಣಾರಾಮ ನಿರಂತರ॥

ಹರಿ ಹೀ ಪಾಪಸೇ ಮುಕ್ತ ಕರೇ ಜೋ
ಭಜನ ಕರೇ ಹರಿನಾಮ ನಿರಂತರ॥

ವಿವಿಧ ಸಂಕೀರ್ತನೆ

ರಾಗಮಾಲಿಕೆ – ತೇವರಾ

ದುರ್ಗಾ–

ಯಾರ ಮಹಿಮಾಜ್ಯೋತಿ ಜಗವನು
ಅಮೃತದಂದದಿ ಎಲ್ಲರೆದೆಯನು
ತುಂಬಿ ರೋಮಾಂಚನವ ಗೈವುದೋ
ಅಂಥ ಪ್ರೇಮದ ಜಲಧಿಯ।
ಜೀವ ನಿನ್ನೊಳಗಿರುವವರೆಗೂ
ಸಾರು ಆತನ ಮಹಿಮೆಯ॥

ಭೀಮಪಲಾಸೀ–

ಯಾರ ಶ್ರೀಶುಭನಾಮ ಹೃದಯದ
ಕೊರಗನೆಲ್ಲ ಕಳೆವುದೋ।
ಯಾರು ನೆಲ ಜಲ ಗಗನ ದೇಶವ-
ನೆಲ್ಲ ವ್ಯಾಪಿಸಿ ನಿಲುವರೋ॥

ಬೇಹಾಗ್–

ಯಾರ ಅನ್ವೇಷಣೆಯಲೀ ಜಗ
ಬರಿದೆ ತೊಳಲುತಲಿರುವುದೋ
ಅಂಥ ದೇವನ ತಿಳಿದು ಬಣ್ಣಿಪ
ಶಕ್ತಿ ಯಾರಿಗೆ ಲಭಿಸಿದೆ।
ಅವನ ಮಹಿಮೆಗೆ ಪಾರವೆಲ್ಲಿದೆ
ಆದಿ ಅಂತ್ಯಗಳೆಲ್ಲಿವೆ॥

ಭೈರವೀ–

ನಿಜದ ತಿಳಿವಿನ ತವರು ಅವನು
ನಿತ್ಯಜೀವನ ಚೇತನ।
ನಿತ್ಯ ಜಾಗ್ರತ ನಿರ್ನಿಮೇಷನು
ದಿವ್ಯ ಶುದ್ಧ ನಿರಂಜನ।
ಅವನ ದರುಶನ ಎದೆಯ ಕಿಲುಬನು
ತೊಳೆದು ಗೈವುದು ಪಾವನ॥

– ವಚನವೇದ

ಸಾಹಾನಾ – ಝಪತಾಲ

ಸಕಲಭಯ ತಲ್ಲಣವ ಪರಿಹರಿಪ ಮಹಿಮನನು
ಒಮ್ಮೆಯಾದರೂ ಏಕೆ ಕರೆಯದಿರುವೆ।

ಭವಘೋರ ಭ್ರಮೆಯಲ್ಲಿ ನಿನ್ನ ನೀನೇ ಮರೆತೆ
ಏನೀ ವಿಡಂಬನೆಯು ನಿನಗೆ ತರವೆ॥

ಜನಧನದ ಸಂಗದಲಿ ಅವನ ಮರೆಯದ ತೆರದಿ
ಎಚ್ಚರಿರು ಭ್ರಮೆಯನ್ನು ಅತ್ತ ದೂಡು।
ನಿಜವನಾರಾಧಿಸಲು ಸರ್ವಪಾಪವಿಮುಕ್ತ
ನನ್ನ ಮಾತಿನ ನಿಜವನಳೆದು ನೋಡು॥

ಭವಜಲಧಿಯನು ದಾಟಿ ನಡೆವ ಮನವಿರೆ ನಿನಗೆ
ಅಳಿಯಾಸೆಗಳ ತೊರೆದು ಹರಿಯ ನುತಿಸು।
ದೇಹಮನಪ್ರಾಣಗಳ ಅವನಿಗರ್ಪಿತ ಮಾಡಿ
ಪ್ರೇಮದಾರಾಧನೆಗೆ ಮನವ ಸಲಿಸು॥

– ವಚನವೇದ

ಮೋಹನ – ತ್ರಿತಾಲ

ನಿರಂಜನ-ಹರಿಚಿದ್ಘನ-ಮೂರುತಿಯನು ನೆನೆಯೊ
ನಿರಂತರ — ಮೋಹನಮೂರುತಿಯನು ನೆನೆಯೊ॥

ಅನುಪಮತೇಜನ ಸುಂದರರೂಪನ
ಭಕ್ತರ ಎದೆಯಲಿ ರಂಜಿಪನ।
ಕೋಟಿಚಂದ್ರಸಮ ಕಾಂತಿಯ ನಾಚಿಸಿ
ಮಿಂಚಿನಂತೆ ನಮ್ಮ ಎದೆಯೊಳು ರಂಜಿಸಿ ಮೋಹಿಪನ॥

ಹೃದಯಪದ್ಮದಲಿ ಪೂಜಿಸು ಆತನ
ಶಾಂತಮಾನಸದಿ ಜ್ಞಾನನಯನದಲಿ
ಅಪೂರ್ವದರ್ಶನ ಮೋಹನನ।
ಭಕ್ತಿಯೋಗದ ಆವೇಶದಿ ಮುಳುಗಿಪ
ಚಿದಾನಂದರಸ ಸಾಗರನ॥

– ವಚನವೇದ

ಮಿಶ್ರ ಮಧುವಂತೀ – ತ್ರಿತಾಲ

ನೀನೇ ದಯಾಮಯ ಇನ್ನಾರಿರುವರು
ನಿನ್ನಂದದ ಹಿತಕಾರಿ।
ನೋವು ನಲಿವಿನಲಿ ಸಮೀಪಬಂಧುವು
ಶೋಕ-ತಾಪ-ಭಯಹಾರಿ॥

ಸಂಕಟಪೂರಿತ ಮೋಹಭವಾರ್ಣವ-
ದುತ್ತರಣಕೆ ಸಹಕಾರಿ।
ಪ್ರಸನ್ನವಾಗಿಸು ಈ ಬಿರುಗಾಳಿಯ
ರಿಪುದಲ ವಿಪ್ಲವಕಾರಿ॥

ಪಾಪದಹನ, ಪರಿತಾಪವನಾರಿಸು
ವರ್ಷಿಸು ಶೀತಲವಾರಿ।
ಎಲ್ಲರು ತ್ಯಜಿಸುವ ಅಂತಿಮಕಾಲದಿ
ನೀನೇ ಆಶ್ರಯಕಾರಿ॥

– ವಚನವೇದ

ಮುಲ್ತಾನೀ – ಏಕತಾಲ

ಕಳೆಯಬೇಕೆ ದಿನಗಳೆಲ್ಲ
ವಿಫಲವಾಗಿ ಹೋಗಿಯೇ।
ಹಗಲು ಇರುಳು ಆಶಾಪಥವ
ಕಾಯುತಿಹೆನು ಸ್ವಾಮಿಯೇ॥

ತ್ರಿಭುವನಗಳ ನಾಥ ನೀನು
ಭಿಕಾರಿ ಅನಾಥ ನಾನು।
ಕರೆಯಲೆಂತು ಮಮ ಹೃದಯದಿ
ನೆಲೆಸು ಎಂದು ಹೀಗೆಯೇ॥

ಹೃದಯಕುಟಿಯ ದ್ವಾರಗಳನು
ಅನವರತವು ತೆರೆದಿರುವೆನು।
ಕೃಪೆಯ ತೋರಿ ಬಂದು ನೀಡು
ಶಾಂತಿಯನ್ನು ಸ್ವಾಮಿಯೇ॥

– ವಚನವೇದ

ಕಾಫೀ – ತೇವರಾ

ದೇವದೇವನ ನಿಜವನರಿಯಲು
ಮನವು ತೊಳಲುತ ಬಳಲಿದೆ।
ಬೀಗಮುದ್ರೆಯನಿಟ್ಟ ಕೋಣೆಯೊ-
ಳಲೆವ ಮರುಳನ ತೆರನಿದೆ॥

ದಿವ್ಯ ಪ್ರೇಮಕೆ ದೊರೆವನವನು
ಶ್ರದ್ಧೆಗಲ್ಲದೆ ಒಲಿಯನು।
ವೇದಶಾಸ್ತ್ರ ಪುರಾಣದರ್ಶನ-
ದಾಚೆಗೇ ನಿಂತಿರುವನು॥

ಭಕ್ತಿಗೊಲಿಯುವ ಹೃದಯದಮೃತಾ-
ನಂದರೂಪನು ಎಂಬರು।
ಇದನರಿತೆ ಆ ಯೋಗಿವರ್‍ಯರು
ಯುಗಯುಗವು ತಪಗೈದರು॥

ಭಕ್ತಿಯೆಚ್ಚರಗೊಳಲು ಎದೆಯಲಿ
ಅವನೆ ನಿನ್ನನು ಸೆಳೆವನು।
ಈ ರಹಸ್ಯವ ಜಗದ ಸಂತೆಯ
ಜನಸಮೂಹಕೆ ತಿಳಿಸೆನು॥

ಶ್ರೀಪ್ರಸಾದನು ನುಡಿವನೀತೆರ
ಮಾತೃಭಾವದಿ ನೆನೆವೆನು।
ನನ್ನ ಸೂಚನೆಯರಿತು ನೀವೇ
ತಿಳಿಯಿರಾತನ ನಿಜವನು॥

– ವಚನವೇದ

ಭೈರವೀ – ದಾದರಾ

ಮಾನವಸಂತಾನದೆಡೆಗೆ ಎನಿತು ಕರುಣೆ ನಿನ್ನದು
ಅದ ನೆನೆದರೆ ಕಂಬನಿಯೆ ಕೋಡಿಯೊಡೆದು ಹರಿವುದು॥

ಹುಟ್ಟಿದಂದಿನಿಂದ ನಾನು
ನಿನ್ನಾಣೆಯ ಮೀರಿದೆ
ಆದರೂ ನೀ ಅಕ್ಕರೆಯಲಿ
ತಾಯ್ತನವನೆ ತೋರಿದೆ।
ಮಧುರವಚನದಿಂದ ಮನವ
ಸಂತೈಸುತ ನಲಿಸಿದೆ
ಇದ ನೆನೆದರೆ ಕಂಬನಿಯೆ
ಕೋಡಿಯೊಡೆದು ಹರಿದಿದೆ॥

ನಿನ್ನೊಲವಿನ ಹೊರೆಯ ಹೊತ್ತು
ನಾನು ಬಹಳ ಬಳಲಿದೆ
ಇನ್ನು ಮುಂದೆ ಹೊರಲಾರದೆ
ಎದೆಯು ನರಳಿ ಕೊರಗಿದೆ।
ನಿನ್ನೊಲವಿನ ಕರಸ್ಪರ್ಶದಿ
ಈ ನೋವನು ನೀಗಿಸು
ನಿನ್ನ ಪಾದಪದ್ಮದಲ್ಲಿ
ನನ್ನನಿರಿಸಿ ಪಾಲಿಸು॥

– ವಚನವೇದ

ಬೇಹಾಗ್ – ದಾದರಾ

ಅರಿತೆ ನಾನು ಅರಿತೆ ನಾನು
ನಿಜದ ನೆಲೆಯನರಿತೆನು।
ಭಾವದಂತರಂಗವರಿತ
ವ್ಯಕ್ತಿಯೊಬ್ಬ ದೊರೆತನು॥

ಎಂದೆಂದೂ ಇರುಳಿಲ್ಲದ
ಬೆಳಕಿನೂರಿನಿಂದ ಅವನು
ನಮ್ಮಲ್ಲಿಗೆ ಬಂದನು।
ಅವನ ಸಂಗದಿಂದ ನಾನು
ಹಗಲಾವುದು ಇರುಳಾವುದು
ಎಂಬುದನೂ ತಿಳಿಯೆನು॥

ಜಪತಪಾದಿ ಕರ್ಮಗಳೂ
ನೀರಸವೆಂದರಿತೆ ನಾನು
ಹಳೆಯ ನಿದ್ರೆ ಹರಿಯಿತು।
ತೂಕಡಿಸುವುದೆಲ್ಲಿ ಬಂತು
ನಿರಂತರವು ಯೋಗದಲ್ಲಿ
ಎಚ್ಚರಿರುವುದಾಯಿತು॥

– ವಚನವೇದ

ದರಬಾರೀ ಕಾನಡಾ – ಝಪತಾಲ

ನೀನೆ ಕಾಪಿಡಬೇಕು ನಾನಿದೋ ಶರಣಾದೆ
ನಿನ್ನ ಪದಕೆ॥

ಪಂಜರದ ಒಳಗಿರುವ ಪಕ್ಷಿಯಂದದಿ ನಾನು
ನಿಸ್ಸಹಾಯಕನಾಗಿ ಬಳಲುತಿರುವೆ॥

ಅನಂತ ಅಪರಾಧಿ ಜ್ಞಾನಶೂನ್ಯನು ನಾನು
ಕರು ಕಳೆದ ಗೋವಿನೊಲು ಭ್ರಮಿಸುತಿರುವೆ॥

– ವಚನವೇದ

ಮಾಲಕೌಂಸ್ – ಝಪತಾಲ

ಎಲ್ಲಿ ಅರಸುವೆ ನೀನು ಓ ನನ್ನ ಕಿಂಕರನೆ
ನಿನ್ನ ಬಳಿಯೇ ನಾನು ವಾಸಿಸಿರುವೆ।
ನಾನು ನಿನ್ನೊಂದಿಗೇ ಇದ್ದರೂ ನನಗಾಗಿ
ಎಲ್ಲೋ ದೂರದಿ ಹುಡುಕಿ ಬಳಲುತಿರುವೆ॥

ನಾನು ಚರ್ಮದೊಳಿಲ್ಲ ರೋಮದೊಳಗೂ ಇಲ್ಲ
ಅಸ್ಥಿಯಲೊ ಮಾಂಸದಲೊ ಹುದುಗಿಕೊಂಡಿಲ್ಲ।
ಗುಡಿಮಸೀದಿಯೊಳಿಲ್ಲ ಕಾಶಿಕೈಲಾಸದಲೊ
ದ್ವಾರಕೆ ಅಯೋಧ್ಯೆಯೊಳೊ ದೊರೆವನಲ್ಲ॥

ಸಂನ್ಯಾಸದೊಳಗಿಲ್ಲ ವೈರಾಗ್ಯದೊಳಗಿಲ್ಲ
ಯೋಗಾದಿ ಸಿದ್ಧಿಗೂ ದೂರ ನಾನು।
ಶ್ರದ್ಧೆ ಎಲ್ಲಿರುವುದೋ ಅಲ್ಲಿ ದೊರೆಯುವೆ ನಾನು
ನನಗಾಗಿ ಹುಡುಕಿದರೆ ದೊರೆವೆ ನಾನು॥

– ವಚನವೇದ

ಭೂಪಾಲೀ – ತೇವರಾ

ಏನು ನಿರುಪಮ ಸೊಬಗು, ಓಹೋ
ಎಂಥ ಚೆಲುವಿನ ಮೋಹನ।
ನನ್ನ ಹೃದಯದ ಮೂರ್ತಿ ಬಂದನು
ಎದೆಯ ಗುಡಿಸಲಿಗೀದಿನ॥

ಎದೆಯೊಳೊಲವಿನ ಚಿಲುಮೆ ಚಿಮ್ಮಿವೆ
ಹತ್ತು ಕಡೆಗೂ ಸುಮ್ಮನೆ।
ಯಾವ ಸಂಪದವನ್ನು ಸುರಿಯಲಿ
ಹೇಳು ನಿನ್ನೀ ಪದದೆಡೆ॥

ನನ್ನ ಹರಣವೆ ಶರಣು ನಿನಗೆ,
ನನ್ನ ಆತ್ಮವೆ ನಿನ್ನದು।
ಮತ್ತೆ ಏನನು ನೀಡಲಯ್ಯಾ
ನನ್ನದೆಲ್ಲವು ನಿನ್ನದು॥

– ವಚನವೇದ

ಝಿಂಝೋಟಿ – ದಾದರಾ

ಧನ್ಯ ಧನ್ಯವಿದೇ ಸುದಿನ
ನಾವೆಲ್ಲರು ಸೇರುವ।
ಪುಣ್ಯಭೂಮಿ ಭಾರತಿಯಲಿ
ನಿನ್ನ ಸತ್ಯಧರ್ಮಗಳನು
ಈ ದಿನವೇ ಸಾರುವ॥

ಎದೆ ಎದೆಯೂ ನಿನ್ನ ಧಾಮ;
ನಿನ್ನ ಪುಣ್ಯ ಮಧುರನಾಮ
ದಿಗ್ದಿಸೆಗಳ ತುಂಬಿದೆ।
ಭಕ್ತವೃಂದ ನಿನ್ನಪಾರ
ಮಹಿಮೆಯನ್ನು ಸಾರಿದೆ॥

ನಾವೆಂದಿಗು ಬಯಸೆವಯ್ಯ
ಜನಧನಾದಿ ಗೌರವ।
ನಮಗಿಲ್ಲವೋ ಅನ್ಯ ಕಾಮ।
ಆರ್ತರಾಗಿ ಬಂದೆವಿಲ್ಲಿ
ನಂಬಿ ನಿನ್ನ ಪಾದವ॥

ನಿನ್ನ ಪಾದ ಅಮೃತನಿಲಯ
ನಮಗಿಲ್ಲವೊ ಮರಣಭಯ।
ಜಯತು ಜಯತು—ನಿರ್ಭಯ॥

– ವಚನವೇದ

ಭೈರವೀ – ತೇವರಾ

ಭಜನೆ ಸಾಧನೆಯಿಂದ ಏನೂ ಫಲವು ದೊರೆಯದೆ ಹೋಯಿತು
ದೀನ ನನ್ನನು ದಿವ್ಯಸ್ಪರ್ಶದಿ ಶುದ್ಧಿಗೈಯುತ ನಿಲ್ಲಿಸು।
ನಿನ್ನ ಪಾದವ ಪಡೆವ ಹಂಬಲದಲ್ಲಿ ದಿನಗಳು ಉರುಳಿವೆ
ಆದರಯ್ಯೋ ನೀನು ಮಾತ್ರವೇ ಕಾಣದೆಲ್ಲೋ ಅವಿತಿಹೆ॥

– ವಚನವೇದ

ಬಾಗೇಶ್ರೀ – ತೇವರಾ

ನಿನ್ನ ಪಾದದ ನೆಳಲ ಸೇರುತ
ಜಾತಿಕುಲದಭಿಮಾನವೆಲ್ಲವ
ದೂರಗೈಯುತ ನಿಂದೆನು।
ಲಜ್ಜೆ ಭಯಗಳ ದೂಡಿ ನಾನೇಕಾಂಗಿ
ಪಯಣಿಗನಾದೆನು॥

ಜಗದ ಮಂದಿಯ ಜೊತೆಗೆ ನೇಹಿಗರೆನ್ನ
ನಿಂದಿಸಿ ತೊರೆದರು।
ನಿನ್ನ ಕೃಪೆಗೀ ಎಲ್ಲ ಬವಣೆಯ
ಸಹಿಸಿ ನಿನ್ನೆಡೆ ಬಂದೆನು॥

ಮಿಶ್ರ ಶಿವರಂಜನೀ–

ನೀನೆ ನನ್ನಾಸರೆಯು ಗುರುವೆ
ಕೊಲ್ಲು ಇಲ್ಲವೆ ಕಾಪಿಡು।
ನಿನ್ನ ಮಹಿಮೆಯು ನನ್ನ ಗೌರವದಲ್ಲಿ
ಎಂಬುದ ನೆನಪಿಡು॥

ನನ್ನ ಎದೆಯಧಿರಾಜ ನೀನೇ।
ನನ್ನ ಒಲವಿನ ಕಿಡಿಯು ನೀನೇ।
ನಿನಗೆ ತಿಳಿದೊಲು ನಡೆಯಿಸು॥

– ವಚನವೇದ

ರಾಗಮಾಲಿಕೆ - ಝಪತಾಲ

ಭೂಪಾಲಿ-

ಸತ್ಯ ಶಿವ ಸುಂದರರನ ರೂಪ ಹೃನ್ಮಂದಿರದಿ
ಹೊಳೆಯುವುದೆಂದೋ।
ನಿತ್ಯ ದರುಶನದಿಂದ ಆ ರೂಪಸಾಗರದಿ
ನಾನಿಳಿವುದೆಂದೋ।
ಆ ದಿವ್ಯ ಶುಭದಿನದ ಉದಯವೆಂದೋ॥

ಪಹಾಡಿ (ಮಧ್ಯಮ)-

ಬಾರಯ್ಯ ಓ ಪ್ರಭುವೆ ಅನಂತಜ್ಞಾನದೊಳು ನನ್ನದೆಯಲಿ।
ಮೂಕವಿಸ್ಮಿತಗೈದು ನನ್ನ ಚಂಚಲಮತಿಗೆ
ತೋರಯ್ಯ ಸಗ್ಗವನು ನಿನ್ನಡಿಯಲಿ।
ಆನಂದದಮೃತಕರನಾಗಿ ನೀ ಮೂಡಯ್ಯ
ನನ್ನ ಹೃದಯಾಕಾಶದೇಶದಲ್ಲಿ॥

ಬೃಂದಾವನ ಸಾರಂಗ-

ಆ ಪ್ರಕಾಶದಿ ನನ್ನ ಮನ
ಚಕೋರನ ತೆರದಿ ನಲಿದಾಡಲಿ
ಸಗ್ಗ ಸುಖ ಅವತರಿಸಿ
ನನ್ನ ಹೃದಯವ ತುಂಬಿ ತುಳುಕಾಡಲಿ॥

ಮಾಲಕೌಂಸ್-

ರಾಜರಾಜೇಶ್ವರನೆ ಓ ನನ್ನ ಪ್ರಾಣಸಖ
ಅದ್ವಿತೀಯನು ನೀನು ಶಾಂತ-ಶಿವನು।
ನಿನ್ನ ಶ್ರೀಚರಣದಲಿ ನನ್ನೆಲ್ಲವನು ಮುಡಿಪು
ಗೈದೆನ್ನ ಗುರಿಯನ್ನು ಸಾಧಿಸುವೆನು॥

ಕಲಾವತೀ-

ಆ ಅನಂತರ ನಾನು ನಿನ್ನ ನಿರ್ಮಲ ಶುದ್ಧ-
ರೂಪವನು ಎಲ್ಲೆಲ್ಲೂ ದರ್ಶಿಸುವೆನು।
ಬೆಳಕು ಬಂದೊಡನೆಯೇ ಕತ್ತಲೋಡುವ ತೆರದಿ
ನಿನ್ನ ಪ್ರಭೆಯುದಯದಲಿ ನನ್ನ ದುರಿತಗಳೆಲ್ಲ ತೊಲಗವೇನು॥

ಭೈರವೀ–

ನಿನ್ನ ಶ್ರೀಧ್ರುವತಾರೆಗೆದೆಯು ತುಡಿವಂದದಲಿ
ವಿಶ್ವಾಸದಗ್ನಿಯನು ದೀಪ್ತಗೊಳಿಸು।
ಓ ದೀನಬಾಂಧವನೆ ದಿನರಾತ್ರಿಯೂ ನಿನ್ನ
ಪ್ರೇಮದಾನಂದದಲಿ ಮಗ್ನಗೊಳಿಸು।
ನೀನೆ ನನ್ನೊಳು ನೆಲೆಸು, ನನ್ನನಳಿಸು॥

– ವಚನವೇದ

ಭೂಪಾಲೀ – ತೇವರಾ

ನಿನ್ನ ಅನುಪಮ ಪ್ರೇಮಕಾಂತಿಯ
ವದನ ದರುಶನವಾಗಲು।
ಜಗದ ಜಂಜಡ ದುಗುಡಗಳ ಭಯ
ನನ್ನ ಬಳಿಗೇ ಬಾರದು॥

ಉದಯಸೂರ್ಯನ ಮೊದಲ ಕಿರಣವು
ಕತ್ತಲೆಯ ಕಳೆವಂದದಿ।
ನಮ್ಮ ಎದೆಯೊಳು ನಿನ್ನ ಬೆಳಕೇ
ಮೂಡಿ ನೋವನು ನೀಗಿ ಮನದೊಳು
ನಿನ್ನ ಪ್ರೇಮವನೆರೆವುದು॥

ನಿನ್ನ ಕರುಣೆ ಪ್ರೇಮಗಳ ನಾ
ನನ್ನ ಮನದಲಿ ನೆನೆದರೆ।
ಹರ್ಷ ಬಾಷ್ಪದ ಹೊನಲು ಹರಿವುದು
ಯಾವ ತಡೆಯೂ ಇಲ್ಲದೆ॥

ಜಯವು ಕರುಣಾಮಯನೆ ನಿರುತವು
ನಿನ್ನ ಒಲವನೆ ಸಾರುವೆ।
ನಿನ್ನ ಕರ್ಮದಿ ನನ್ನ ಪ್ರಾಣವು
ಸಮೆಯಲೆನ್ನುತ ಬೇಡುವೆ॥

– ವಚನವೇದ

ಹಿಂದೋಳ - ಝಂಪತಾಳ

ತಲ್ಲಣಿಸದಿರು ಕಂಡ್ಯ ತಾಳು ಮನವೇ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ॥

ಬೆಟ್ಟದ ತುದಿಯಲ್ಲಿ ಹುಟ್ಟಿರುವ ವೃಕ್ಷಕ್ಕೆ
ಕಟ್ಟೆಯನು ಕಟ್ಟಿ ನೀರೆರೆದವರು ಯಾರೋ।
ಪುಟ್ಟಿಸಿದ ಸ್ವಾಮಿ ತಾ ಹೊಣೆಗಾರನಾಗಿರಲು
ಘಟ್ಯಾಗಿ ಸಲಹುವನು ಇದಕೆ ಸಂಶಯ ಬೇಡ॥

ಅಡವಿಯೊಳಗಾಡುವ ಮೃಗಪಕ್ಷಿಗಳಿಗೆಲ್ಲ
ಅಡಿಗಡಿಗೆ ಆಹಾರವಿತ್ತವರು ಯಾರೋ।
ಪಡೆದ ಜನನಿಯ ತೆರದಿ ಸ್ವಾಮಿ ಹೊಣೆಗೀಡಾಗಿ
ಬಿಡದೆ ರಕ್ಷಿಪನಿದಕೆ ಸಂದೇಹ ಬೇಡ॥

ಕಲ್ಲೊಳಗೆ ಹುಟ್ಟಿರುವ ಕ್ರಿಮಿಕೀಟಗಳಿಗೆಲ್ಲ
ಅಲ್ಲಲ್ಲಿ ಆಹಾರವಿತ್ತವರು ಯಾರೋ।
ಫುಲ್ಲಲೋಚನ ಕಾಗಿನೆಲೆಯಾದಿಕೇಶವನು
ಎಲ್ಲರನು ಸಲಹುವನು ಇದಕೆ ಸಂಶಯ ಬೇಡ॥

- ಕನಕದಾಸ

ಕೇದಾರ - ಏಕತಾಲ

ಬಲು ಮಧುರವೊ ನಿನ್ನ ಹೆಸರು
ಕಿವಿಗೆ ಸುಧೆಯ ಕರೆವುದು।
ದೀನಶರಣ ಪ್ರಾಣರಮಣ
ಅಮೃತಭವನಧನವಿದು॥

ನಿನ್ನ ಹೆಸರ ಕೀರ್ತಿಸಿದರೆ
ನಾವು ಅಮರರಪ್ಪೆವೋ।
ಚಿಂತೆಗಡಲು ನಿಮಿಷದಲ್ಲಿ
ಬತ್ತುತ ಬಯಲಪ್ಪುದೋ॥

ಹೃದಯದಲ್ಲಿ ನಿನ್ನ ಮಧುರ
ಗಾಯನವನೆ ಗೈವೆವು।
ಹೃದಯನಾಥ ಚಿದಾನಂದ
ನಿರುತ ನಿನ್ನ ನೆನೆವೆವು॥

– ವಚನವೇದ

ಅಸಾವೇರಿ – ತೇವರಾ

ಕರುಣ ಶೀತಲ ಕಿರಣ ಶೋಭಿತ
ತರಣಿ ನಿನ್ನಯ ಚರಣಕೆರಗುವೆ॥

ಕಾಮ ಮೋಹದ ತಮವ ಕಳೆಯಲು
ಪ್ರೇಮ ಜ್ಯೋತಿಯ ಕಾಂತಿ ಬೆಳಗಿಹೆ।
ವಿಷಮ ಶೈತ್ಯದಿ ಭೀತ ಜಗಕೆ
ಸೌಮ್ಯ ಸಮತೆಯ ಸ್ಥೈರ್ಯ ನೀಡಿಹೆ॥

ಕರ್ಮಕಾಂಡದ ಕ್ರೌರ್ಯ ಜಡತೆಯಿಂ
ಧರ್ಮಶಾಸ್ತ್ರದ ಶುಷ್ಕವಾದದಿಂ।
ಧರ್ಮಬಾಳ್ವೆಯ ಸಲಹಲೆಂದು
ಧರ್ಮಮೂರುತಿ ಇಳಿದು ಬಂದೆ॥

ಸರ್ವಧರ್ಮದ ಸರ್ವಕರ್ಮದ
ಸರ್ವಸಾರವ ತೆರೆದು ತೋರಿದೆ।
ಸರ್ವಸೃಷ್ಟಿ ವಿಮುಕ್ತಿಸಾಧಕ
ಸರ್ವತ್ಯಾಗಿ ಸಾರ್ವಭೌಮ॥

– ಸ್ವಾಮಿ ಶಾಸ್ತ್ರಾನಂದ

ಪಂತುವರಾಳಿ – ಝಂಪೆತಾಳ

ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ
ನೀ ದೇಹದೊಳಗೋ ನಿನ್ನೊಳು ದೇಹವೋ॥

ಬಯಲು ಆಲಯದೊಳಗೋ ಆಲಯವು ಬಯಲೊಳಗೋ
ಬಯಲು ಆಲಯವೆರಡೂ ನಯನದೊಳಗೋ।
ನಯನ ಬುದ್ಧಿಯ ಒಳಗೋ ಬುದ್ಧಿ ನಯನದ ಒಳಗೋ
ನಯನ ಬುದ್ಧಿಗಳೆರಡೂ ನಿನ್ನೊಳಗೋ ಹರಿಯೇ॥

ಸವಿಯು ಸಕ್ಕರೆಯೊಳಗೋ ಸಕ್ಕರೆಯು ಸವಿಯೊಳಗೋ
ಸವಿಯು ಸಕ್ಕರೆಯೆರಡೂ ಜಿಹ್ವೆಯೊಳಗೋ।
ಜಿಹ್ವೆ ಮನಸಿನ ಒಳಗೋ ಮನಸು ಜಿಹ್ವೆಯ ಒಳಗೋ
ಜಿಹ್ವೆ ಮನಸುಗಳೆರಡೂ ನಿನ್ನೊಳಗೋ ಹರಿಯೇ॥

ಕುಸುಮದೊಳು ಗಂಧವೋ ಗಂಧದೊಳು ಕುಸುಮವೋ
ಕುಸುಮಗಂಧಗಳೆರಡೂ ಘ್ರಾಣದೊಳಗೋ।
ಅಸಮಭವ ಕಾಗಿನೆಲೆಯಾದಿ ಕೇಶವರಾಯ
ಉಸುರಲೆನ್ನಳವಲ್ಲ ಎಲ್ಲ ನಿನ್ನೊಳಗೋ॥

– ಕನಕದಾಸ

ಯಮನ್ – ತ್ರಿತಾಲ

ಮನ ಶುದ್ಧಿಯಿಲ್ಲದವಗೆ ಮಂತ್ರದ ಫಲವೇನು।
ತನು ಶುದ್ಧಿಯಿಲ್ಲದವಗೆ ತೀರ್ಥದ ಫಲವೇನು॥

ಮಿಂದಲ್ಲಿ ಫಲವೇನು ಮೀನು ಮೊಸಳೆಯಂತೆ
ನಿಂದಲ್ಲಿ ಫಲವೇನು ಶ್ರೀಶೈಲ ಕಾಗೆಯಂತೆ।
ಹೊರಗೆ ಮಿಂದು ಒಳಗೆ ಮೀಯದವರ ಕಂಡು
ಬೆರಗಾಗಿ ನಗುತಿದ್ದ ಪುರಂದರವಿಟ್ಠಲ॥

– ಪುರಂದರದಾಸ

ಶಿವರಂಜಿನೀ – ಝಂಪತಾಲ

ಬಿನ್ನಹಕೆ ಬಾಯಿಲ್ಲವಯ್ಯ
ಅನಂತ ಅಪರಾಧ ಎನ್ನೊಳಗೆ ಇರಲಾಗಿ।।

ಶಿಶುಮೋಹ ಸತಿಮೋಹ ಜನನಿ-ಜನಕರ ಮೋಹ
ರಸಿಕ ಭ್ರಾತರ ಮೋಹ ರಾಜಮೋಹ।
ಪಶುಮೋಹ ಭೂಮೋಹ ಬಂಧುವರ್ಗದ ಮೋಹ
ಅಸುರಾರಿ ನಿನ್ನ ಮರೆತೆನೋ ಕಾಯೋ ಹರಿಯೇ।।

ಅನ್ನಮದ ಅರ್ಥಮದ ಅಖಿಲ ವೈಭವದ ಮದ
ಮುನ್ನ ಪ್ರಾಯದ ಮದವು ರೂಪಮದವು।
ತನ್ನ ಸತ್ತ್ವದ ಮದ ಧಾತ್ರಿವಶದ ಮದ
ಇನ್ನು ತನಗೆದುರಿಲ್ಲವೆಂತೆಂಬ ಮದದಿಂದ।।

ಇಷ್ಟು ದೊರಕಿದರೆ ಮತ್ತಿಷ್ಟು ಬೇಕೆಂಬಾಸೆ
ಅಷ್ಟು ದೊರಕಿದರೆ ಮತ್ತಿಷ್ಟರಾಸೆ।
ಕಷ್ಟ ಬೇಡೆಂಬಾಸೆ ಕಡುಸುಖವ ಕಾಂಬಾಸೆ
ನಷ್ಟಜೀವನದಾಸೆ ಪುರಂದರವಿಟ್ಠಲ।।

– ಪುರಂದರದಾಸ

ಆರಭಿ – ಆದಿತಾಲ

ಹರಿದಾಸರ ಸಂಗ ದೊರಕಿತು ಎನಗೀಗ
ವರಗುರು ಉಪದೇಶ ನೆರವಾಯ್ತು।

ಮಾಯದ ಸಂಸಾರ ಮಮಕಾರ ತಗ್ಗಿತು
ತೋಯಜಾಕ್ಷನ ನಾಮ ಜಿಹ್ವೆಯೊಳ್ ನೆಲಸಿತು।।

ಏನೆಂದು ಹೇಳಲಿ ಆನಂದ ಸಂಭ್ರಮ
ಆ ನಂದಗೋಪನ ಕಂದನ ಮಹಿಮೆಯ।
ಎನ್ನ ವಂಶಗಳೆಲ್ಲ ಪಾವನವಾದವು
ಶ್ರೀಪುರಂದರವಿಟ್ಠಲಯ್ಯ ದೊರಕಿದ।।

– ಪುರಂದರದಾಸ

ಭೈರವ – ಝಪತಾಲ

ಬುದ್ಧಚಂದ್ರೋದಯದಿ
ಹಿಗ್ಗಿ ನಮ್ಮೆದೆ ಕಡಲು
ಶಾಂತಿ ಶೀಕರವನಿದೋ ಚೆಲ್ಲುತಿಹುದು
ಜಗವ ಗೆಲ್ಲುತಿಹುದು॥

ನೂರು ಸಾಸಿರ ದಳದ
ಬುದ್ಧಪದ್ಮವು ಅರಳಿ
ಭಕುತಭೃಂಗವು ಬಂದು ಮುತ್ತುತಿಹುದು
ಸುತ್ತ ಸುತ್ತುತಿಹುದು॥

ಜ್ವಾಲೆ ಮೇಲುದ ಹೊದೆದು
ಅಗ್ನಿದೇವನೆ ನಡೆದು
ಕರ್ಮಕಾನನವನ್ನು ದಹಿಸಲೆಂದು
ನಡೆದು ಬರುವನಿಂದು॥

– ಪ್ರಭುಶಂಕರ

ರಾಗಮಾಲಿಕೆ – ಝಪತಾಲ

ಬೃಂದಾವನ ಸಾರಂಗ–

ಕೆಳಗಿಳಿದು ಹರಿಯುವುದೆ ಜಲದ ನಿಜಗುಣವಯ್ಯ
ತಳೆಯುವುದು ಮಲಿನತೆಯ ಕೊಳೆನೆಲದಿ ಹರಿಯುತ್ತ।
ಜಲನಿಧಿಯ ಸೇರಿ ತಾ ಬಲು ಕ್ಷಾರವಾಗುತಲಿ
ಸಲಿಲಾರ್ಥಿ ಜನರಿಂಗೆ ಅನಲಸಮವಾಗುವುದು॥

ದುರ್ಗಾ–

ಗಗನದಲ್ಲಿಹ ರವಿಯು ಜಗವನೆಲ್ಲವ ಬೆಳಗಿ
ಸಗರಜಲವನು ಕೂಡ ನಗುತ ಕರದಿಂದೆತ್ತಿ।
ವಿಗತದೋಷವ ಗೈದು ಮುಗಿಲರೂಪವ ಕೊಡುತ
ಜಗಕೆಲ್ಲ ಸವಿ ತರುವ ಮಿಗೆ ಸೊಗದ ಮಳೆಕರೆವ॥

ಪೀಲೂ–

ಜಲದವೊಲು ಎಮ್ಮ ಮನ ಕೆಳಮೊಗವು ಚಂಚಲವು
ನಲಿನಲಿದು ಹರಿಯುವುದು ಮಲಿನಮಯ ವಿಷಯದೆಡೆ।
ಜಲಜಾಕ್ಷ ಕೃಪೆಯಿಂದ ಒಲಿದೆಮ್ಮ ಬಾಳ್ಗಳನು
ಜಲಮೂರ್ತಿ ಮೇಲೆತ್ತಿ ಸಲಹಯ್ಯ ಸ್ವಾಮಿ॥

– ಸ್ವಾಮಿ ಶಾಸ್ತ್ರಾನಂದ

ಬೇಹಾಗ್ – ಝಂಪೆತಾಲ

ಶಕ್ತನಾದರೆ ನೆಂಟರೆಲ್ಲ ಹಿತರು। ಅ-
ಶಕ್ತನಾದರೆ ಅವರೇ ವೈರಿಗಳು ಲೋಕದಲಿ॥

ಕಮಲ ಅರ್ಕನಲಿರುವ ಕಡು ನೆಂಟತನದಿಂದ
ವಿಮಲಜಲದೊಳಗೆ ಅದು ಆಡುತಿಹುದು।
ಕ್ರಮಗೆಟ್ಟು ನೀರಿಂದ ತಡಿಗೆ ಬೀಳಲು ರವಿಯ
ಅಮಿತ ಕಿರಣಗಳಿಂದ ಕಂದಿಹೋಗುವುದು॥

ವನ ಸುತ್ತಿ ಸುಡುವಾಗ ವಾಯು ಬೀಸಲು ಉರಿಯು
ಘನ ಪ್ರಜ್ವಲಿಸುತಿಹುದು ಗಗನಕಡರಿ।
ಮನೆಯೊಳಿಹ ದೀಪಕ್ಕೆ ಮಾರುತನು ಸೋಂಕಿದರು
ಘನಶಕ್ತಿಯುಡುಗಿ ತಾ ನಂದಿಹೋಗುವುದು॥

ಕರಿಯ ಕಾಯಿದ ಹರಿಯ ಕರುಣ ತಪ್ಪಿದ ಮೇಲೆ
ಮರೆಯ ಹೊಕ್ಕರು ಕಾವ ಮಹಿತರಾರಯ್ಯ।
ವರದ ಶ್ರೀಪುರಂದರವಿಟ್ಠಲನು ಒಲಿದಿರಲು
ಸರುವ ಜನರೆಲ್ಲ ಮೂಜಗದಿ ಹಿತರು॥

– ಪುರಂದರದಾಸ

ಬಾಗೇಶ್ರೀ – ಏಕತಾಲ

ಮಣಿಯಲೆನ್ನ ಶಿರವು ನಿನ್ನ
ಚರಣಧೂಳಿ ತಲದಲಿ।
ನನ್ನ ಅಹಂಕಾರವೆಲ್ಲ
ಮುಳುಗಲಶ್ರುಜಲದಲಿ॥

ನನಗೆ ನಾನೆ ಪೂಜೆಗೈಯೆ
ಸೊಡರನೆತ್ತಲು।
ಬೆಳಕು ಬರುವ ಬದಲು ಅಯ್ಯೋ
ಬರಿಯ ಕತ್ತಲು।
ಅಹಂಕಾರದಂಧಕಾರ
ಮುತ್ತುತಿದೆ ಸುತ್ತಲು॥

ನನ್ನ ನಾನೆ ಮೆರೆಯದಂತೆ
ನಾನು ಗೈವ ಕರ್ಮದಿ।
ನಿನ್ನ ಇಚ್ಛೆ ಪೂರ್ಣವಾಗ-
ಲೆನ್ನ ಜೀವಧರ್ಮದಿ॥

ತಳೆಯಲೆನ್ನ ಜ್ಞಾನ ನಿನ್ನ
ಚರಮಶಾಂತಿಯ।
ಬೆಳಗಲೆನ್ನ ಪ್ರಾಣ ನಿನ್ನ
ಪರಮಕಾಂತಿಯ।
ನನ್ನನಳಿಸು ನೀನೆ ನೆಲಸು
ಹೃದಯಪದ್ಮದಲದಲಿ॥

– ಕುವೆಂಪು

ಮೋಹನ - ಝಂಪೆತಾಳ

ಇನಿತಾದರೂ ನಿನಗೆ ಮತಿಯಿಲ್ಲವೆ ಮನವೆ।
ಹೀನಾಯ ಮಾಡದಿರು ಪರದೋಷಗಳನೆಣಿಸಿ॥

ಅವನ ಬಯ್ಯುವೆ ಯಾಕೆ ಅವನ್ಯಾರು ನೀನ್ಯಾರು
ಅವನ ಪಾಪಕೆ ನೀನು ಭಾಗಿಯಾದೆ।
ಅವನು ಉತ್ತಮನಾದರವನು ಬದುಕಿದ ಕಾಣೊ
ಅವ ಪುಣ್ಯ ಮಾಡಿದರೆ ಅವನ ಕುಲ ಉದ್ಧಾರ॥

ನೀನು ಪಡೆವುದರಲ್ಲಿ ಬೇಡಬಂದವನಲ್ಲ
ನಿನಗು ಅವನಿಗು ಏನು ಸಂಬಂಧವೊ।
ಮನೆ ಒಡವೆ ವಸ್ತ್ರಗಳ ಭಾಗ ಕೇಳುವುದಿಲ್ಲ
ಕ್ಷಣಕ್ಷಣಕೆ ಸಂದೇಹ ಮಾಡಿಕೊಂಬುದು ಸಲ್ಲ॥

ನಿನ್ನ ಗತಿ ಮಾರ್ಗಕ್ಕೆ ಅವ ನಡೆದು ಬರುವನೆ
ನಿನ್ನಿಂದ ಪರಲೋಕ ಅವಗೆ ಉಂಟೆ।
ನಿನ್ನೊಳಗೆ ನೀ ತಿಳಿದು ಶ್ರೀವಿಜಯವಿಟ್ಠಲನ್ನ
ಸನ್ನುತಿಸಿ ಭವರೋಗವನು ಕಳೆದುಕೊಳ್ಳಯ್ಯ॥

- ವಿಜಯದಾಸ

ಮಾಲಕೌಂಸ್ - ತ್ರಿತಾಲ

ಇಂದಿನ ದಿನವೂ ಕಳೆಯಿತು।
ಭವಸಾಗರವನು ದಾಟಲು ನೀನು
ಸಿದ್ಧತೆಯೇನನು ಮಾಡುತಿಹೆ॥

ಜೀವನರವಿ ತಾ ಮುಳುಗುತಲಿರುವುದ
ಕಾಣುತಲಿದ್ದರು ಕಾಣದ ತೆರದಲಿ
ಕುರುಡನಂತೆ ನೀ ನಿಂತಿರುವೆ॥
ಮಾಯೆಯ ಜಗದಲಿ ಭ್ರಾಂತನಾಗಿ ನೀ
ನಿತ್ಯೈಶ್ವರ್ಯವ ಮರೆತಿರುವೆ॥

- (ಅನು.) ಎಚ್. ಎನ್. ಮುರಳೀಧರ

ಝಿಂಝೋಟಿ – ದೀಪಚಂದೀ

ಜಾಲಿಯ ಮರದಂತೆ ಧರೆಯೊಳು। ದುರ್ಜನರು
ಜಾಲಿಯ ಮರದಂತೆ॥
ಮೂಲಾಗ್ರ ಪರಿಯಂತ ಮುಳ್ಳು ಕೂಡಿಪ್ಪಂತೆ॥

ಬಿಸಿಲಲ್ಲಿ ಬಳಲಿ ಬಂದವರಿಗೆ ನೆರಳಿಲ್ಲ
ಹಸಿದು ಬಂದವರಿಗೆ ಹಣ್ಣು ಇಲ್ಲ।
ಕುಸುಮ ವಾಸನೆ ಇಲ್ಲ ಕೂಡಲು ಸ್ಥಳವಿಲ್ಲ
ರಸದಲ್ಲಿ ಸ್ವಾದವು ವಿಷದಂತೆ ಇರುತಿಹ॥

ತನ್ನಿಂದ ಉಪಕಾರ ತೊಟಕಾದರೂ ಇಲ್ಲ
ಬಿನ್ನಾಣ ಮಾತಿಗೆ ಕೊನೆಯಿಲ್ಲವು।
ಅನ್ನಕ್ಕೆ ಸೇರಿದ ಹೀನ ಮಾನವರಂತೆ
ಇನ್ನಿವರ ಕಾರ್ಯವು ಪುರಂದರವಿಟ್ಠಲ॥

– ಪುರಂದರದಾಸ

ಪಹಾಡೀ – ಕವಾಲೀ

ಕೊಟ್ಟವರು ಸರಿಯೆ। ಕೊಡದೆ
ಬಿಟ್ಟವರು ಸರಿಯೆ॥

ಇಕ್ಕಿದವರಿಗುಂಟು। ಮದದಲಿ
ಸೊಕ್ಕಿದರೇನುಂಟು।
ರಕ್ಕಸಾಂತಕ ಲಕುಮಿಪತಿಯ ಮರೆ-
ಪೊಕ್ಕವರಾದ ಶಿಷ್ಟಭಕುತರಿಗೆ॥

ದೊರೆಯಾದರು ಸರಿಯೆ। ನಮಗೆ
ತಿರುಕನಾದರು ಸರಿಯೆ।
ಸರಸವಿರಸದಿಂ ನುಡಿದರೇನು ನರ-
ಹರಿಪದಕಮಲವ ನಿರುತ ಭಜಿಪರಿಗೆ॥

ಪುಟ್ಟಿಸಿದ ಪ್ರಭುವು। ನಮಗೆ
ಹೊಟ್ಟೆಗೆ ಕೊಡದಿಹನೆ।
ಬೆಟ್ಟದೊಡೆಯ ನಮ್ಮ ಪುರಂದರವಿಠ್ಠಲನ
ಗಟ್ಟಿಯಾಗಿ ನಂಬಿದ ಭಕುತರಿಗೆ॥

– ಪುರಂದರದಾಸ

ಸಿಂಧುಭೈರವೀ – ತೇವರಾ

ಹಂಸ ನಿನ್ನಲ್ಲಿ ನೀ ನೋಡೋ। ಭವ-
ಪಾಶಮುಕ್ತನಾಗಿ ಹರಿಯನ್ನು ಕೂಡೋ॥

ಪಕ್ಕಗಳೆರಡುಂಟು ನಿನಗೆ। ನೀ
ಹೊಕ್ಕು ಹೋಗುವೆ ಮೂರು ಪಂಜರದೊಳಗೆ।
ಲೆಕ್ಕವಿಲ್ಲದ ದಾರಿ ನಿನಗೆ। ಈಗ
ಸಿಕ್ಕಿದೆಯೋ ಮಾಯಾಪಾಶದೊಳಗೆ॥

ಹಬ್ಬದ ಸವಿಗೆ ನೀ ಬಂದೆ। ಬಲು
ಕೊಬ್ಬಿಲಿ ಕಾಣದೆ ವಿಷದೊಳು ಬಿದ್ದೆ।
ದಿಬ್ಬಣದಲಿ ಮೈಯ ಮರೆತೆ। ನೀ
ಒಬ್ಬನೆ ಹೋಗಿ ಕಾಲಕ್ಕೆ ಗುರಿಯಾದೆ॥

ಯಾರಿಗೆ ಯಾರೂ ಮತ್ತಿಲ್ಲ। ನಡು-
ದಾರಿಯೊಳಗೆ ಕೈಯ ಬಿಡುವರೆ ಎಲ್ಲ।
ದೂರ ಹೋಯಿತು ಪ್ರಾಯವೆಲ್ಲ। ಸಿರಿ
ಪುರಂದರವಿಟ್ಠಲನಲ್ಲದೆ ಬೇರೆ ಇಲ್ಲ॥

– ಪುರಂದರದಾಸ

ಮಿಶ್ರ ಪಹಾಡೀ – ದಾದರಾ

ಹಾಂಗೇ ಇರಬೇಕು ಸಂಸಾರದಲ್ಲಿ
ಹ್ಯಾಂಗೆ ಬರೆದಿತ್ತೊ ಪ್ರಾಚೀನದಲ್ಲಿ॥

ಪಕ್ಷಿ ಅಂಗಳದಲ್ಲಿ ಬಂದು ಕೂತಂತೆ
ಆ ಕ್ಷಣದಲ್ಲಿ ಹಾರಿ ಹೋದಂತೆ॥

ನಾನಾ ಪರಿಯಲಿ ಸಂತೆ ನೆರೆದಂತೆ
ನಾನಾ ಪಂಥವ ಹಿಡಿದು ಹೋದಂತೆ॥

ಮಕ್ಕಳು ಆಡಿ ಮನೆ ಕಟ್ಟಿದಂತೆ
ಆಟ ಸಾಕೆಂದು ಅಳಿಸಿ ಪೋದಂತೆ॥

ವಸತಿಕಾರನು ವಸತಿ ಕಂಡಂತೆ
ಹೊತ್ತಾರೆದ್ದು ಹೊರಟು ಹೋದಂತೆ॥

ಸಂಸಾರಪಾಶವ ನೀನೇ ಬಿಡಿಸಯ್ಯಾ
ಕಂಸಾರಿ ಪುರಂದರವಿಟ್ಠಲರಾಯ॥

– ಪುರಂದರದಾಸ

ಬೃಂದಾವನ ಸಾರಂಗ – ತೇವರಾ

ಪ್ರೇಮಗಿರಿಕಂದರದ ಗುಹೆಯಲಿ ಯೋಗಿಯಾಗುತ ನಿಲ್ಲುವೆ
ದಿವ್ಯ ನಿತ್ಯಾನಂದ ನಿರ್ಜರದಲ್ಲಿ ಧ್ಯಾನದಿ ಮುಳುಗುವೆ।
ತತ್ತ್ವಫಲರಸ ಪಾನಗೈಯುತ ಜ್ಞಾನಕ್ಷುಧೆಯನು ತಣಿಸುವೆ,
ಪರಮಪುರುಷನ ಪಾದವನು ವೈರಾಗ್ಯಕುಸುಮದಿ ಪೂಜಿಪೆ॥

ಎದೆಯ ದಾಹಕೆ ನೀರನೆರೆಯಲು ಕೂಪಜಲವನ್ನರಸದೆ
ಶಾಂತಿವಾರಿಯನೆತ್ತಿ ಹೃದಯದ ಹೊನ್ನಗಿಂಡಿಯ ತುಂಬುವೆ।
ನಿನ್ನ ಪದಪದ್ಮಗಳ ಸುಧೆಯನು ದಿನವು ದಿನವೂ ಕುಡಿಯುತ,
ನಗುವೆ, ಕುಣಿಯುವೆ, ಅಳುವೆ, ಹಾಡುವೆ,
ಪರಮತೋಷದಿ ಮೀಯುತ॥

– ವಚನವೇದ

ದರಬಾರೀ ಕಾನಡಾ - ತೇವರಾ

ಆಚಾರವಿಲ್ಲದ ನಾಲಿಗೆ। ನಿನ್ನ
ನೀಚ ಬುದ್ಧಿಯ ಬಿಡು ನಾಲಿಗೆ।
ವಿಚಾರವಿಲ್ಲದೆ ಪರರ ದೂಷಿಪುದಕೆ
ಚಾಚಿಕೊಂಡಿರುವಂಥ ನಾಲಿಗೆ॥

ಪ್ರಾತಃಕಾಲದೊಳೆದ್ದು ನಾಲಿಗೆ। ಸಿರಿ-
ಪತಿಯೆನ್ನಬಾರದೆ ನಾಲಿಗೆ।
ಪತಿತಪಾವನ ನಮ್ಮ ರತಿಪತಿಜನಕನ
ಸತತವು ನುಡಿ ಕಂಡ್ಯ ನಾಲಿಗೆ॥

ಚಾಡಿ ಹೇಳಲಿಬೇಡ ನಾಲಿಗೆ। ನಿನ್ನ
ಬೇಡಿಕೊಂಬೆನು ಕಂಡ್ಯ ನಾಲಿಗೆ।
ರೂಢಿಗೊಡೆಯ ಶ್ರೀರಾಮನ ಪಾದವ
ಪಾಡುತಲಿರು ಕಂಡ್ಯ ನಾಲಿಗೆ॥

ಹರಿಯನ್ನೆ ಸ್ಮರಿಸಯ್ಯ ನಾಲಿಗೆ। ನರ-
ಹರಿಯನ್ನೆ ಭಜಿಸಯ್ಯ ನಾಲಿಗೆ।
ವರದ ಪುರಂದರವಿಟ್ಠಲರಾಯನ
ಚರಣವ ನುತಿಸಯ್ಯ ನಾಲಿಗೆ॥

- ಪುರಂದರದಾಸ

ಕಲಾವತೀ – ಕವಾಲೀ

ರಾಗಿ ತಂದೀರ್ಯಾ ಭಿಕ್ಷಕೆ ರಾಗಿ ತಂದೀರ್ಯಾ।
ಯೋಗ್ಯರಾಗಿ ಭೋಗ್ಯರಾಗಿ ಭಾಗ್ಯವಂತರಾಗಿ ನೀವು॥

ಅನ್ನದಾನವ ಮಾಡುವರಾಗಿ
ಅನ್ನಛತ್ರವನಿಟ್ಟವರಾಗಿ।
ಅನ್ಯವಾರ್ತೆಯ ಬಿಟ್ಟವರಾಗಿ
ಅನುದಿನ ಭಜನೆಯ ಮಾಡುವರಾಗಿ॥

ಮಾತಾಪಿತರನು ಸೇವಿಪರಾಗಿ
ಪಾಪಕಾರ್ಯವ ಬಿಟ್ಟವರಾಗಿ।
ರೀತಿಯ ಬಾಳನು ಬಾಳುವರಾಗಿ
ನೀತಿಮಾರ್ಗದಲಿ ಖ್ಯಾತರಾಗಿ॥

ಗುರುಕಾರುಣ್ಯವ ಪಡೆದವರಾಗಿ
ಗುರುವಾಕ್ಯವನು ಪಾಲಿಪರಾಗಿ।
ಗುರುವಿನ ಪಾದವ ಸ್ಮರಿಸುವರಾಗಿ
ಪರಮಪುಣ್ಯವ ಮಾಡುವರಾಗಿ॥

ಕಾಮಕ್ರೋಧವ ಅಳಿದವರಾಗಿ
ನೇಮನಿಷ್ಠೆಗಳ ಮಾಡುವರಾಗಿ।
ರಾಮನಾಮವ ಜಪಿಸುವರಾಗಿ
ಪ್ರೇಮದಿ ಕುಣಿಕುಣಿದಾಡುವರಾಗಿ॥

ಹರಿಯನು ಅನುದಿನ ನೆನೆಯುವರಾಗಿ
ಗುರುತಿಗೆ ಬಾಹೋರಂಥವರಾಗಿ।
ಕರೆಕರೆ ಭವವನು ನೀಗುವರಾಗಿ
ಪುರಂದರವಿಠಲನ ಸೇವಿಪರಾಗಿ॥

– ಪುರಂದರದಾಸ

ತಿಲಂಗ್ – ಝಪತಾಲ

ಶ್ರೀಪತಿಯು ನಮಗೆ ಸಂಪದವೀಯಲಿ
ವಾಣೀಪತಿಯು ನಮಗೆ ದೀರ್ಘಾಯು ಕೊಡಲಿ॥

ವರವಿಬುಧರನು ಪೊರೆಯೆ ವಿಷವ ಕಂಠದಲಿಟ್ಟ
ಹರ ನಿತ್ಯ ನಮಗೆ ರಕ್ಷಣೆ ನೀಡಲಿ।
ನರರೊಳುನ್ನತವಾದ ನಿತ್ಯ ಭೋಗಂಗಳನು
ಪುರುಹೂತ ದಯದಿಂದ ಪೂರ್ಣಮಾಡಿಸಲಿ॥

ವಿನುತ ಸಿದ್ಧಿಪ್ರದನು ವಿಘ್ನೇಶ ದಯದಿಂದ
ನೆನೆದ ಕಾರ್ಯಗಳ ನೆರವೇರಿಸಲಿ ಹರಸಿ।
ದಿನದಿನವು ಧನ್ವಂತ್ರಿಯಾಪತ್ತುಗಳ ಕಳೆದು
ಮನಹರುಷವಿತ್ತು ಮನ್ನಿಸಲಿ ಬಿಡದೆ॥

ನಿರುತ ಸುಜ್ಞಾನವನು ಬೆಳಗಿ ಕೃಪೆಗೈಯುವ
ಗುರುಗಳಾಶೀರ್ವಾದ ನಮಗಾಗಲಿ।
ಪುರಂದರವಿಟ್ಠಲನ ಕರುಣದಿಂದಲಿ ಸಕಲ
ಸುರರೊಲುಮೆ ನಮಗೆ ಸುಸ್ಥಿರವಾಗಲಿ॥

– ಪುರಂದರದಾಸ

ಮಿಶ್ರ ಭೂಪಾಲೀ – ತ್ರಿತಾಲ

ಹೇ ದೇವ ನಿನ್ನ ದಯವಾದ ಮೇಲೆ
ಇನ್ನಾರ ಗೊಡವೆ ಬೇಕು
ನೀನೊಬ್ಬ ನನಗೆ ಸಾಕು॥

ನೀ ಶಕ್ತಿ-ಶಾಂತಿ-ದಾಯಕ
ದೀನಾರ್ತಪೋಷಕ।
ಎನಿತೊಂದು ಮಹಿಮೆ ನಿನ್ನದು
ಅದ ಕಂಡೇ ಬಳಿಗೆ ಬಂದೆ।
ನಿನ್ನೊಲವು ದೊರೆತ ಮೇಲೆ
ಇನ್ನಾರ ಒಲವು ಬೇಕು
ನೀನೊಬ್ಬ ನನಗೆ ಸಾಕು॥

– ಸ್ವಾಮಿ ಪುರುಷೋತ್ತಮಾನಂದ

ರಾಗಮಾಲಿಕೆ - ತ್ರಿತಾಲ

ಬೇಹಾಗ್-

ಬೇವು ಬೆಲ್ಲದೊಳಿಡಲೇನು ಫಲ
ಹಾವಿಗೆ ಹಾಲೆರೆದೇನು ಫಲ॥

ಕುಟಿಲವ ಬಿಡದಿಹ ಮನುಜರು ಮಂತ್ರವ
ಪಠನೆಯ ಮಾಡಿದರೇನು ಫಲ।
ಸಟೆಯನ್ನಾಡುವ ಮನುಜರು ಸಂತತ
ನಟನೆಯ ಮಾಡಿದರೇನು ಫಲ॥

ಭೂಪಾಲೀ-

ಕಪಟತನದಲಿ ಕಾಡುತ ಜನರನು
ಜಪವನು ಮಾಡಿದರೇನು ಫಲ।
ಕುಪಿತತನವನು ಬಿಡದೆ ನಿರಂತರ
ಉಪವಾಸ ಮಾಡಿದರೇನು ಫಲ॥

ಭೈರವ-

ಮಾತಾಪಿತರನು ಬಳಲಿಸಿದಾತನು
ಯಾತ್ರೆಯ ಮಾಡಿದರೇನು ಫಲ।
ಘಾತಕತನವನು ಬಿಡದೆ ನಿರಂತರ
ಗೀತೆಯನೋದಿದರೇನು ಫಲ॥

ಕಲಾವತೀ-

ಹೀನಗುಣಂಗಳ ಹಿಂಗದೆ ಗಂಗೆಯ
ಸ್ನಾನವ ಮಾಡಿದರೇನು ಫಲ।
ಶ್ರೀನಿಧಿ ಪುರಂದರವಿಠಲನ ನೆನೆಯದೆ
ಮೌನವ ಮಾಡಿದರೇನು ಫಲ॥

- ಪುರಂದರದಾಸ

ಜಯಜಯವಂತೀ – ಝಂಪತಾಲ

ಆವ ರೋಗವು ಎನಗೆ ದೇವ ಧನ್ವಂತ್ರಿ।
ಸಾವಧಾನದಿ ಎನ್ನ ಕೈಪಿಡಿದು ನೋಡಯ್ಯ॥

ಹರಿಮೂರ್ತಿಗಳು ಎನ್ನ ಕಂಗಳಿಗೆ ಕಾಣಿಸವು
ಹರಿಯ ಕೀರ್ತನೆಯು ಕೇಳಿಸದು ಕಿವಿಗೆ।
ಹರಿಮಂತ್ರ ಸ್ತೋತ್ರ ಬಾರದು ಎನ್ನ ನಾಲಿಗೆಗೆ
ಹರಿಪ್ರಸಾದವ ಜಿಹ್ವೆ ಸವಿಯದಯ್ಯ॥

ಹರಿಪಾದ ಸೇವೆಗೆ ಹಸ್ತಗಳು ಚಲಿಸವು
ಗುರುಹಿರಿಯರಂಘ್ರಿಗೆ ಶಿರ ಬಾಗದು।
ಹರಿಯ ನಿರ್ಮಾಲ್ಯವಾಘ್ರಾಣಿಸದು ನಾಸಿಕವು
ಹರಿಯಾತ್ರೆಗಳಿಗೆನ್ನ ಕಾಲೇಳದಯ್ಯ॥

ಅನಾಥಬಂಧು ಗೋಪಾಲವಿಟ್ಠಲರೇಯ
ಎನ್ನ ಭಾಗದ ವೈದ್ಯ ನೀನೆ ನೀನೇ।
ಅನಾದಿಕಾಲದ ಭವರೋಗ ಕಳೆಯಯ್ಯ
ನಾನೆಂದಿಗೂ ಮರೆಯೆ ನಿನ್ನ ಉಪಕಾರ॥

– ಗೋಪಾಲದಾಸ

ಖಮಾಜ್ – ದೀಪ್‌ಚಂದೀ

ಓ ಎಂಥ ನೋಟವ ಕಂಡೆನು, ನಾ
ಕೇಶವಭಾರತಿಯ ಕುಟಿಯೊಳು॥

ಅಲ್ಲಿ ಶ್ರೀಗೌರಾಂಗದೇವನು
ಮತ್ತ ಮಾತಂಗದೊಲು ನರ್ತಿಸಿ
ದಿವ್ಯಮಧುವನು ಕುಡಿದು
ಮರುಳಾಗುತ್ತ ಕಂಬನಿಗರೆಯುತ,
ಹೊರಳಿ, ಕಂಠೀರವದಿ ಹರಿಯನು
ನುತಿಸಿ ದಿವವನು ತಿವಿಯುತ
ದಿವ್ಯಲೀಲೆಯೊಳಿದ್ದನು॥

ಇಂಥ ಪದವಿಯ ಪಡೆದರೂ,
ಅವನೆಂತು ಮನೆಮನೆ ಬಾಗಿಲಲಿ,
ಅದೋ ಮನುಜರೊಲ್ಮೆಯ ಬೇಡಿ ನಡೆವನು
ತಾನು ದೇವರ ದಾಸನೆನ್ನುವ
ಅರಿವ ಪಡೆಯುವ ಬಗೆಯಲಿ॥

ಎಂಥ ನಿಷ್ಠುರವಾದ ಎದೆಯೂ
ಕರಗಿಹೋಗಿದೆ, ಯೋಗಿವೇಷದೊ-
ಳಿರುವ ಶ್ರೀಗೌರಾಂಗದೇವನ
ಮುಖವ ಕಂಡಾಕ್ಷಣದಲಿ॥

ಇಂಥ ಶ್ರೀಗೌರಾಂಗದೇವನ ದಾಸನಾಗುವ ಪುಣ್ಯವೆಂದಿಗೆ
ಎನುವನಿದೋ ಈ ಪ್ರೇಮದಾಸನು ಗೌರಾಂಗದೇವನ ಭಕ್ತನು॥

– ವಚನವೇದ

ಯಮನ್ - ಝಪತಾಲ

ಎಂತಾದರೂ ಚಿಂತೆ ಬಿಡದು। ನಿ-
ಶ್ಚಿಂತರಾದವರ ನಾನೊಬ್ಬರನು ಕಾಣೆ॥

ಬ್ರಹ್ಮನಿಗೆ ಶಿರವೊಂದು ಭಿನ್ನವಾದ ಚಿಂತೆ
ರಕ್ಕಸರ ಗುರುವಿಗೆ ಕಣ್ಣಿಲ್ಲದ ಚಿಂತೆ।
ಮನ್ಮಥಗೆ ತನು ಸುಟ್ಟು ಭಸ್ಮವಾದ ಚಿಂತೆ
ಮುಕ್ಕಣ್ಣ ಶಿವನಿಗೆ ತಿರಿದುಂಬೊ ಚಿಂತೆ॥

ಧರ್ಮನಿಷ್ಠರಿಗೆ ಸುಖದೊಳಿರುವ ಚಿಂತೆ
ದುಷ್ಕರ್ಮಿಗಳಿಗೆ ಪರರ ಕೆಡಿಸುವ ಚಿಂತೆ।
ತಮ್ಮ ಅರ್ಜುನಗೆ ವೈರಿಯ ಕೊಲ್ಲುವ ಚಿಂತೆ
ಅಣ್ಣ ಭೀಮನಿಗೆ ಅನ್ನ ಸಾಲದ ಚಿಂತೆ॥

ಭಕ್ತರಿಗೆ ಗುರುವಿನಲಿ ಮುಕ್ತಿ ಪಡೆಯುವ ಚಿಂತೆ
ಮುಕ್ತರಿಗೆ ಅನುಕ್ಷಣವು ಹರಿದರ್ಶನದ ಚಿಂತೆ।
ಯುಕ್ತಿ ಬಲ್ಲವರಿಗೆ ತತ್ತ್ವ ಹೇಳುವ ಚಿಂತೆ
ಶಕ್ತ ಪುರಂದರವಿಠಲಗೆಮ್ಮ ಸಲಹುವ ಚಿಂತೆ॥

- ಪುರಂದರದಾಸ

ಮಧ್ಯಮಾವತಿ – ತ್ರಿತಾಲ

ಏಸು ಕಾಯಂಗಳ ಕಳೆದು ಎಂಬತ್ನಾಲ್ಕು ಲಕ್ಷಜೀವರಾಶಿಯನ್ನು
ದಾಟಿ ಬಂದ ಈ ಶರೀರ। ತಾನಲ್ಲ ತನ್ನದಲ್ಲ ಆಸೆ ತರವಲ್ಲ
ಮುಂದೆ ಬಾಹೋದಲ್ಲ। ದಾಸನಾಗು ವಿಶೇಷನಾಗು।।

ಆಶಾ ಕ್ಲೇಶ ದೋಷವೆಂಬ ಅಬ್ಧಿಯೊಳು ಮುಳುಗಿ ಯಮನ
ಪಾಶಕ್ಕೊಳಗಾಗದೆ ನಿರ್ದೋಶಿಯಾಗೋ ಸಂತೋಷಿಯಾಗೋ।
ಕಾಶಿ ವಾರಣಾಸಿ ಕಂಚಿ ಕಾಳಹಸ್ತಿ ರಾಮೇಶ್ವರ ಏಸು ದೇಶ
ತಿರುಗಿದರೆ ಬಾಹೊದೇನೋ ಅಲ್ಲಿಗ್ ಹೋದೇನೋ।
ದೋಷನಾಶ ಕೃಷ್ಣವೇಣಿ ಗಂಗೆ ಗೋದಾವರಿ ಭವನಾಶ
ತುಂಗಭದ್ರೆ ಯಮುನೆ ವಾಸದಲ್ಲಿ ಉಪವಾಸದಲ್ಲಿ।
ಮೀಸಲಾಗಿ ಮಿಂದು ಜಪತಪ ಹೋಮ ನೇಮಗಳ
ಏಸು ಬಾರಿ ಮಾಡಿದರೂ ಫಲವೇನು। ಈ ಛಲವೇನು।।

ಅಂದಿಗೋ ಇಂದಿಗೋ ಒಮ್ಮೆ ಸಿರಿ ಕಮಲೇಶನನ್ನು
ಒಂದು ಬಾರಿಯಾದರೂ ನೆನೆಯಲಿಲ್ಲ ಮನ ದಣಿಯಲಿಲ್ಲ।
ಬಂದು ಬಂದು ಭ್ರಮೆಗೊಂಡು ಮಾಯಾಮೋಹಕ್ಕೆ ಸಿಕ್ಕಿ
ನೊಂದು ಬೆಂದು ಒಂದರಿಂದ ಉಳಿಯಲಿಲ್ಲ ಬಂಧ ಕಳೆಯಲಿಲ್ಲ।
ಸಂದೇಹವ ಮಾಡದಿರು ಅರಿವು ಎಂಬ ದೀಪವಿಟ್ಟು
ಇಂದು ಕಂಡ್ಯಾ ದೇಹದಲ್ಲಿ ಪಿಂಡಾಂಡ ಹಾಗೆ ಬ್ರಹ್ಮಾಂಡ।
ಇಂದು ಹರಿಯ ಧ್ಯಾನವನ್ನು ಮಾಡೀ ವಿವೇಕದಿ
ಮುಕುಂದನಿಂದ ಮುಕ್ತಿ ಬೇಡು ಕಂಡ್ಯ। ನೀ ನೋಡು ಕಂಡ್ಯ।।

ನೂರು ಬಾರಿ ಶರಣು ಮಾಡಿ ನೀರ ಮುಳುಗಲ್ಯಾಕೆ
ಪರನಾರಿಯರ ನೋಟಕೆ ಗುರಿಯ ಮಾಡಿದಿ ಮನ ಸೆರೆಯ ಮಾಡಿದಿ।
ಸುರೆಯೊಳು ಸುರೆ ತುಂಬಿ ಮೇಲೇ ಹೂವಿನ ಹಾರ
ನೀರು ಗಂಧ ಅಕ್ಷತೆಯ ಧರಿಸಿದಂತೆ ನೀ ಮೆರೆಸಿದಂತೆ।
ಗಾರುಡಿಯ ಮಾತ ಬಿಟ್ಟು ನಾದಬ್ರಹ್ಮನ ಪಿಡಿದು
ಸಾರಿ ಸೂರಿ ಮುಕ್ತಿಯನ್ನು ಶಮನದಿಂದ ಮತ್ತೆ ಸುಮನದಿಂದ।
ನಾರಾಯಣ ಅಚ್ಯುತ ಅನಂತಾದಿ ಕೇಶವನ ಸಾರಾಮೃತವನುಂಡು
ಸುಖಿಸೋ ಲಂಡ ಜೀವವೇ ಎಲೋ ಭಂಡ ಜೀವವೇ।।

– ಕನಕದಾಸ

ನಾದನಾಮಕ್ರಿಯೆ – ಅಟತಾಳ

ಸಂಸಾರವೆಂಬಂಥ ಸೌಭಾಗ್ಯವಿರಲಿ
ಕಂಸಾರಿ ನೆನೆವೆಂಬ ಸೌಭಾಗ್ಯವಿರಲಿ॥

ತಂದೆ ನೀನೇ ಕೃಷ್ಣ ತಾಯಿ ಇಂದಿರೆದೇವಿ
ಪೊಂದಿದ ಅಣ್ಣನು ವನಜಸಂಭವನು
ಇಂದುಮುಖಿ ಸರಸ್ವತಿದೇವಿಯೇ ಅತ್ತಿಗೆಯು
ಎಂದೆಂದಿಗೂ ವಾಯುದೇವರೆ ಗುರುವು॥

ಭಾರತೀದೇವಿಯೇ ಗುರುಪತ್ನಿ ಎನಗೆ
ಗರುಡ ಶೇಷಾದಿಗಳೆ ಗುರುಪುತ್ರರು
ಹರಿದಾಸರೆಂಬುವರು ಇಷ್ಟಬಾಂಧವರೆನಗೆ
ಹರಿಭಜನೆ ನಡೆಯುತಿಹ ಸ್ಥಳವೆ ಮಂದಿರವು॥

ಸರ್ವಾಭಿಮಾನವನು ತ್ಯಜಿಸುವುದೇ ಸುಜ್ಞಾನ
ಹರಿಯ ನಾಮವೇ ಇನ್ನು ಅಮೃತಪಾನ
ವರಪುರಂದರ ವಿಟ್ಠಲ ನಿನ್ನ ಪಾದಧ್ಯಾನ
ಕರುಣಿಸಿ ಅನವರತ ಕರಪಿಡಿದು ಕಾಯೋ॥

– ಪುರಂದರದಾಸ

ಭೀಮಪಲಾಸೀ – ತ್ರಿತಾಲ

ಅಂಬಿಗ ನಾ ನಿನ್ನ ನಂಬಿದೆ
ಜಗದಂಬಾರಮಣನ ನಂಬಿದೆ॥

ತುಂಬಿದ ಹರಿಗೋಲಂಬಿಗ
ಅದಕ್ಕೊಂಬತ್ತು ಛಿದ್ರವು ಅಂಬಿಗ।
ಸಂಭ್ರಮದಿ ನೋಡಂಬಿಗ
ಅದರಿಂಬು ನೋಡಿ ನಡೆಸಂಬಿಗ॥

ಹೊಳೆಯ ಭರವ ನೋಡಂಬಿಗ
ಅದಕೆ ಸೆಳೆವು ಘನವಯ್ಯ ಅಂಬಿಗ।
ಸುಳಿಯೊಳು ಮುಳುಗಿದೆ ಅಂಬಿಗ
ಎನ್ನ ಸೆಳೆದುಕೊಂಡೊಯ್ಯೊ ಅಂಬಿಗ॥

ಆರು ತೆರೆಯ ನೋಡಂಬಿಗ
ಅದು ಮೀರಿ ಬರುತಿದೆ ನೋಡಂಬಿಗ।
ಯಾರಿಂದಲಾಗದು ಅಂಬಿಗ
ಅದ ನಿವಾರಿಸಿ ದಾಟಿಸೊ ಅಂಬಿಗ॥

ಸತ್ಯವೆಂಬುದೆ ಹುಟ್ಟಂಬಿಗ
ಸದಾ ಭಕ್ತಿಯೆಂಬುದೆ ಪಥವಂಬಿಗ।
ನಿತ್ಯಮೂರುತಿ ನಮ್ಮ ಪುರಂದರ ವಿಟ್ಠಲನ
ಮುಕ್ತಿಮಂಟಪಕೊಯ್ಯೊ ಅಂಬಿಗ॥

– ಪುರಂದರದಾಸ

ಗುರ್ಜರಿ ತೋಡಿ – ತ್ರಿತಾಲ

ಕ್ಷಣಕ್ಷಣಕೂ ಈ ಮನವು ಚಲಿಸುತಿರೆ
ಧ್ಯಾನಗೈಯಲೆಂತು। ಹೇ ಪ್ರಭು।
ಧ್ಯಾನಾಮೃತದ ಪಾನವ ಮಾಡದೆ
ಮನವು ನಿಲುವುದೆಂತು॥

ಕೊಳೆ ಕಸ ತುಂಬಿಹ ಹೃದಯಕೆ, ಹೇ ಪ್ರಭು
ನಿನ್ನ ಕರೆಯಲೆಂತು।
ನೀ ಬಾರದೆ ಈ ಹೃದಯಮಂದಿರವು
ಶುಚಿಯಾಗುವುದೆಂತು॥

ಹೇ ಕರುಣಾಮಯ ದಯಗೈದೆನ್ನಯ
ಹೃದಯಕುಟೀರಕೆ ಬಾ।
ಅನಂತ ಕಾಲದ ಕತ್ತಲ ಕಳೆದು
ಜ್ವಲಂತ ಜ್ಯೋತಿಯ ತಾ॥

– ಸ್ವಾಮಿ ಪುರುಷೋತ್ತಮಾನಂದ

ದರ್ಬಾರಿ ಕಾನಡಾ – ಏಕತಾಲ

ರಾಮಕೃಷ್ಣನಂದನ ಜಯ ರಾಮಕೃಷ್ಣಾನಂದನೆ।
ಗುರುಭಕ್ತಿಯ ಸ್ಫೂರ್ತಿಸತ್ತ್ವ ನಿನ್ನ ಪದಕೆ ವಂದನೆ॥

ಗುರುವಿನಡಿಯೆ ಸಕಲ ತೀರ್ಥಕ್ಷೇತ್ರವೆಂದು ನಂಬಿದೆ।
ಸಕಲ ತೀರ್ಥಸಾರವನ್ನು ಕುಳಿತಲ್ಲಿಯೆ ಹರಿಸಿದೆ॥

ಗುರುಭಕ್ತಿಯೆ ಉಸಿರಾಡಿತು ನಿನ್ನಿರವಿನ ನೆಪದಲಿ।
ನೀನೆ ಕರಗಿ ಕಂಪನಿತ್ತೆ ಶ್ರೀಗುರುವಿನ ಪದದಲಿ॥

ನಿನ್ನ ತ್ಯಾಗ-ನಿಷ್ಠೆಯಿದೋ ಭಕುತರೆದೆಯ ತುಂಬಿದೆ।
ನಿನ್ನ ಬೆಳಕು ಸುತ್ತ ಹರಡಿ ಸದಾ ಸ್ಫೂರ್ತಿ ನೀಡಿದೆ॥

– ಎಚ್. ಎನ್. ಮುರಳೀಧರ

ಅಠಾಣಾ – ತೇವರಾ

ಕ್ಷಾಂತಿ ಸಹನೆಯ ಶಾಂತ ಶೀತಲ-
ಕಾಂತಿಯಿಂದಲಿ ಬೆಳಗುವಾ ಶಶಿ।
ಅಂತರಂಗದ ಭಕುತಿ ಭೂಷಣ
ಸಂತರಾಜ್ಯದ ಚಕ್ರವರ್ತಿ॥

ಗುರುವೆ ನಿನ್ನಯ ಪರಮದೈವವು
ಗುರುವಿನಾಣತಿ ಹಿರಿಯ ವೇದವು।
ಗುರುವಿಗಾಳ್ತನ ಚರಮಸಾಧನ
ಗುರುವಿಗೋಸುಗ ಧರಿತ ಪ್ರಾಣವು॥

ಕಾಮಕಾಂಚನ-ತ್ಯಾಗಿ ತಾಪಸಿ
ಪ್ರೇಮಪೂರಿತ ಕರ್ಮಯೋಗಿ।
ರಾಮಕೃಷ್ಣರ ದಿವ್ಯದಾಸ
ರಾಮಕೃಷ್ಣಾನಂದ ನಮಿಪೆವು॥

– ಸ್ವಾಮಿ ಶಾಸ್ತ್ರಾನಂದ

ಭೂಪಾಲೀ – ತೇವರಾ

ರಾಮಕೃಷ್ಣಾನಂದ ಸ್ವಾಮಿಯೆ
ನಮ್ಮ ನಮನವು ನಿನಗೆ ಯತಿಯೆ॥

ವೇದಶಾಸ್ತ್ರದ ಜ್ಞಾನನಿಧಿಯೆ
ಭೇದದರ್ಶನರಹಿತ ಸಂತನೆ
ವಾದದೂರನೆ ಶಾಂತಿಪ್ರಿಯನೆ
ನಮ್ಮ ನಮನವು ನಿನಗೆ ಯತಿಯೆ॥

ಹರಿಯ ಪಾದದಿ ಪರಮಭಕುತಿಯು
ಗುರುವಿನಡಿಯಲಿ ಅದಕು ಮಿಗಿಲು
ಹರಸುತೆಮ್ಮನು ಶಮನಗೊಳಿಸು
ನಮ್ಮ ನಮನವು ನಿನಗೆ ಯತಿಯೆ॥

ತ್ಯಾಗ ಯೋಗದ ಯುಗಳಮೂರ್ತಿಯೆ
ಭಾಗ್ಯವೆಮ್ಮದು ನಿನ್ನ ಕರುಣೆಯೆ
ಹೋಗಲಾಡಿಸು ಭವದ ಬವಣೆ
ನಮ್ಮ ನಮನವು ನಿನಗೆ ಯತಿಯೆ॥

– ಸ್ವಾಮಿ ಹರ್ಷಾನಂದ

ರಾಗಮಾಲಿಕೆ – ಝಪತಾಲ

ಪೂರ್ವೀ–

ದಯಾಸಾಗರ ನೀನು ದಾತಾರನೈ ನೀನು
ನಾನೇಕೆ ದೀನನಾಗುಳಿಯಲಿನ್ನು॥

ಹೇ ದೇವ ನೀನೆನಗೆ ನೀಡಿರುವೆ ಕಣ್ಣೆರಡ
ಆದರವು ಕಾಣಲಾರವು ನಿನ್ನನು।
ನೀನಾದರೂ ನಿನ್ನ ಸಾಸಿರದ ನಯನದಿಂ
ನನ್ನ ದುರವಸ್ಥೆಯನು ಕಾಣೆಯೇನು॥

ಬೈರಾಗೀ–

ನನಗೊಂದು ಹೃದಯವಿದೆ ಅದ ಕೊಟ್ಟವನು ನೀನೇ
ಆದರದು ಬತ್ತಿರುವ ಕೆರೆಯಂತಿದೆ।
ನಿನ್ನ ಹೃದಯಸರೋವರದ ಸುಧೆಯನೊಂದಿಷ್ಟು
ನನ್ನೆದೆಗೆ ನೀನೇ ಹರಿಸಬಾರದೆ॥

ಭೈರವ–

ಆನಂದಘನ ನೀನು ನಿನ್ನ ಪುತ್ರನು ನಾನು
ಬರಲಿ ಆ ಆನಂದ ಎನ್ನ ಎದೆಗೂ।
ನೀನು ನನ್ನವನಯ್ಯ ನಾನಂತು ನಿನ್ನವನೇ
ಇನ್ನೇಕೆ ಚಿಂತಿಸಲಿ ಯಾವ ಬಗೆಗೂ॥

– ಸ್ವಾಮಿ ಪುರುಷೋತ್ತಮಾನಂದ

ಮಿಶ್ರ ಪಹಾಡಿ – ತ್ರಿತಾಲ

ಈ ಜಗವ ನಂಬಿ ಸುಖವೇ ಇಲ್ಲ।
ಪಾರು ಮಾಡೋ ದೇವಾ॥

ಒಂದು ಸುಖಕೆ ನೂರು ದುಗುಡ
ಇದುವೆ ಜಗದ ವೈಭವ॥

ಜನರ ದೂರಲೇಕೆ ನಾವು
ಅವರೆ ಕಷ್ಟದಲ್ಲಿ ಇಹರು।
ಅವರ ಚಿಂತೆ ಅವರಿಗೆ ಇಹುದು
ನಮ್ಮ ಚಿಂತೆ ಯಾರಿಗೆ ಮುದ್ದು॥

ಮನುಜ ತನ್ನ ಮಿತಿಯನು ಅರಿಯ
ಕಟ್ಟುತಿಹನು ಗಗನದಿ ಮನೆಯ।
ಸುಖದಿ ಬಾಳ್ವೆನೆಂದು ದುಡಿದ
ಬಾಳು ಮುಗಿವ ಮೊದಲೇ ಮಡಿದ॥

ಎಷ್ಟು ಸಾವು ಏನು ನೋವು
ಇದಕೆ ಆದಿ ಅಂತ್ಯವೆ ಇಲ್ಲ।
ಆಸೆಪಟ್ಟು ಪಡೆದುದನೆಲ್ಲ
ಇಲ್ಲೇ ಬಿಟ್ಟು ನಡೆಯುವರೆಲ್ಲ॥

ಹೇ ದೇವ ನೀನೊಬ್ಬನೇ ಆತ್ಮೀಯ ಬಂಧು ಎನಗೆ।
ಪ್ರೀತಿ ನೀಡುವವರಲ್ಲಿ ನಿನ್ನನ್ನು ಬಿಟ್ಟರಿಲ್ಲ॥

– ಸ್ವಾಮಿ ಪುರುಷೋತ್ತಮಾನಂದ

ಬಸಂತ – ತ್ರಿತಾಲ

ಮುಳುಗು ಮುಳುಗು ನೀ ಮುಳುಗೆಲೆ ಮನವೇ
ದೇವನ ರೂಪದ ಕಡಲಿನಲಿ
ತಲಾತಲವ ಪಾತಾಲವ ಶೋಧಿಸು
ಪ್ರೇಮರತುನವನು ಪಡೆಯುವೆ ನೀ॥

ಮುಳುಗು ಮುಳುಗು ನೀ ಮುಳುಗಲು ಕಾಣುವೆ
ಬೃಂದಾವನವಿದೆ ನಿನ್ನೊಳಗೆ।
ಬೆಳಗು ಬೆಳಗು ನೀ ಜ್ಞಾನದ ಜ್ಯೋತಿಯ
ಎಡೆಬಿಡದುರಿಯಲಿ ಎದೆಯೊಳಗೆ॥

ನೆಲದಲಿ ದೋಣಿಯು ಕುಣಿಕುಣಿದೋಡುವ
ತೆರದಲಿ ಮಾಡುವನಾರಿಹನು।
ಸದ್ಗುರು ಮಹಿಮೆಯಿದೆನುವ ಕುಬೀರನು
ಧ್ಯಾನಿಸವನ ಪದಕಮಲವನು॥

– (ಅನು.) ಎಚ್. ಎನ್. ಮುರಳೀಧರ

ಭೈರವ – ಝಪತಾಲ

ಆದಿಯಲಿ ನಮಿಸುವೆವು ಬೆಳಗುತಿಹ ಜ್ಯೋತಿಯನು
ಎಲ್ಲದಕು ಮೂಲವದು ಆಧಾರ-ಅಂತ್ಯವದು।
ಎಂದೆಂದು ಕುಂದದಿಹ ಆನಂದ-ತೇಜವದು
ಸುಂದರವು ಶುಭಕರವು ಪರಸತ್ಯ-ರೂಪವದು॥

ತಾಳುವುದು ಲೀಲೆಯಲಿ ಪರಿಪರಿಯ ರೂಪಗಳ
ತೋರುವುದು ಆ ಬೆಳಕೆ ನರನಾಗಿ ಹರಿಯಾಗಿ।
ಪರಮಾತ್ಮ ಜೀವಾತ್ಮ ಎಂಬೆರಡು ಪರಿಯಾಗಿ।
ಹರಿಯ ಅಂಶವೆ ನರನು, ಹರಿಯುಳಿದು ನರನೆಲ್ಲಿ?॥

ಅರಿಯದಲೆ ಲೀಲೆಯಿದ ತೊಳಲುವರು ಹಲಜನರು
ನರಳುತ್ತ ಕತ್ತಲಲಿ ಕೆಳಕೆಳಗೆ ಇಳಿಯುವರು।
ಅರಿತಂಥ ಸಿರಿಜನರು ನರವರರು ಕೆಲರಿಹರು
ಹರಡಿಹುದು ಅವರಿಂದ ಜಗಕೆಲ್ಲ ಆ ಬೆಳಕು॥

– ಸ್ವಾಮಿ ಶಾಸ್ತ್ರಾನಂದ

ನೆರವಾಗು ನೊಂದವಗೆ

ಸಂಕಟಕೆ ಕಾರಣವು
ಅವರವರ ಕರ್ಮ;
ಪರಿಹರಿಸಲೆತ್ನಿಸೈ
ಅದೆ ನಿನ್ನ ಧರ್ಮ!

ತಪ್ಪುಗೈವುದು ನರನ
ಸಹಜ ಸ್ವಭಾವ;
ಅದರ ಫಲವುಂಬಾಗ
ತಾಳನವ ನೋವ!

ನೋವಿಹುದು ತನುವಿನಲಿ
ನೋವು ಮನದಲ್ಲಿ;
ನೋವ ತಿನದವನಿಲ್ಲ
ಈ ಧರಣಿಯಲ್ಲಿ!

ಸಾವಾದರೊಂದು ದಿನ
ಮುಗಿದೆ ಹೋಗುವುದು;
ನೋವು ನರನನು ನಿತ್ಯ
ನರಳಾಡಿಸುವುದು!

ನೆರವಾಗು ನೊಂದವಗೆ,
ಆಗ ನೋಡವನ ನಗೆ,
ಆ ನಗುವಿನಾನಂದ
ಬಹುಮಾನ ನಿನಗೆ!

– ಸ್ವಾಮಿ ಪುರುಷೋತ್ತಮಾನಂದ

ಇನ್ನು ದುಃಖವಿಲ್ಲ !

ಪ್ರಿಯ ಸಖನೆ ನಿನಗೆ
ಗುಟ್ಟೊಂದ ಪೇಳ್ವೆ ಕಿವಿ-
ಗೊಟ್ಟು ಕೇಳು ಅದನು।

ಜನ ಸತ್ಯತಿಳಿದರೂ
ತಪ್ಪಿ ನಡೆವರಲ ಚೋದ್ಯವಲ್ಲವೇನು ?

ತನುವು ಸ್ಥಿರವಲ್ಲ
ಮನವು ಸ್ಥಿರವಿಲ್ಲ ಧನವು ಅತಿ ಚಂಚಲ।

ಇಂಥ ಸ್ಥಿತಿಯಲೂ ಎಂಥ ಚತುರನೂ
ಬೇಸ್ತು ಬೀಳ್ವನವಲ್ಲ
ಜನರ ಜೀವನವ
ತೆರದ ಹೃದಯದಿಂ ನೋಡಿ ಪರಿಕಿಸೋಣ।

ಎಷ್ಟು ದುಡಿದರೂ ಏನ ಪಡೆದರೂ
ಶಾಂತಿ ಸೊನ್ನೆ ಕಾಣ
ಜಗದ ರೀತಿಯಲಿ
ನಡೆದ ಮನುಜರಿಗೆ ಸುಖವು ದಕ್ಕಲಿಲ್ಲ।

ಜಗನ್ನಾಥನನು
ನಂಬಿ ನೆನೆದವಗೆ
ಇನ್ನು ದುಃಖವಿಲ್ಲ!

– ಸ್ವಾಮಿ ಪುರುಷೋತ್ತಮಾನಂದ

ಕಬೀರ ಬೀರಿದ ಬೆಳಕು

ಗುರುವಿಗೆ ವಂದನೆ ಮೊದಲು
ನಂತರ ಗಣಪತಿಗೆ।
ಬಳಿಕ ದೇವಿ ಶ್ರೀಶಾರದೆಗೆ
ಇವರ ಕೃಪೆಯು ನಮಗೆ – ಕಬೀರಾ॥

ಸದ್ಗುರು ಮಹಿಮೆ ಅನಂತ
ಸದ್ಗುರು ಕೃಪೆಯೂ ಅನಂತ।
ಅವನ ನಯನಗಳು ಅನಂತವೈ
ತೋರಿದನವನು ಅನಂತ – ಕಬೀರಾ॥

ತೀರ್ಥಯಾತ್ರೆಗೆ ಫಲ ಒಂದು
ಸಾಧುಸಂಗಕೆ ನಾಲ್ಕು।
ಸದ್ಗುರುಸಂಗಕೆ ಅನೇಕ ಫಲವು
ಇದುವೇ ಸಂತರ ಮತವು – ಕಬೀರಾ॥

ಸದ್ಗುರು ಬೋಧಿಸೆ ಶಿಷ್ಯನು
ಸದ್ಗುರುವೆ ಆದನು।
ಇದ್ದಿಲು ಬೆಂಕಿಯ ಸ್ಪರ್ಶದಿಂದ
ಬೆಂಕಿಯೆ ಆದಂತೆ – ಕಬೀರಾ॥

ಉತ್ತಮ ಜನ್ಮ ದೊರೆಯುವುದು
ಇದುವೇ ಹರಿಕೃಪೆಯೈ।
ಜನ್ಮವಿಲ್ಲದಂತಾಗುವುದು
ಇದುವೇ ಗುರುಕೃಪೆಯೈ – ಕಬೀರಾ॥

ಪ್ರೇಮವೆ ಇಲ್ಲದ ಮನುಜ
ಪ್ರಾಣಿಗೆ ಸಮ ತಿಳಿಯೋ।
ಗಾಳಿಯಾಡಿದರು ಪ್ರಾಣವಿರದ
ಕಮ್ಮಾರನ ತಿದಿಯೋ – ಕಬೀರಾ॥

ನಾನು ಇದ್ದಾಗ ದೇವನಿಲ್ಲ
ಈಗ ದೇವನಿಹ ನಾನಿಲ್ಲ।
ಕತ್ತಲು ಕರಗಿಯೆ ಹೋಯಿತಲ್ಲ
ಬೆಳಕ ಕಂಡೆನಲ್ಲ — ಕಬೀರಾ॥

ನನ್ನದೆಂಬುದೇನಿಲ್ಲ
ಇರುವುದು ನಿನ್ನದೆ ಎಲ್ಲ।
ನಿನ್ನದೆ ನಿನಗೆ ಅರ್ಪಿಸುತಲಿ
ನೆಮ್ಮದಿಯಿಂದಿರುವೆ — ಕಬೀರಾ॥

ಚಂದ್ರನ ತಂಪು ತಂಪಲ್ಲ
ಹಿಮದ ತಂಪೂ ತಂಪಲ್ಲ।
ಸಾಧುಸಂತರ ದಿವ್ಯ ಸಂಗ
ತಂಪಿನಲೂ ತಂಪು — ಕಬೀರಾ॥

ಸಂತರ ಸೇವೆಯು ನಡೆಯದ ಮನೆಯು
ಅವಲಕ್ಷಣಗಳ ತಾಣ।
ಆ ಮನೆ ಮಸಣವು ಎಂದು ತಿಳಿದು
ಭೂತಗಳಾಡುವುವು — ಕಬೀರಾ॥

ಸ್ವತಃ ರಾಮ ಕರೆದಾಗಲೂ
ಕಬೀರಗೇನೋ ದುಗುಡ।
ಸಾಧುಸಂಗದಲಿ ದೊರೆವಾನಂದ
ವೈಕುಂಠದಲೂ ಇಲ್ಲ — ಕಬೀರಾ॥

ಭೂಮಿ ಸಹಿಸುವುದು ಅಗೆಯುವುದ
ಕಡಿಯುವುದನು ಮರವು।
ಸಾಧು ಸಹಿಸುವನು ಕಠಿಣ ವಚನವ
ಸಹಿಸರು ಇನ್ನಾರು — ಕಬೀರಾ॥

ದೇವನ ದಾರಿಯು ಸುಗಮ
ನಿನ್ನ ನಡೆಯೆ ವಕ್ರ
ಕುಣಿಯಲು ಬಾರದ ನರ್ತಕನು
ನೆಲವೇ ಡೊಂಕೆಂದ — ಕಬೀರಾ॥

ದೇಹಧಾರಿ ಯಾರೇ ಇರಲಿ
ದಂಡವ ತೆರಬೇಕು।
ಅಜ್ಞಾನಿ ತೆರುವನು ರೋದಿಸುತ
ಜ್ಞಾನಿಯು ನಗುನಗುತ — ಕಬೀರಾ॥

ಜಗದೀಶಗೆ ಶರಣಾದವನು
ಅವ ಹೆದರುವನೇನು?
ಆನೆಯ ಮೇಲೆ ಕುಳಿತಿರುವವಗೆ
ಶ್ವಾನವು ಬೊಗಳಿದರೇನು? — ಕಬೀರಾ॥

ನಿಂದಕರಿಗೊಂದು ಕುಟಿಯನು ಕಟ್ಟಿ
ಮನೆ ಮುಂದಿರಗೊಡಿರಿ।
ನೀರು-ಸಾಬೂನುಗಳಿಲ್ಲದೆಯೇ
ನಿರ್ಮಲಗೊಳಿಸುವರು — ಕಬೀರಾ॥

ಗೋಧನ ಗಜಧನ ರತ್ನಧನ
ಏನದ್ಭುತ ಜನಧನ।
ಸಂತೋಷಧನವು ದೊರೆತಾಗ
ಎಲ್ಲವು ಧೂಳಿ ಸಮಾನ — ಕಬೀರಾ॥

ರಾತ್ರಿ ಕಳೆಯಿತು ನಿದ್ರೆಯಲಿ
ದಿನ ಕಳೆಯಿತು ಊಟದಲಿ।
ರತ್ನದಂಥ ಈ ನರಜನ್ಮ
ಮೂರ್ಕಾಸಿಗೆ ಹೋಯ್ತು — ಕಬೀರಾ॥

ಅಂತಹ ಧನವನೆ ಗಳಿಸಲುಬೇಕು
ಪರಗತಿಗು ಆಗಬೇಕು।
ಹೊರಡುವ ದಿನ ಅದ ಒಯ್ಯುವಾಗ
ಕಾಣರು ಅದನ್ಯಾರು — ಕಬೀರಾ॥

ಎತ್ತಣಿಂದ ನೀ ಬಂದೆಯೋ
ಹೋಗುವುದು ಎತ್ತಲೋ।
ಇತ್ತಿಂದತ್ತ ಅತ್ತಿಂದಿತ್ತ
ಮೂಲ ಮರೆತೆಯಲ್ಲೊ — ಕಬೀರಾ॥

ಬೀಜದೊಳಗೆ ಇದೆ ಎಣ್ಣೆ
ಹಾಲಿನೊಳಗೆ ಇದೆ ಬೆಣ್ಣೆ।
ನಿನ್ನಯ ದೇವ ನಿನ್ನೊಳಗಿಹನೈ
ಕೈಲಾದರೆ ನೋಡೈ — ಕಬೀರಾ॥

ಮಾಯೆಯೊಂದು ಉರಿಯುವ ದೀಪ
ಮನುಜನೇ ಪತಂಗ।
ಪತಂಗ ದೀಪದಿ ಬೀಳುವ ತೆರದಿ
ಮನುಜ ಮಾಯೆಯೊಳಗೆ — ಕಬೀರಾ॥

ಜಪಮಾಲೆಯು ತಿರುಗುತಲೇ
ಉರುಳಿತು ಯುಗವೊಂದು।
ಚಂಚಲ ಮನದ ತಿರುಗಾಟ
ನಿಲ್ಲಲಿಲ್ಲವಿನ್ನೂ — ಕಬೀರಾ॥

ಮೈತೊಳೆದರೆ ಏನಾಯಿತು
ಮನದ ಕೊಳೆಯು ಹೋದೀತೆ।
ಮನವನು ಮಥಿಸಿ ವಿವೇಚನೆ ನಡೆಸೆ
ಮನ ನಿರ್ಮಲವಹುದು — ಕಬೀರಾ॥

ಯತಿಗಳ ಜಾತಿಯ ಕೇಳಬೇಡ
ಅವರ ಜ್ಞಾನವನು ನೋಡು।
ಖಡ್ಗದ ಬೆಲೆಯನು ಮಾತ್ರ ಕಟ್ಟು
ಒರೆಯನು ಬದಿಗಿಟ್ಟು — ಕಬೀರಾ॥

ಕೆಡುಕರನು ನಾ ಹುಡುಕುತ ಹೊರಟೆ
ಕೆಡುಕರಾರು ಸಿಗಲಿಲ್ಲ।
ನನ್ನಯ ಮನವನು ನಾನೇ ನೋಡೆ
ನನಗಿಂತ ಕೆಡುಕರಿಲ್ಲ — ಕಬೀರಾ॥

ಕುಟಿಲವಚನ ಬಲು ಕೆಟ್ಟದು
ಮನ ವಿಷಮಯವಹುದು।
ಸಾಧುವಚನ ಪರಿಶುದ್ಧ ಮಧುರ
ಸುಧೆಯನೆ ಸುರಿಸುವುದು — ಕಬೀರಾ॥

ಆಡುವ ನುಡಿ ಇಂತಿರಬೇಕು
ಶಾಂತಿ ನೆಲಸಬೇಕು।
ಇತರರ ಶಾಂತಿಗೆ ಶ್ರಮಿಸುತ ನಾವೇ
ಶಾಂತಿಯ ಪಡೆಯುವೆವು — ಕಬೀರಾ॥

ಶೀಲವಂತನೇ ಶ್ರೇಷ್ಠನು
ಸಕಲ ರತ್ನಗಳ ಗಣಿಯು।
ಮೂಲೋಕದ ಸಿರಿಸಂಪದವೆಲ್ಲ
ಶೀಲದೊಳಗೆ ಇಹುದು — ಕಬೀರಾ॥

ಮಾತಿನ ಗದ್ದಲ ನಿಲ್ಲಿಸಿ
ಸ್ಮರಣೆಯ ಸುಖದಲಿ ಮುಳುಗೋ
ಹೊರಗಿನ ಪರದೆಯ ಮುಚ್ಚಿ ನೀನು
ಒಳಗಣ ಪರದೆಯ ತೆರೆಯೋ — ಕಬೀರಾ॥

ಭಜಿಸುವುದಾದರೆ ಈಗಲೆ ಭಜಿಸು
ಇನ್ನೆಂದಿಗೆ ಭಜಿಸುವುದು।
ಹಚ್ಚ ಹಸಿರು ವೃಕ್ಷವು ಕೂಡ
ಕಟ್ಟಿಗೆಯಾಗುವುದು — ಕಬೀರಾ॥

ಮಲಗಿದ್ದರೆ ಏನಹುದು
ಎದ್ದು ಜಪವ ಮಾಡು।
ಮಲಗಲೊಂದು ದಿನ ಬರಲಿಹುದು
ಕಾಲುದ್ದಕೆ ಚಾಚಿ — ಕಬೀರಾ॥

ಕರದಲಿ ಮಾಲೆಯು ತಿರುಗುವುದು
ಬಾಯಲಿ ನಾಲಿಗೆಯು।
ದಶದಿಶೆಯಲಿ ಮನ ತಿರುಗುವುದು
ಇದೇ ಇವರ ಜಪವು — ಕಬೀರಾ॥

ರಾಜ ರಾಯ ಸಿರಿವಂತನಿಗಿಂತ
ಸ್ಮರಿಸುವವನೆ ದೊಡ್ಡವ
ಯಾವ ಕಾಮನೆಯು ಇಲ್ಲದ ಅವನು
ದೊಡ್ಡವರಲು ದೊಡ್ಡವ — ಕಬೀರಾ॥

ಹಿಡಿದು ತಿನ್ನುವನು ಯಮರಾಯ
ಅವನಾರನು ಬಿಡನು।
ನಾಮದ ಪ್ರೇಮಿಯ ಕಂಡೊಡನೆ
ಗಡಗಡ ನಡುಗುವನು — ಕಬೀರಾ॥

(ಅನು) – ಸ್ವಾಮಿ ಪುರುಷೋತ್ತಮಾನಂದ

ತೊಟ್ಟಿಲ ಬಾಲನಿಗೆ ತತ್ತ್ವಬೋಧನೆ

ಧರಣಿಪನಾದ ಧ್ವಜಾಕ್ಷನೆಂಬವನ
ತರುಣಿ ಮದಾಲಸೆ ತನ್ನ ಬಾಲಕನ।
ಇರಿಸಿ ತೊಟ್ಟಿಲೊಳು ವಿಕ್ರಾಂತನೆಂಬವನ
ಹರುಷದಿ ತೂಗಿ ಪಾಡಿದಳು ಸೋಬಾನ।। ಜೋ ಜೋ।।

ನಿತ್ಯಶುದ್ಧನು ನೀನು ಸುಮ್ಮನೇಕಳುವೆ
ಸತ್ಯವಲ್ಲವು ನೋಡು ಸಂಸಾರ ಮಗುವೆ।
ಮಿಥ್ಯವೆಂದರಿಯದೆ ಬರಿದೆ ದುಃಖಿಸುವೆ
ಮೃತ್ಯು ನುಂಗುವನು ಈ ಲೋಕವ ಮಗುವೇ।। ಜೋ ಜೋ।।

ತಂದೆ ತಾಯಿಗಳೆಷ್ಟು ಸಂದುದೀವರೆಗೆ
ಬಂದ ಜನ್ಮದ ಲೆಕ್ಕ ಉಂಟೇನೋ ನಿನಗೆ।
ಹಿಂದು ಮುಂದಿನ ಜನ್ಮವರಿಯದೆ ಹೀಗೆ
ಕಂದ ನೀನಳುವೆ ಸುಮ್ಮನೆ ಮಾಯಾಭ್ರಮೆಗೆ।। ಜೋ ಜೋ।।

ಹೊಲಸು ನಾರುವ ಹೇಸಿಗೆಯ ದೇಹ ಮೂಲ
ಮಲ-ಮೂತ್ರಪಿಂಡ ತಾಗಿದ ಮೊಲೆ ಹಾಲ।
ಛಲದಿಂದ ಉಣಲು ನಿರ್ಮಲವೇನೋ ಬಾಲ
ಫಲವ ಗ್ರಹಿಸಿ ನೋಡಿದರೆ ಮಾಯಾಜಾಲ।। ಜೋ ಜೋ।।

ಮರಣಕಾಲದಿ ಸತಿಸುತರನ್ನು ನೆನೆದು
ಹರಣ ನೀಗಲು ಯಮನಾಳುಗಳೊಯ್ದು।
ನರಕಕ್ಕಿಕ್ಕಲು ಶಿಕ್ಷೆ ಅನುಭವಿಸುವುದು
ತರವೇನೋ ತರಳ ಈ ಜೀವನ ಬರಡು।। ಜೋ ಜೋ।।

ಶೇಷಗೆ ಸಹ ಹೇಳಲಸದಳ ಮಾಯ
ಹೇಸಿಗೆ ಸಂಸಾರ ದುಃಖದ ಸ್ಥಿತಿಯ।
ಲೇಶ ನಂಬದಿರು ತೋರಿಸದು ಸದ್ಗತಿಯ
ಆಶಿಸದಿರು ಈ ಸಂಸಾರದ ಗತಿಯ।। ಜೋ ಜೋ।।

ವ್ಯಸನವ ಮನವು ನೀಗಲು ಮಡಿಯಾಗಿ
ಎಸೆವಂಥ ಪಂಚ ಕೋಶಗಳೆಲ್ಲ ಹೋಗಿ।
ಪಸರಿಸಿರುವ ಎಲ್ಲ ಅಜ್ಞಾನ ತೊಲಗಿ
ನಶಿಸದ ಆತ್ಮವ ನೋಡು ನೀ ಯೋಗಿ॥ ಜೋ ಜೋ॥

ಹೊಳಹೊಳ ಹೊಳಪು ತೋರುವುದು ನಿನ್ನಿಂದ
ನಳನಳನಳಿಪ ರಶ್ಮಿಯ ತೇಜದಿಂದ।
ಥಳಥಳಿಸುವುದು ತೋರುವ ಸತ್ಯಾನಂದ
ಬೆಳಕ ಪಡೆದು ಸುಖಿಯಾಗು ನೀ ಕಂದ॥ ಜೋ ಜೋ॥

ಸಂಗ್ರಹ – ಸ್ವಾಮಿ ಪುರುಷೋತ್ತಮಾನಂದ

ಶಂಕರಾಭರಣ – ತ್ರಿತಾಲ

ನಾದವಿಂದು ಕಳಾಧಿ ನಮೋ ನಮ
ವೇದಮಂತ್ರಸ್ವರೂಪ ನಮೋ ನಮ
ಜ್ಞಾನಪಂಡಿತಸ್ವಾಮಿ ನಮೋ ನಮ
ವೇಹು ಕೋಟಿ॥

ನಾಮ ಶಂಭುಕುಮಾರ ನಮೋ ನಮ
ಭೋಗ ಅಂತರಿಪಾಲ ನಮೋ ನಮ
ನಾದಭಂಜಮಯೂರ ನಮೋ ನಮ
ಪರಶೂರರ್॥

ಚೇತದಂಡವಿನೋದ ನಮೋ ನಮ
ಗೀತ ಕಿಂಕಿಣಿಪಾದ ನಮೋ ನಮ
ಧೀರ ಸಂಭ್ರಮವೀರ ನಮೋ ನಮ
ಗಿರಿರಾಜ॥

ದೀಪಮಂಗಳ ಜ್ಯೋತಿ ನಮೋ ನಮ
ತೂಯ ಅಂಬಲ ಲೀಲ ನಮೋ ನಮ
ದೇವ ಕುಂಜರಿಪಾಲ ನಮೋ ನಮ
ಅರುಳ್ ತಾರಾಯ್॥

ಜೋಗಿಯಾ – ತೇವರಾ

ಬೋಧವೊಂದೇ ಬ್ರಹ್ಮನಾದವೊಂದೇ
ಸಾಧನ ಮಾಡುವ ಹಾದಿ ಒಂದೇ
ಆದಿ ಪಥ ಒಂದೇ।।

ಬಿಂದು ಒಂದೇ ನಿಜಾನಂದ ಒಂದೇ
ತಂದೆ ಸದ್ಗುರು ಗೋವಿಂದ ಒಂದೇ
ಅಂದಿಗಿಂದಿಗೊಂದೇ।।

ದೋಷ ಒಂದೇ ನಿರ್ದೋಷ ಒಂದೇ
ಶಿಶುನಾಳಾಧೀಶನ ಭಾಷೆ ಒಂದೇ
ಭವನಾಶ ಒಂದೇ।।

– ಶಿಶುನಾಳ ಷರೀಫ್

ಭೈರವ – ತ್ರಿತಾಲ

ಮಾಡು ಸಿಕ್ಕದಲ್ಲ ಮಾಡಿನ ಗೂಡು ಸಿಕ್ಕದಲ್ಲ
ಜೋಡು ಹೆಂಡರಿಗಂಜಿ ಓಡಿ ಹೋಗುವಾಗ
ಗೋಡೆ ಬಿದ್ದು ಬಯಲಾಯಿತಲ್ಲ।।

ಎಚ್ಚರಗೊಳಲಿಲ್ಲ ಮನವೆ ಹುಚ್ಚನಾದೆನಲ್ಲ
ಅಚ್ಚಿನೊಳಗೆ ಮೆಚ್ಚು ಮೆಚ್ಚಿನೊಳಗೆ ಅಚ್ಚು
ಕಿಚ್ಚೆದ್ದು ಹೋಯಿತಲ್ಲ।।

ಮುಪ್ಪು ಬಂದಿತಲ್ಲ ಪಾಯಸ ತಪ್ಪದೆ ಉಣಲಿಲ್ಲ
ತುಪ್ಪದ ಬಿಂದಿಗೆ ತಿಪ್ಪೆ ಮೇಲೆ
ದೊಪ್ಪನೆ ಬಿತ್ತಲ್ಲ।।

ಯೋಗವು ಬಂತಲ್ಲ ಬದುಕು ವಿಭಾಗವಾಯಿತಲ್ಲ
ಭೋಗಿಶಯನ ಶ್ರೀಪುರಂದರವಿಠಲನ
ಆಗ ನೆನೆಯಲಿಲ್ಲ।।

– ಪುರಂದರದಾಸ

ಬಿಲಹರಿ – ಏಕತಾಲ

ಜಗದ ದುಃಖ ಕಂಡು ಅದಕೆ ಪರಿಹಾರವನೊಂದನು।
ಹುಡುಕಿತಂದು ಬುದ್ಧದೇವ ಲೋಕಕೆ ಬೋಧಿಸಿದನು॥

ಕಾಯ-ವಾಕ್ಕು-ಮನಸಿನಿಂದ ಹಿಂಸೆಗೈಯದಿರುವುದು।
ವಿಶ್ವಶಾಂತಿ ಆತ್ಮಶಾಂತಿಗಿದುವೆ ವರ ಉಪಾಯವು॥

ಸದ್ಭಾವನೆ ಸದಾಚಾರ ಸುಖಕೆ ಪರಮ ಕಾರಣ।
ಅನೈತಿಕತೆ ಅನಾಚಾರದಿಂದ ಸುಖದ ಮಾರಣ॥

ಶುದ್ಧ ಮನದ ಮಿಡಿತದಲ್ಲಿ ಕಾಣು ದೇವಭಾಷೆಯ।
ವಿಕೃತ ವಚನವೆಲ್ಲ ನಿನ್ನ ಕೊಳಕು ಮನದ ಆಶಯ॥

ಸಾಧುಜನರ ಸಂಗದಿಂದ ಚಂದಗೊಳಿಸು ಮನವನು।
ಚಂದಗೊಂಡ ಮನದಿ ನೀನು ಉಣುವೆ ಶಾಂತಿಸುಧೆಯನು॥

ಸಂದುಹೋದ ದಿನಗಳನ್ನು ಸುಮ್ಮನೇಕೆ ಎಣಿಸುವೆ?।
ಮುಂದಿನ ದಿನದತ್ತ ವ್ಯರ್ಥ ಮನವನೇಕೆ ಹರಿಸುವೆ॥

ಇಂದಿನ ದಿನ ಕಣ್ಣಮುಂದೆ ಕೈಯ ಬೀಸಿ ನಿಂದಿದೆ।
ಕಾರ್ಯಶೀಲ ಸಾಧಕರಿಗೆ ಕಾಮಧೇನುವಾಗಿದೆ॥

ಸುಖವು ಕ್ಷಣಿಕ ದುಗುಡ ಕ್ಷಣಿಕ ಕ್ಷಣಿಕ ಇಹದ ಜೀವನ।
ಕ್ಷಣಕ್ಷಣವೂ ಸದ್ಗುಣವನೆ ಪಾಲಿಸೆ ನೀ ಪಾವನ॥

ಆತ್ಮವೆಂದರೇನು ಎಂಬ ರಗಳೆಯೆಲ್ಲ ಏತಕೆ?।
ರೀತಿಯರಿತು ಪ್ರೀತಿಯಿಂದ ಬದುಕು ನಡೆಸೆ ಸಾಲದೆ?॥

– ಸ್ವಾಮಿ ಪುರುಷೋತ್ತಮಾನಂದ

ಮಧುವಂತೀ – ಝಪತಾಲ

ಅದ್ವೈತಾಮೃತ ತತ್ತ್ವ ಪಯೋನಿಧಿ
ಆಚಾರ್ಯ ಶ್ರೀಶಂಕರ
ಆಸೇತು ಹಿಮಾಚಲ ಪರ್ಯಟನ
ಭಾರತವರ್ಷ ಶುಭಂಕರ

ಮಹಾವಿರಾಗಿ ಜ್ಞಾನವಾರಿಧಿ
ಆಚಾರ್ಯ ಶ್ರೀಶಂಕರ
ಉಪಮಾತೀತ ಅಸೀಮ ಗುಣನಿಧಿ
ಆಚಾರ್ಯ ಶ್ರೀಶಂಕರ

ಯುವರವಿ ಪ್ರಖರ ಪ್ರಾಜ್ವಲ್ಯಮಾನ
ಆಚಾರ್ಯ ಶ್ರೀಶಂಕರ
ವರಕವಿ-ಶಿಖರ ಅಗ್ರಮಾನ್ಯ ಹೇ
ಆಚಾರ್ಯ ಶ್ರೀಶಂಕರ

ಸದ್ಗುರು ಶಂಕರ ಶಿವಗುರು ಶಂಕರ
ಸದ್ಗುರು ಶಂಕರ ಶಿವಗುರು ಶಂಕರ
ವಹ್ನಿಜ್ವಾಲ ಸಮ ಶುದ್ಧಾತ್ಮ
ಪ್ರೇಮನೇತ್ರಯುತ ಪರಮಾತ್ಮ
ಗುರು ಶಂಕರ ಶ್ರೀಶಂಕರ
ಆಚಾರ್ಯ ಶ್ರೀಶಂಕರ
ನಮಾಮಿ ಗುರು ಶ್ರೀಶಂಕರ

– ಪದ್ಮಿನಿ ಮುರಳಿ

ಭೈರವೀ – ಝಪತಾಲ

ಲೋಕಕ್ಕೆ ಬರುವಾಸೆ ಭರವಸೆಯ ಬರಿಯಾಸೆ
ಬರಿದೆ ಬರುವುದರಲ್ಲಿ ಮುಗಿಯುತಿಹುದು।
ಚಿತ್ರದೊಳಗಿನ ಕಮಲಪುಷ್ಪವನು ತಾ ಕಂಡು
ಕಾಳಭೃಂಗವು ಭ್ರಮಿಸಿ ಸುತ್ತುತಿಹುದು॥

ಮಾವು ಮಾವೆನ್ನುತಲಿ ಬೇವ ತಿನಿಸುತ ತಾಯೆ
ಮರುಳು ಮಾತಿನ ಬಲೆಯ ನೀನೊಡ್ಡಿದೆ।
ಲೋಭಗೊಳ್ಳುತ ಸಿಹಿಗೆ ದಿನವೆಲ್ಲ ಕಾಯುತಲಿ
ಮುಖವ ಕಿವುಚುತ ಕೊನೆಗೆ ಕಹಿಯನುಂಡೆ॥

ಆಟದಾಸೆಯ ನೀನು ನನ್ನ ಎದೆಯೊಳು ತುಂಬಿ
ಆಟಕ್ಕೆ ನೀನನ್ನನೆಳೆದು ತಂದೆ।
ಆಟ ಮುಗಿದರೂ ನಿನ್ನ ಭರವಸೆಯು ತೀರದಿದೆ
ನಿನ್ನ ಮೋಸವನಿಂದು ಕಂಡುಕೊಂಡೆ॥

ಆದುದಾಯಿತು ಇನ್ನು ಈ ಜಗದ ಆಟದಲಿ
ಸಂಜೆಗತ್ತಲು ಬುವಿಯ ಮುಸುಕುತಿಹುದು।
ನಿನ್ನ ಈ ಕಂದನನು ತೋಳಲೆತ್ತಿಕೋ ಎಂದು
ರಾಮಪ್ರಸಾದನೆದೆ ಮೊರೆಯುತಿಹುದು॥

– ವಚನವೇದ

ದರಬಾರೀ ಕಾನಡಾ – ತೇವರಾ

ಅಂತರಂಗದ ಚಕ್ರವರ್ತಿ ಅನಂತ ಭಾವಸ್ವರೂಪನೇ
ಅಪಾರ ಕರುಣಾರಸ ಸುಧಾಂಬುಧಿ ಆರ್ತಜನ ವರದಾಯಕ॥

ಅಗಾಧ ಲೀಲಾ ರಸದಿ ರಂಜಿಪ ರಮ್ಯ ರತುನ ಶಿರೋಮಣಿ
ಅಗಮ್ಯ ಅನುಪಮ ಶೀಲವಾರಿಧಿ ಪರಮಹಂಸ ಪರುಷಮಣಿ॥

ಭಾವುಕರ ಚಿತ್ತಾಪಹಾರಕ ಭಾಗವತ ಜನ ಕಣ್ಮಣಿ
ಭಾವರಾಜ್ಯದ ವನದಿ ವಿಹರಿಪ ಭವ್ಯ ಚಿನ್ಮಯ ಮೂರ್ತಿ ನೀ॥

ಉದಯಸೂರ್ಯನ ಮೊದಲರೂಪವೇ ಮೈದಳೆದು ಬಂದಂತಿದೆ
ಭಕುತರೊಲವಿನ ನೋಟದಲಿ ಚಿರಸೊಬಗು ಸೂರೆಗೊಂಡಿದೆ॥

ನಿರುತ ನಿನ್ನಯ ಧ್ಯಾನವೆನ್ನಯ ಮನವ ಪಾವನಗೊಳಿಸಿದೆ
ಪರಮ ಪ್ರೀತಿಯ ಪ್ರಭುವೇ ನಿನ್ನಯ ಚರಣದಾಶ್ರಯ ಬಯಸಿದೆ॥

ಜ್ಞಾನಜ್ಯೋತಿಯ ಆರತಿಯ ಕೈಗಿತ್ತ ಕರುಣಾಮೂರ್ತಿಯೇ
ಹೃದಯದಾಳದಿ ಅಭಯ ವಚನದಿ ಮುದವನಿತ್ತ ಸ್ವಾಮಿಯೇ॥

ಎನಿತೋ ಜನುಮದಿ ತಪಿಸಿದ ಫಲ ನಿನ್ನ ಸನಿಹಕೆ ತಂದಿದೆ
ಕಳೆದುಕೊಳ್ಳುವೆನೇನೊ ಎಂಬಯ ಶಂಕೆ ಎದೆಯಲಿ ಕಾಡಿದೆ॥

ತಿಳಿಯದೆಡವಿದ ಶಿಶುವ ಮಾತೆಯು ಮಡಿಲೊಳೆತ್ತುವ ತೆರದಲಿ
ಮುನಿಸ ತಾಳದೆ ಕಡೆಗಣಿಸದಲೆ ಭವದ ತಾಪವ ನೀಗಿಸು॥

ಎನ್ನ ಹೃದಯದ ದುಗುಡ ನೀಗೈ ಅಂತರಂಗದ ಅಧಿಪತಿ
ಬಿಡದೆ ಕಾಪಿಡು ದೂರ ದೂಡದೆ ಮನ್ನಿಸೆನ್ನನು ಶ್ರೀಪತಿ॥

ನೊಂದ ಜೀವರ ನೋವ ಕಳೆಯಲು ಧರೆಗೆ ಬಂದಿಹೆಯಲ್ಲವೇ
ಕುಂದು ಕಳೆದೌದಾರ್ಯದಿಂದಲಿ ಪಾಲಿಸೆನ್ನುತ ಬೇಡುವೆ॥

ನಿನ್ನ ಅನುಪಮ ವದನ ಕಾಂತಿಯ ದರುಶನಕೆ ಹಾತೊರೆಯುವೆ
ನಿನ್ನ ಕಂಗಳ ಶಾಂತಿ ಸುಧೆಯಲಿ ಮಿಂದು ಧನ್ಯತೆ ಪಡೆಯುವೆ॥

ಕ್ಷಣ ಕ್ಷಣಕು ನಾ ನಿನ್ನ ನೆನೆಯುತ ನಿನ್ನತನದಲಿ ಬೆರೆಯುವೆ
ನೀನೆ ನಾನೈ ನಾನೆ ನೀನೈ ಎಂಬ ಭಾವದಿ ರಮಿಸುವೆ॥

ಜಯತು ಕರುಣಾಮಯನೆ ನಿರುತವು ಪೊರೆವ ಸಂತರ ಸದ್ಗುರು
ಜಯತು ಜಯತು ಜಯತು ಶಿವಗುರು ವಿಶ್ವವಂದ್ಯನೆ ಶ್ರೀಗುರು॥ **– ಅಂಜನಿ**

ರಾಮಪ್ರಿಯ – ತ್ರಿತಾಲ

ಸರ್ವದಾಭಿಗತಃ ಸದ್ಭಿಃ ಸಮುದ್ರ ಇವ ಸಿಂಧುಭಿಃ
ಆರ್ಯಃ ಸರ್ವಸಮಶ್ಚೈವ ಸದೈವ ಪ್ರಿಯದರ್ಶನಃ

ರಾಮಚಂದ್ರ ಪುರುಷೋತ್ತಮ ಜಯ ಜಯ
ರಾಮಚಂದ್ರ ಪುರುಷೋತ್ತಮ।
ಆನಂದಮಯ ಹೇ ಆನಂದಪೂರ್ಣ
ಜಯ ಪುರುಷೋತ್ತಮಾನಂದ॥

ಮಹಾಸಾಮ್ರಾಜ್ಯದಧಿಪತಿಗಳ
ವಾರಸನಾಗಲು ಮಹಿಗಿಳಿದೆ
ಮಹಿಯೊಳು ಮರಳಿನ ಕಣ ನಾನಾದರು
ಮಮತೆಯಲಿ ನೀ ಬಳಿ ಸುಳಿದೆ।
ಸುಳಿಯಲಿ ಸಿಲುಕಿ ಮರುಗಿ ಸೊರಗಿ
ನಾ ಕರಗದಂತೆ ಮೇಲೆಳೆದೆ
ಎಳಸುತನದ ಏನರಿಯದ ಎನ್ನಯ
ಎದೆಯ ರಾಗವಾಗುಳಿದೆ॥

ನಿನ್ನ ಸಖ್ಯಯುಗ ಸುವರ್ಣಯುಗವು
ನಿನ್ನ ಮಾತೆನಗೆ ವೇದವಾಕ್ಯವು
ನಿನ್ನದೆ ಕೃಪೆಯು ನನ್ನೀ ಇರವು
ನನ್ನುಸಿರು ನಿನ್ನ ಪದಕಂಕಿತವು॥

ರಾಮಚಂದ್ರ ಪುರುಷೋತ್ತಮ।
ರಾಮಚಂದ್ರ ಪುರುಷೋತ್ತಮ।
ರಾಮಚಂದ್ರ ಪುರುಷೋತ್ತಮ।
ರಾಮಚಂದ್ರ ಪುರುಷೋತ್ತಮ॥

– ಪದ್ಮಿನಿ ಮುರಳಿ

ತೋಟಕಾಷ್ಟಕಮ್

ದರಬಾರೀ ಕಾನಡಾ – ತ್ರಿತಾಲ

ವಿದಿತಾಖಿಲಶಾಸ್ತ್ರಸುಧಾಜಲಧೇ
ಮಹಿತೋಪನಿಷತ್ಕಥಿತಾರ್ಥನಿಧೇ।
ಹೃದಯೇ ಕಲಯೇ ವಿಮಲಂ ಚರಣಂ
ಭವ ಶಂಕರದೇಶಿಕ ಮೇ ಶರಣಮ್॥ ೧ ॥

ಕರುಣಾವರುಣಾಲಯ ಪಾಲಯ ಮಾಂ
ಭವಸಾಗರದುಃಖವಿದೂನಹೃದಮ್।
ರಚಯಾಖಿಲದರ್ಶನತತ್ತ್ವವಿದಂ
ಭವ ಶಂಕರದೇಶಿಕ ಮೇ ಶರಣಮ್॥ ೨ ॥

ಭವತಾ ಜನತಾ ಸುಹಿತಾ ಭವಿತಾ
ನಿಜಬೋಧವಿಚಾರಣಚಾರುಮತೇ।
ಕಲಯೇಶ್ವರಜೀವವಿವೇಕಮಿದಂ
ಭವ ಶಂಕರದೇಶಿಕ ಮೇ ಶರಣಮ್॥ ೩ ॥

ಭವ ಏವ ಭವಾನಿತಿ ಮೇ ನಿತರಾಂ
ಸಮಜಾಯತ ಚೇತಸಿ ಕೌತುಕಿತಾ।
ಮಮ ವಾರಯ ಮೋಹಮಹಾಜಲಧಿಂ
ಭವ ಶಂಕರದೇಶಿಕ ಮೇ ಶರಣಮ್॥ ೪ ॥

ಸುಕೃತೇಽಧಿಕೃತೇ ಬಹುಧಾ ಭವತೋ
ಭವಿತಾ ಸಮದರ್ಶನಲಾಲಸತಾ।
ಅತಿ ದೀನಮಿಮಂ ಪರಿಪಾಲಯ ಮಾಂ
ಭವ ಶಂಕರದೇಶಿಕ ಮೇ ಶರಣಮ್॥ ೫ ॥

ಜಗತೀಮವಿತುಂ ಕಲಿತಾಕೃತಯೋ
ವಿಚರಂತಿ ಮಹಾಹವ ಇಚ್ಛಲತಃ।
ಅಹಿಮಾಂಶುರಿವಾತ್ರ ವಿಭಾಸಿ ಗುರೋ
ಭವ ಶಂಕರದೇಶಿಕ ಮೇ ಶರಣಮ್॥ ೬ ॥

ಗುರುಪುಂಗವ ಪುಂಗವಕೇತನ ತೇ
ಸಮತಾಮಯತಾಂ ನ ಹಿ ಕೋऽಪಿ ಸುಧೀಃ।
ಶರಣಾಗತವತ್ಸಲ ತತ್ತ್ವನಿಧೇ
ಭವ ಶಂಕರದೇಶಿಕ ಮೇ ಶರಣಮ್॥ ೭ ॥

ವಿದಿತಾ ನ ಮಯಾ ವಿಶ್ವದೈಕಕಲಾ
ನ ಚ ಕಿಂಚನ ಕಾಂಚನಮಸ್ತಿ ಗುರೋ।
ದ್ರುತಮೇವ ವಿಧೇಹಿ ಕೃಪಾಂ ಸಹಜಾಂ
ಭವ ಶಂಕರದೇಶಿಕ ಮೇ ಶರಣಮ್॥ ೮ ॥

– ತೋಟಕಾಚಾರ್ಯ

ಪೀಲೂ – ಝಪತಾಲ

ನಮಸ್ತೇ ಸತೇ ಸರ್ವಲೋಕಾಶ್ರಯಾಯ
ನಮಸ್ತೇ ಚಿತೇ ವಿಶ್ವರೂಪಾತ್ಮಕಾಯ।
ನಮೋऽದ್ವೈತತತ್ತ್ವಾಯ ಮುಕ್ತಿಪ್ರದಾಯ
ನಮೋ ಬ್ರಹ್ಮಣೇ ವ್ಯಾಪಿನೇ ನಿರ್ಗುಣಾಯ॥

ತ್ವಮೇಕಂ ಶರಣ್ಯಂ ತ್ವಮೇಕಂ ವರೇಣ್ಯಂ
ತ್ವಮೇಕಂ ಜಗತ್ಕಾರಣಂ ವಿಶ್ವರೂಪಮ್।
ತ್ವಮೇಕಂ ಜಗತ್ಕರ್ತೃ ಪಾತೃ ಪ್ರಹರ್ತೃ
ತ್ವಮೇಕಂ ಪರಂ ನಿಶ್ಚಲಂ ನಿರ್ವಿಕಲ್ಪಮ್॥

ಭಯಾನಾಂ ಭಯಂ ಭೀಷಣಂ ಭೀಷಣಾನಾಂ
ಗತಿಃ ಪ್ರಾಣಿನಾಂ ಪಾವನಂ ಪಾವನಾನಾಮ್।
ಮಹೋಚ್ಚೈಃ ಪದಾನಾಂ ನಿಯಂತೃ ತ್ವಮೇಕಂ
ಪರೇಷಾಂ ಪರಂ ರಕ್ಷಣಂ ರಕ್ಷಣಾನಾಮ್॥

ತದೇಕಂ ಸ್ಮರಾಮಸ್ತದೇಕಂ ಭಜಾಮಃ
ತದೇಕಂ ಜಗತ್ಸಾಕ್ಷಿರೂಪಂ ನಮಾಮಃ।
ಸದೇಕಂ ನಿಧಾನಂ ನಿರಾಲಂಬಮೀಶಂ
ಭವಾಂಭೋಧಿಪೋತಂ ಶರಣ್ಯಂ ವ್ರಜಾಮಃ॥

– ಮಹಾನಿರ್ವಾಣತಂತ್ರದಿಂದ

ಭಜಯತಿರಾಜಸ್ತೋತ್ರದಿಂದ

ಭಜ ಯತಿರಾಜಂ ಭಜ ಯತಿರಾಜಂ
ಭಜ ಯತಿರಾಜಂ ಭವಭೀರೋ।
ಭಜ ಯತಿರಾಜಂ ಭಜ ಯತಿರಾಜಂ
ಭಜ ಯತಿರಾಜಂ ಭವಭೀರೋ॥

ಶ್ರೀರಂಗೇಶಜಯಾಶ್ರಯಕೇತುಃ
ಶ್ರಿತಜನಸಂರಕ್ಷಣಜೀವಾತುಃ।
ಭವಭಯಜಲಧೇರೇಷ ಹಿ ಸೇತುಃ
ಪದ್ಮಾನೇತುಃ ಪ್ರಣತೌ ಹೇತುಃ॥ ೧ ॥

ಆದೌ ಜಗದಾಧಾರಶ್ಶೇಷಃ
ತದನುಸುಮಿತ್ರಾನಂದನವೇಷಃ।
ತದುಪರಿಧೃತಹಲಮುಸಲವಿಶೇಷಃ
ತದನಂತರಮಭವದ್ಗುರುರೇಷಃ॥ ೨ ॥

ನಷ್ಟೇ ನಯನೇ ಕಸ್ಯಾಲೋಕಃ
ಚಿತ್ತೇ ಮತ್ತೇ ಕಸ್ಯ ವಿವೇಕಃ।
ಕ್ಷೀಣೇ ಪುಣ್ಯೇ ಕಸ್ಸುರಲೋಕಃ
ಕಾಮೇ ಧೂತೇ ಕಸ್ತವಶೋಕಃ॥ ೩ ॥

ಮಂತ್ರದ್ರವ್ಯವಿಶುದ್ಧೋ ಯಾಗಃ
ಸರ್ವಾರಂಭವಿರಾಗಸ್ತ್ಯಾಗಃ।
ಕರ್ತುಂ ಶಕ್ಯೋ ನ ಕಲೌ ಯೋಗಃ
ಕಿಂತು ಯತೀಶಗುಣಾಮೃತಭೋಗಃ॥ ೪ ॥

ಮನುಜಪತಿಂ ವಾ ದಿಗಧಿಪತಿಂ ವಾ
ಜಲಜಭವಂ ವಾ ಜಗದಧಿಪಂ ವಾ।
ಮಮತಾಽಹಂಕೃತಿಮಲಿನೋ ಲೋಕಃ
ನಿಂದತಿ ನಿಂದತಿ ನಿಂದತ್ಯೇವ॥ ೫ ॥

ಪಾಪಹತೋ ವಾ ಪುಣ್ಯಯುತೋ ವಾ
ಸುರನರತಿರ್ಯಗ್ಜಾತಿಗತೋ ವಾ।
ರಾಮಾನುಜಪದತೀರ್ಥಾನ್ಮುಕ್ತಿಂ
ವಿಂದತಿ ವಿಂದತಿ ವಿಂದತ್ಯೇವ॥ ೬ ॥

ಕಾಷಾಯಾಂಬರಕವಚಿತಗಾತ್ರಂ
ಕಲಿತಕಮಂಡಲುದಂಡಪವಿತ್ರಮ್।
ವಿಧೃತಶಿಖಾಹರಿಣಾಜಿನಸೂತ್ರಂ
ವ್ಯಾಖ್ಯಾತದ್ವೈಪಾಯನಸೂತ್ರಮ್॥ ೭ ॥

ಸಂತ್ಯಜ ಸಕಲಮುಪಾಯಾಚರಣಂ
ವ್ರಜ ರಾಮಾನುಜಚರಣೌ ಶರಣಮ್।
ಪಶ್ಯಸಿ ತಮಸಃ ಪಾರಂ ನಿತ್ಯಂ
ಸತ್ಯಂ ಸತ್ಯಂ ಪುನರಪಿಸತ್ಯಮ್॥ ೮ ॥

– ಕೌಂಡಿನ್ಯ ರಂಗಾರ್ಯ

ಶ್ರೀಮಧ್ವಾಷ್ಟಕಮ್

ಅಜ್ಞಾನನಾಶಾಯ ಸತಾಂ ಜನಾನಾಂ
ಕೃತಾವತಾರಾಯ ವಸುಂಧರಾಯಾಮ್।
ಮಧ್ವಾಭಿಧಾನಾಯ ಮಹಾಮಹಿಮ್ನೇ
ಹತಾರಿಸಂಘಾಯ ನಮೋಽನಿಲಾಯ॥ ೧ ॥

ಯೇನ ಸ್ವಸಿದ್ಧಾಂತಸರೋಜಮದ್ಧಾ
ವಿಕಾಸಿತಂ ಗೋಭಿರಲಂ ವಿಶುದ್ಧೈಃ।
ದುಸ್ತರ್ಕನೀಹಾರಕುಲಂ ಚ ಭಿನ್ನಂ
ತಸ್ಮೈ ನಮೋ ಮಧ್ವದಿವಾಕರಾಯ॥ ೨ ॥

ಪ್ರಪನ್ನತಾಪಪ್ರಶಮೈಕಹೇತುಂ
ದುರ್ವಾದಿವಾದೀಂಧನಧೂಮಕೇತುಮ್।
ನಿರಂತರಂ ನಿರ್ಜಿತಮೀನಕೇತುಂ
ನಮಾಮ್ಯಹಂ ಮಧ್ವಮುನಿಪ್ರಕಾಂಡಮ್॥ ೩ ॥

ಶಾಂತಂ ಮಹಾಂತಂ ನತಪಾತಕಾಂತಂ
ಕಾಂತಂ ನಿತಾಂತಂ ಕಲಿತಾಗಮಾಂತಮ್।
ಸ್ವಾಂತಂ ನಯಂತಂ ತ್ರಿಪುರಾರಿಕಾಂತಂ
ಕಾಂತಂ ಶ್ರಿಯೋ ಮಧ್ವಗುರುಂ ನಮಾಮಿ॥ ೪ ॥

ಪುನ್ನಾಮನಾಮ್ನೇ ಮುರವೈರಿಧಾಮ್ನೇ
ಸಂಪೂರ್ಣನಾಮ್ನೇ ಸಮಧೀತನಾಮ್ನೇ।
ಸಂಕೀರ್ತಿತಾಧೋಕ್ಷಜಪುಣ್ಯನಾಮ್ನೇ
ನಮೋಽಸ್ತು ಮಧ್ವಾಯ ವಿಮುಕ್ತಿನಾಮ್ನೇ॥ ೫ ॥

ಸನ್ಮಾನಸಂಸಜ್ಜನತಾಶರಣ್ಯಂ
ಸನ್ಮಾನಸಂತೋಷಿತರಾಮಚಂದ್ರಮ್।
ಸನ್ಮಾನಸವ್ಯಕ್ತಪದಂ ಪ್ರಶಾಂತಂ
ನಮಾಮ್ಯಹಂ ಮಧ್ವಮುನಿಪ್ರಕಾಶಮ್॥ ೬ ॥

ಸಂಸ್ತೂಯಮಾನಾಯ ಸತಾಂ ಸಮೂಹೈ-
ಶ್ಚಂದ್ರಾಯಮಾನಾಯ ಚಿದಂಬುರಾಶೇಃ।
ದೀಪಾಯಮಾನಾಯ ಹರಿಂ ದಿದೃಕ್ಷೋ-
ರಲಂ ನಮೋ ಮಧ್ವಮುನೀಶ್ವರಾಯ॥ ೭ ॥

ಗುಣೈಕಸಿಂಧುಂ ಗುರುಪುಂಗವಂ ತಂ
ಸದೈಕಬಂಧುಂ ಸಕಲಾಕಲಾಪಮ್।
ಮನೋಜಬಂಧೋಃ ಶ್ರಿತಪಾದಪದ್ಮಂ
ನಮಾಮ್ಯಹಂ ಮಧ್ವಮುನಿಂ ವರೇಣ್ಯಮ್॥ ೮ ॥

ಮಧ್ವಾಷ್ಟಕಂ ಪುಣ್ಯಮಿದಂ ತ್ರಿಸಂಧ್ಯಂ
ಪಠಂತ್ಯಲಂ ಭಕ್ತಿಯುತಾ ಜನಾ ಯೇ।
ತೇಷಾಮಭೀಷ್ಟಂ ವಿತನೋತಿ ವಾಯುಃ
ಶ್ರೀಮಧ್ವನಾಮಾ ಗುರುಪುಂಗವೋಽಯಮ್॥ ೯ ॥

– ತ್ರಿವಿಕ್ರಮಪಂಡಿತಾಚಾರ್ಯ

ಕೌಪೀನಪಂಚಕಮ್

ವೇದಾಂತವಾಕ್ಯೇಷು ಸದಾ ರಮಂತಃ
ಭಿಕ್ಷಾನ್ನಮಾತ್ರೇಣ ಚ ತುಷ್ಟಿಮಂತಃ।
ಅಶೋಕಮಂತಃ ಕರಣೇ ಚರಂತಃ
ಕೌಪೀನವಂತಃ ಖಲು ಭಾಗ್ಯವಂತಃ॥ ೧ ॥

ಮೂಲಂ ತರೋಃ ಕೇವಲಮಾಶ್ರಯಂತಃ
ಪಾಣಿದ್ವಯಂ ಭೋಕ್ತುಮಮಂತ್ರಯಂತಃ।
ಕಂಥಾಮಿವ ಶ್ರೀಮಪಿ ಕುತ್ಸಯಂತಃ
ಕೌಪೀನವಂತಃ ಖಲು ಭಾಗ್ಯವಂತಃ॥ ೨ ॥

ಸ್ವಾನಂದಭಾವೇ ಪರಿತುಷ್ಟಿಮಂತಃ
ಸುಶಾಂತಸರ್ವೇಂದ್ರಿಯವೃತ್ತಿಮಂತಃ।
ಅಹರ್ನಿಶಂ ಬ್ರಹ್ಮಸುಖೇ ರಮಂತಃ
ಕೌಪೀನವಂತಃ ಖಲು ಭಾಗ್ಯವಂತಃ॥ ೩ ॥

ದೇಹಾದಿಭಾವಂ ಪರಿವರ್ತಯಂತಃ
ಸ್ವಾತ್ಮಾನಮಾತ್ಮನ್ಯವಲೋಕಯಂತಃ।
ನಾಂತಂ ನ ಮಧ್ಯಂ ನ ಬಹಿಃ ಸ್ಮರಂತಃ
ಕೌಪೀನವಂತಃ ಖಲು ಭಾಗ್ಯವಂತಃ॥ ೪ ॥

ಬ್ರಹ್ಮಾಕ್ಷರಂ ಪಾವನಮುಚ್ಚರಂತಃ
ಬ್ರಹ್ಮಾಹಮಸ್ಮೀತಿ ವಿಭಾವಯಂತಃ।
ಭಿಕ್ಷಾಶಿನೋ ದಿಕ್ಷು ಪರಿಭ್ರಮಂತಃ
ಕೌಪೀನವಂತಃ ಖಲು ಭಾಗ್ಯವಂತಃ॥ ೫ ॥

– ಶಂಕರಾಚಾರ್ಯ

ಬಾಗೇಶ್ರೀ – ತೇವರಾ

ಪಾಲಯಸ್ವ ನಿಪಾಲಯಸ್ವ
ನಿಪಾಲಯಸ್ವ ರಮಾಪತೇ।
ವಾದಿರಾಜಮುನೀಂದ್ರವಂದಿತ
ವಾಜಿವಕ್ತ್ರ ನಮೋಽಸ್ತು ತೇ॥

ಮಧ್ವಹೃತ್ಕಮಲಸ್ಥಿತಂ ವರ-
ದಾಯಕಂ ಕರುಣಾಕರಮ್।
ಲಕ್ಷ್ಮಣಾಗ್ರಜಮಕ್ಷಯಂ ದುರಿತ-
ಕ್ಷಯಂ ಕಮಲೇಕ್ಷಣಮ್॥

ರಾವಣಾಂತಕಮವ್ಯಯಂ ವರ-
ಜಾನಕೀರಮಣಂ ವಿಭುಮ್।
ಅಂಜನಾಸುತ-ಪಾಣಿಕಂಜ ನಿ-
ಷೇವಿತಂ ಪ್ರಣಮಾಮ್ಯಹಮ್॥

ದೇವಕೀತನಯಂ ನಿಜಾರ್ಜುನ-
ಸಾರಥಿಂ ಗರುಡಧ್ವಜಮ್।
ಪೂತನಾ-ಶಕಟಾಸುರಾದಿ
ಖಲಾಂತಕಂ ಪುರುಷೋತ್ತಮಮ್॥

ದುಷ್ಟಕಂಸನಿಮರ್ದನಂ ವರ-
ರುಕ್ಮಿಣೀಪತಿಮಚ್ಯುತಮ್।
ಭೀಮಸೇನ-ಕರಾಂಬುಜೇನ ಸು-
ಸೇವಿತಂ ಪ್ರಣಮಾಮ್ಯಹಮ್॥

ಜ್ಞಾನಮುಕ್ತಿಸುಭಕ್ತಿದಂ ವರ-
ಬಾದರಾಯಣಮವ್ಯಯಮ್।
ಕೋಟಿಭಾಸ್ಕರಭಾಸಮಾನ-
ಕಿರೀಟಕುಂಡಲಮಂಡಿತಮ್॥

ವಾಕ್ಸುದರ್ಶನತಃ ಕಲೇಃ ಶಿರ-
ಘಾತಕಂ ರಮಯಾ ಯುತಮ್।
ಮಧ್ವಸತ್ಕರಕಂಜಪೂಜಿತ-
ಮಕ್ಷಯಂ ಪ್ರಣಮಾಮ್ಯಹಮ್॥

ನಿರ್ವಾಣಷಟ್ಕಮ್

ಮನೋಬುದ್ಧ್ಯಹಂಕಾರ ಚಿತ್ತಾನಿ ನಾಹಂ
ನ ಚ ಶ್ರೋತ್ರ ಜಿಹ್ವೇ ನ ಚ ಘ್ರಾಣ ನೇತ್ರೇ।
ನ ಚ ವ್ಯೋಮ ಭೂಮಿರ್ನ ತೇಜೋ ನ ವಾಯುಃ
ಚಿದಾನಂದರೂಪಃ ಶಿವೋಽಹಂ ಶಿವೋಽಹಮ್॥ ೧ ॥

ನ ಚ ಪ್ರಾಣಸಂಜ್ಞೋ ನ ವೈ ಪಂಚವಾಯುಃ
ನ ವಾ ಸಪ್ತಧಾತುರ್ನ ವಾ ಪಂಚಕೋಶಃ।
ನ ವಾಕ್ಪಾಣಿಪಾದೌ ನ ಚೋಪಸ್ಥಪಾಯುಃ
ಚಿದಾನಂದರೂಪಃ ಶಿವೋಽಹಂ ಶಿವೋಽಹಮ್॥ ೨ ॥

ನ ಮೇ ದ್ವೇಷರಾಗೌ ನ ಮೇ ಲೋಭಮೋಹೌ
ಮದೋ ನೈವ ಮೇ ನೈವ ಮಾತ್ಸರ್ಯಭಾವಃ।
ನ ಧರ್ಮೋ ನ ಚಾರ್ಥೋ ನ ಕಾಮೋ ನ ಮೋಕ್ಷಃ
ಚಿದಾನಂದರೂಪಃ ಶಿವೋಽಹಂ ಶಿವೋಽಹಮ್॥ ೩ ॥

ನ ಪುಣ್ಯಂ ನ ಪಾಪಂ ನ ಸೌಖ್ಯಂ ನ ದುಃಖಂ
ನ ಮಂತ್ರೋ ನ ತೀರ್ಥೋ ನ ವೇದಾ ನ ಯಜ್ಞಃ।
ಅಹಂ ಭೋಜನಂ ನೈವ ಭೋಜ್ಯಂ ನ ಭೋಕ್ತಾ
ಚಿದಾನಂದರೂಪಃ ಶಿವೋಽಹಂ ಶಿವೋಽಹಮ್॥ ೪ ॥

ನ ಮೇ ಮೃತ್ಯುಶಂಕಾ ನ ಮೇ ಜಾತಿಭೇದಃ
ಪಿತಾ ನೈವ ಮೇ ನೈವ ಮಾತಾ ನ ಜನ್ಮ।
ನ ಬಂಧುರ್ನಮಿತ್ರಂ ಗುರುರ್ನೈವ ಶಿಷ್ಯಃ
ಚಿದಾನಂದರೂಪಃ ಶಿವೋಽಹಂ ಶಿವೋಽಹಮ್॥ ೫ ॥

ಅಹಂ ನಿರ್ವಿಕಲ್ಪೋ ನಿರಾಕಾರರೂಪೋ
ವಿಭುತ್ವಾಚ್ಚ ಸರ್ವತ್ರ ಸರ್ವೇಂದ್ರಿಯಾಣಾಮ್।
ನ ಚಾ ಸಂಗತಂ ನೈವ ಮುಕ್ತಿರ್ನ ಮೇಯಃ
ಚಿದಾನಂದರೂಪಃ ಶಿವೋಽಹಂ ಶಿವೋಽಹಮ್॥ ೬ ॥

– ಶಂಕರಾಚಾರ್ಯ

ಗೀತಾ ಆರತಿ

ಭಜನೆ – ತ್ರಿತಾಲ

ಜಯ ಭಗವದ್ಗೀತೆ ಮಾತೇ ಜಯ ಭಗವದ್ಗೀತೆ।
ಹರಿ-ಹಿಯ-ಕಮಲ-ವಿಹಾರಿಣಿ ಸುಂದರ ಸುಪುನೀತೆ॥ ಜಯ॥

ಕರ್ಮ-ಸುಮರ್ಮ-ಪ್ರಕಾಶಿನಿ ಕಾಮಾಸಕ್ತಿಹರಾ।
ತತ್ತ್ವಜ್ಞಾನ-ವಿಕಾಶಿನಿ ವಿದ್ಯಾ ಬ್ರಹ್ಮ ಪರಾ॥ ಜಯ॥

ನಿಶ್ಚಲ-ಭಕ್ತಿ-ವಿಧಾಯಿನಿ ನಿರ್ಮಲ ಮಲಹಾರೀ।
ಶರಣ-ರಹಸ್ಯ-ಪ್ರದಾಯಿನಿ ಸಬ ವಿಧಿ ಸುಖಕಾರೀ॥ ಜಯ॥

ರಾಗ-ದ್ವೇಷ-ವಿದಾರಿಣಿ ಕಾರಿಣಿ ಮೋದ ಸದಾ।
ಭವ-ಭಯ-ಹಾರಿಣಿ ತಾರಿಣಿ ಪರಮಾನಂದಪ್ರದಾ॥ ಜಯ॥

ಆಸುರ-ಭಾವ-ವಿನಾಶಿನಿ ನಾಶಿನಿ ತಮ-ರಜನೀ।
ದೈವೀ ಸದ್ಗುಣದಾಯಿನಿ ಹರಿ ರಸಿಕಾ ಸಜನೀ॥ ಜಯ॥

ಸಮತಾ ತ್ಯಾಗ ಸಿಖಾವನಿ ಹರಿ-ಮುಖಕೀ ವಾಣೀ।
ಸಕಲ ಶಾಸ್ತ್ರಕೀ ಸ್ವಾಮಿನಿ ಶ್ರುತಿಯೋಂಕೀ ರಾಣೀ॥ ಜಯ॥

ದಯಾ-ಸುಧಾ ಬರಸಾವನಿ ಮಾತು ಕೃಪಾ ಕೀಜೈ।
ಹರಿ-ಪದ-ಪ್ರೇಮ ದಾನ ಕರ ಅಪನೋ ಕರ ಲೀಜೈ॥ ಜಯ॥

ನವರೋಜ್ – ಆದಿತಾಲ

ಚಿಂತಾ ನಾಸ್ತಿ ಕಿಲ ತೇಷಾಂ॥

ಶಮದಮಕರುಣಾಸಂಪೂರ್ಣಾನಾಂ
ಸಾಧುಸಮಾಗಮಸಂಕೀರ್ಣಾನಾಂ॥

ಕಾಲತ್ರಯಜಿತಕಂದರ್ಪಾಣಾಂ
ಖಂಡಿತಸರ್ವೇಂದ್ರಿಯದರ್ಪಾಣಾಂ॥

ಪರಮಹಂಸಗುರುಪದಚಿತ್ತಾನಾಂ
ಬ್ರಹ್ಮಾನಂದಾಮೃತಮತ್ತಾನಾಂ॥

– ಸದಾಶಿವ ಬ್ರಹ್ಮೇಂದ್ರ

ಬೇಹಾಗ್ – ತ್ರಿತಾಲ

ನಾಮ ಜಪನ ಕ್ಯೋ ಛೋಡ್ ದಿಯಾ ತುಮ್॥

ಕ್ರೋಧ ನ ಛೋಡಾ ಝೂಠ ನ ಛೋಡಾ
ಸತ್ಯವಚನ ಕ್ಯೋ ಛೋಡ್ ದಿಯಾ॥

ಝೂಠೇ ಜಗಮೇ ದಿಲ ಲಲಚಾ ಕರ್
ಅಸಲ ವತನ ಕ್ಯೋ ಛೋಡ ದಿಯಾ।
ಕೌಡೀ ಕೋ ತೂ ಖೂಬ್ ಸಮ್ಹಾಲಾ
ಲಾಲ್ ರತನ್ ಕ್ಯೋ ಛೋಡ್ ದಿಯಾ॥

ಜಿಹಿ ಸುಮಿರನತೇ ಅತಿ ಸುಖ ಪಾವೇ
ಸೋ ಸುಮಿರನ ಕ್ಯೋ ಛೋಡ್ ದಿಯಾ।
ಖಾಲಸ ಇಕ ಭಗವಾನ ಭರೋಸೇ
ತನ ಮನ ಧನ ಕ್ಯೋ ನ ಛೋಡ್ ದಿಯಾ॥
– **ಖಾಲಸ**

ಭೈರವೀ – ಕವಾಲೀ

ಪ್ರಭೂ ಮೇರೇ ಅವಗುಣ ಚಿತ ನ ಧರೋ॥

ಸಮದರಶೀ ಹೈ ನಾಮ ತಿಹಾರೋ
ಚಾಹೇ ತೋ ಪಾರ ಕರೋ॥

ಇಕ ಲೋಹಾ ಪೂಜಾ ಮೇ ರಾಖತ
ಇಕ ರಹತ ವ್ಯಾಧ ಘರ ಪರೋ।
ಪಾರಸ ಕೇ ಮನ ದ್ವಿಧಾ ನಹೀ ಹೈ
ದುಹು ಏಕ ಕಾಂಚನ ಕರೋ॥

ಇಕ ನದಿಯಾ ಇಕ ನಾರ ಕಹಾವತ
ಮೈಲೋ ನೀರ ಭರೋ।
ಜಬ ಮಿಲಿ ದೋನೋ ಏಕ ವರಣ ಭಯೇ
ಸುರಸರಿ ನಾಮ ಪರೋ॥

ಇಕ ಜೀವ ಇಕ ಬ್ರಹ್ಮ ಕಹಾವತ
ಸೂರದಾಸ ಝುಗರೋ।
ಅಜ್ಞಾನಸೇ ಭೇದ ಹೋವೇ
ಜ್ಞಾನಿ ಕಾಹೇ ಭೇದ ಕರೋ॥

– ಸೂರದಾಸ

ಝಿಂಝೋಟಿ – ಏಕತಾಲ

ನಾಥ ತುಮಿ ಸರ್ವಸ್ವ ಆಮಾರ್॥

ಪ್ರಾಣಾಧಾರ ಸಾರಾತ್ಸಾರ
ನಾಹಿ ತೋಮಾ ಬಿನೇ ಕೇಹೊ ತ್ರಿಭುವನೇ
ಬೋಲಿಬಾರ್ ಆಪನಾರ್॥

ತುಮಿ ಸುಖ ಶಾಂತಿ ಸಹಾಯ ಸಂಬಲ್
ಸಂಪದ ಐಶ್ವರ್ಯ ಜ್ಞಾನ ಬುದ್ಧಿ ಬಲ್।
ತುಮಿ ವಾಸಗೃಹ ಆರಾಮೇರ ಸ್ಥಲ್
ಆತ್ಮೀಯ ಬಂಧು ಪರಿವಾರ್॥

ತುಮಿ ಇಹಕಾಲ ತುಮಿ ಪರಿತ್ರಾಣ
ತುಮಿ ಪರಕಾಲ ತುಮಿ ಸ್ವರ್ಗಧಾಮ।
ತುಮಿ ಶಾಸ್ತ್ರವಿಧಿ ಗುರು ಕಲ್ಪತರು
ಅನಂತ ಸುಖೇರ್ ಆಧಾರ್॥

ತುಮಿ ಹೇ ಉಪಾಯ್ ತುಮಿ ಹೇ ಉದ್ದೇಶ್
ತುಮಿ ಸ್ರಷ್ಟಾ ಪಾತಾ ತುಮಿ ಹೇ ಉಪಾಸ್ಯ।
ದಂಡದಾತಾ ಪಿತಾ ಸ್ನೇಹಮಯೀ ಮಾತಾ
ಭವಾರ್ಣವೇ ಕರ್ಣಧಾರ್॥

– ತ್ರೈಲೋಕ್ಯನಾಥ ಸನ್ಯಾಲ

ಸಿಂಧುಭೈರವೀ - ತ್ರಿತಾಲ

ಖೇಲತಿ ಬ್ರಹ್ಮಾಂಡೇ ಭಗವಾನ್॥

ಹಂಸಸ್ಸೋऽಹಂ ಹಂಸಸ್ಸೋऽಹಂ
ಹಂಸಸ್ಸೋऽಹಂ ಸೋऽಹಮಿತಿ॥

ಪರಮಾತ್ಮಾಹಂ ಪರಿಪೂರ್ಣೋऽಹಂ
ಬ್ರಹ್ಮೈವಾಹಮಹಂ ಬ್ರಹ್ಮೇತಿ॥

ತ್ವಕ್-ಚಕ್ಷುಃ-ಶ್ರುತಿ-ಜಿಹ್ವಾಘ್ರಾಣೇ
ಪಂಚವಿಧಪ್ರಾಣೋಪಸ್ಥಾನೇ॥

ಶಬ್ದ-ಸ್ಪರ್ಶ-ರಸಾದಿಕ-ಮಾತ್ರೇ
ಸಾತ್ತ್ವಿಕ-ರಾಜಸ-ತಾಮಸ-ಮಿತ್ರೇ॥

ಬುದ್ಧಿಮನಶ್ಚಿತ್ತಾಹಂಕಾರೇ
ಭೂ-ಜಲ-ತೇಜೋ-ಗಗನ-ಸಮೀರೇ॥

ಪರಮಹಂಸರೂಪೇಣ ವಿಹರ್ತಾ
ಬ್ರಹ್ಮಾ ವಿಷ್ಣು ರುದ್ರಾದಿಕ-ಕರ್ತಾ॥

- ಸದಾಶಿವ ಬ್ರಹ್ಮೇಂದ್ರ

ಮಿಶ್ರ ಅಮೃತವರ್ಷಿಣೀ - ತ್ರಿತಾಲ

ಸ್ಥಿರತಾ ನ ಹಿ ನ ಹಿ ರೇ ಮಾನಸ
ಸ್ಥಿರತಾ ನ ಹಿ ನ ಹಿ ರೇ॥

ತಾಪತ್ರಯಸಾಗರಮಗ್ನಾನಾಂ
ದರ್ಪಾಹಂಕಾರವಿಲಗ್ನಾನಾಮ್॥

ವಿಷಯಪಾಶ-ವೇಷ್ಟಿತಚಿತ್ತಾನಾಂ
